


ಕಾಂ. ಬಿ.ಟಿ. ರಣದಿವೆ ಸಂದದ ನೆನಪು

ಡಿಸೆಂಬರ್19 ಕಾಂ.ಬಿ.ಟಿ.ರಣದಿವೆಯವರ ಜನ್ಮ ದಿನ. ಕಮ್ಯುನಿಸ್ಟ್ ಚಳುವಳಿಯ ಧೀರೋದಾತ್ತ ನಾಯಕ ತಮ್ಮ ಸೈದ್ಧಾಂತಿಕ ಪ್ರಖರತೆಯಿಂದ ವಿಶ್ವ ಕಮ್ಯುನಿಸ್ಟ್ ಚಳುವಳಿಯಲ್ಲಿ ತಮ್ಮ ಅಚ್ಚೊತ್ತಿದ್ದ ದೀಮಂತ. ಕಾಂ.ಬಿ.ಟಿ. ರಣದಿವೆಯವರು ಅಗಲಿಕೆಯಾದ ದಿನದಿಂದ ದಿನಕ್ಕೆ ಅವರ ಚಿಂತನೆಯ ಕೊರತೆ ಮಹತ್ವ ಹೆಚ್ಚು ಹೆಚ್ಚು ಅರಿವಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಅಸಂಖ್ಯ ಬರವಣಿಗೆಗಳು, ಭಾಷಣಗಳತ್ತ ಕಣ್ಣು ಹೊರಳಿಸೋಣ. ಭಾರತದಲ್ಲಿ ಕ್ರಾಂತಿಯ ಸಾಧನೆಗೆ 60 ವರ್ಷಗಳ ಕಾಲ ನಿರಂತರ ಮಾರ್ಗದರ್ಶನ ಮಾಡಿದ ನಾಯಕನನ್ನು ಮತ್ತೆ ನೆನೆಯೋಣ.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 ಸಂಚಿಕೆ 50 ಡಿಸೆಂಬರ್ 16, 1990 ರೂ. 1-50

ಮತ್ತೆ ಕೋಮುವಾದಿಗಳ ದುಷ್ಟ ತಾಂಡವ

ರಾಜ್ಯಮಟ್ಟದಲ್ಲೂ ಎಡಪಕ್ಷಗಳು, ಜನತಾದಳದ ಸಮನ್ವಯ ಸಮಿತಿ

ಕೇಂದ್ರಮಟ್ಟದಲ್ಲಿ ಎಡಪಕ್ಷಗಳು ಹಾಗೂ ಜನತಾದಳದ ಸಮನ್ವಯ ಸಮಿತಿ ಸ್ಥಾಪಿಸಲಾಗುತ್ತಿರುವಂತೆಯೇ ರಾಜ್ಯದಲ್ಲೂ ಸಿಪಿಐ(ಎಂ), ಸಿಪಿಐ ಹಾಗೂ ಜನತಾದಳದ ಒಂದು ಸಮನ್ವಯ ಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ. ಈ ಸಮಿತಿ ಮಂಡಲ ವರದಿ, ಅಯೋಧ್ಯೆ ವಿವಾದ ಮತ್ತಿತರ ಈಗಾಗಲೇ ಸಮಾನ ಅಭಿಪ್ರಾಯ ಮೂಡಿ ಬಂದಿರುವ ಇತರ ರಾಜಕೀಯ, ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟಗಳನ್ನು ರೂಪಿಸಲಿದೆ.

ಡಿಸೆಂಬರ್ 7 ರಂದು ಈ ಮೂರು ಪಕ್ಷಗಳ ಮುಖಂಡರು ಸೇರಿ ನಡೆಸಿದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು. ಜನತಾದಳದ ಜೆ.ಎಚ್.ಪಟೇಲ್ ಹಾಗೂ ಡಿ.ಬಿ. ಚಂದ್ರೇಗೌಡ, ಸಿಪಿಐ(ಎಂ)ನ ಪಿ.ರಾಮಚಂದ್ರರಾವ್, ಎಸ್.ಸೂರ್ಯನಾರಾಯಣ ರಾವ್, ಸಿ.ನಂಜುಂಡಪ್ಪ ಹಾಗೂ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಸಿಪಿಐ ನ ಎಲ್.ಪಿ. ಜಗದೀಶ್ ಹಾಗೂ ಎಂ.ಸಿ. ವೆಂಕಟರಾಮ್ ಈ ಸಭೆಯಲ್ಲಿ ಭಾಗವಹಿಸಿದ ಮುಖಂಡರು.

ಪಂಚಾಯತಿ ರಾಜ್ಯ, ಚಿನ್ನಪ್ಪರೆಡ್ಡಿ ವರದಿ, ಬೆಲೆಯೇರಿಕೆ ಹಾಗೂ ರಾಜ್ಯ ಸರಕಾರದ ವಿಶ್ವಾಸ ಇತ್ಯಾದಿ ವಿಷಯಗಳ ಮೇಲೆ ಇತರ ರಾಜಕೀಯ ಗುಂಪುಗಳನ್ನು ಒಳಗೊಳ್ಳಲು ಸಮಿತಿ ಪ್ರಯತ್ನಿಸುತ್ತದೆ.

ಡಿಸೆಂಬರ್ 17 ರಂದು ಪಂಚಾಯಿತಿ ರಾಜ್ಯ ತಿದ್ದುಪಡಿ ಮಸೂದೆ ವಿರುದ್ಧ ಬೃಹತ್ ರ್‍ಯಾಲಿ ನಡೆಯಲಿದ್ದು ಅದರಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ಸದಸ್ಯರು ಮಂಡಳ ಪ್ರಧಾನರು, ಉಪಪ್ರಧಾನರು, ಸದಸ್ಯರು ತಾಲೂಕು ಪಂಚಾಯಿತಿ ಸಮಿತಿ ಸದಸ್ಯರು ಭಾಗವಹಿಸಲಿದ್ದಾರೆ. ಮೂರೂ ಪಕ್ಷಗಳ ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿ ಇದರಲ್ಲಿ ಭಾಗವಹಿಸಬೇಕೆಂದು ಸಮಿತಿ ಕರೆ ನೀಡಿದೆ.

ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಈ ವಾರ ಉತ್ತರ ಕರ್ನಾಟಕಕ್ಕೆ ಭೇಟಿ ನೀಡಲಿದ್ದು ಅವರ ಭೇಟಿಯನ್ನು ಯಶಸ್ವಿಗೊಳಿಸಬೇಕೆಂದು ಸಮಿತಿ ಕರೆ ನೀಡಿದೆ. ಚಿಕೋಡಿ ಚುನಾವಣೆಯಲ್ಲಿ ದಳದ ಅಭ್ಯರ್ಥಿಯ ಯಶಸ್ಸಿಗೆ ದುಡಿಯಬೇಕೆಂದೂ ಸಮಿತಿ ಕರೆ ನೀಡಿದೆ.

ಕಾಂಗ್ರೆಸ್(ಐ)ನ ವಂಚಕರೂಪವನ್ನು ಬಿಜೆಪಿಯ ಕೋಮುವಾದಿ ರಾಜಕೀಯವನ್ನು ಬಯಲಿಗೆಳೆಯುವ ಸಮಯವೀಗ ಬಂದಿದೆ ಎಂದು ಸಮನ್ವಯ ಸಮಿತಿ ಹೇಳಿದೆ.

ಡಿಸೆಂಬರ್ 6 --'ಕರಸೇವೆ'ಯ ಎರಡನೇ ಘಟ್ಟ 'ಶಾಂತಿಯುತ'ವಾಗಿ ಆರಂಭವಾಯಿತು ಎಂಬ ಸುದ್ದಿಯ ಮರುದಿನದಿಂದಲೇ ದೇವರ, ಧರ್ಮದ ಹೆಸರಿನಲ್ಲಿ ಕೊಲೆ-ಸುಲಿಗೆಗಳ ಭಯಾನಕ ಸುದ್ದಿಗಳು.

ಡಿಸೆಂಬರ್ 7 --ಹೈದರಾಬಾದಿನಲ್ಲಿ ಕನಿಷ್ಠ 17 ಜನ ಸತ್ತರು. 30 ಗಾಯಗೊಂಡರು. ಅಲೀಘಢದಲ್ಲಿ 9 ಜನ ಸತ್ತರು. 12 ಜನ ಗಾಯಗೊಂಡರು.

ಡಿಸೆಂಬರ್ 8 --ಹೈದರಾಬಾದಿನಲ್ಲಿ ಮತ್ತೆ 37 ಸಾವು. ಅಲೀಘಢದಲ್ಲಿ ಮತ್ತೆ 6 ಸಾವು.

ಡಿಸೆಂಬರ್ 9 --ಹೈದರಾಬಾದಿನಲ್ಲಿ ಇನ್ನೂ 12 ಸಾವು.ಸೇನೆಗೆ ಕರೆ. ಅಲೀಘಢದಲ್ಲಿ ಮತ್ತೆ 5 ಸಾವು. ಅಹ್ಮದಾಬಾದಿನಲ್ಲಿ ಇಬ್ಬರ ಕೊಲೆ.

ಡಿಸೆಂಬರ್ 10 --ಹೈದರಾಬಾದಿನಲ್ಲಿ ಮತ್ತೆ 13 ಮಂದಿಯ ಕೊಲೆ. ಅಲೀಘಢದಲ್ಲಿ 8 ಜನರನ್ನು ಜೀವಂತ ಸುಟ್ಟರು. ಕಾನ್ಪುರದಲ್ಲಿ ಐವರ ಸಾವು. ಅಹ್ಮದಾಬಾದಿನಲ್ಲಿ ಮತ್ತೆ ನಾಲ್ವರ ಸಾವು. 18 ಮಂದಿ ಗಾಯಗೊಂಡರು.

ಡಿಸೆಂಬರ್ 11 --ಕಾನ್ಪುರದಲ್ಲಿ ಮತ್ತೆ 3 ಮಂದಿ, ಅಲೀಘಢದಲ್ಲಿ ಮೂರು ಮಕ್ಕಳು ಇರಿತದಿಂದ ಸತ್ತರು. ಸಿಕಂದರಾಬಾದಿನಲ್ಲಿ ಇಬ್ಬರ ಸಾವು. ಅಹ್ಮದಾಬಾದಿನಲ್ಲಿ ಹಿಂಸಾಚಾರ ಮುಂದುವರಿಕೆ.

ಡಿಸೆಂಬರ್ 12 --ಹೈದರಾಬಾದಿನಲ್ಲಿ 9, ಅಹ್ಮದಾಬಾದಿನಲ್ಲಿ 7, ಕಾನ್ಪುರದಲ್ಲಿ 6, ಅಲೀಘಢದಲ್ಲಿ 2 ....

ಅವ್ಯಾಹತವಾಗಿ ಸಾಗಿದೆ ಈ ಭಯಾನಕ ಸಾವುಗಳ ಸುದ್ದಿ ಪ್ರವಾಹ.....ಅನಂತವೋ ಎಂಬಂತೆ.....

ಈ ನಡುವೆ ಬಾಬ್ರಿ ಮಸೀದಿಯನ್ನು ಸಿಡಿಮದ್ದಿಟ್ಟು ಕೆಡಹುವ 'ಶಿವಸೇನೆ'ಯ ಇಬ್ಬರು ಸದಸ್ಯರ ಪ್ರಯತ್ನ. ಅದೃಷ್ಟವಶಾತ್ ಭದ್ರತಾ ಪಡೆಗಳು ಅದನ್ನು ತಪ್ಪಿಸಿ ಇನ್ನೊಂದು ದೊಡ್ಡ ಅನಾಹುತ ತಪ್ಪಿಸಿದರು.

ವಿ.ಪಿ.ಸಿಂಗ್ ರಾಮಜನ್ಮ ಭೂಮಿ ಬಾಬ್ರಿ ಮಸೀದಿಯ ವಿವಾದದಲ್ಲಿ 'ಠಿಕ್ಕಾಟದ ನಿಲುವು' ತಳೆದರು ಎಂಬ ರಾಜೀವ್ ಗಾಂಧಿಯ ಗೋಸುಂಬೆ ಮಾತುಗಳನ್ನು ಗಿಳಿಯಂತೆ ಪುನರಾವರ್ತಿಸುವ ಚಂದ್ರಶೇಖರ್ ಸರಕಾರ ಹಾಗೂ ರಾಜೀವ್‌ಗಾಂಧಿಯ 'ಹೊಸ ಸೂತ್ರ' ಇನ್ನೇನು ಈ ವಿವಾದದ ಪರಿಹಾರ ಬಂದೇ ಬಿಟ್ಟಿತು ಎಂಬ ನಿರೀಕ್ಷೆ ಹುಟ್ಟಿಸಲು ಪ್ರಯತ್ನಿಸುತ್ತಿದ್ದಂತೆ ಅಯೋಧ್ಯೆಯಲ್ಲಿ 'ಕರಸೇವೆ'ಯ ಎರಡನೇ ಘಟ್ಟ ಆರಂಭವಾಗಿಯೇ ಬಿಟ್ಟಿತು, ಅದರ ಬೆನ್ನ ಹಿಂದೆ ದೇಶದ ಇತರೆಡೆ ಈಗಾಗಲೇ 150 ಕ್ಕಿಂತಲೂ ಹೆಚ್ಚು ಮುಗ್ಧ ಜೀವಿಗಳನ್ನು ಬಲಿ ತೆಗೆದುಕೊಂಡಿರುವ, ಸಾವಿರಾರು ಕುಟುಂಬಗಳನ್ನು ಭಯದ ಕೂಪಕ್ಕೆ ತಳ್ಳಿರುವ ಕೋಮುವಾದರ ದುಷ್ಟ ತಾಂಡವ.

'ರಾಮದೇವ'ರ ವಿಷಯದಲ್ಲಿ ಯಾವ ಪುರಾವೆಯನ್ನೂ, ಯಾವ ತೀರ್ಪನ್ನೂ ಒಪ್ಪಲು ಸಿದ್ಧರಿಲ್ಲದ ವಿ.ಹೆಚ್.ಪಿ. ಮತ್ತಿತರ 'ಕಾವಿ ಶರ್ಟು'(ಪುಟ 5 ರ ಲೇಖನ ನೋಡಿ) ಗಳು ಪರೋಕ್ಷವಾಗಿ ಜನವರಿ 10 ರೊಳಗೆ ಬಾಬ್ರಿ ಮಸೀದಿಯ ಜಾಗವನ್ನು ತಮಗೊಪ್ಪಿಸಿ ಎಂದು ಬೆದರಿಕೆಯೊಡ್ಡಿದಂತೆ ಕಾಣುವ ಸನ್ನಿವೇಶದಲ್ಲಿ, ಈ ಸಾವು- ನೋವುಗಳ ಸರಮಾಲೆಯನ್ನು ಕೇಂದ್ರದಲ್ಲಿ ಅಧಿಕಾರ ಪಡೆದ ಸಮಯಸಾಧಕರು ತಡೆಯಬಲ್ಲರೇ ಎಂಬ ತೀವ್ರ ಆತಂಕ ಈಗ ಎಲ್ಲಾ ಜಾತ್ಯಾತೀತರನ್ನು ಬಾಧಿಸುತ್ತಿದೆ.

ಅಕ್ಟೋಬರ್ 30 ರಂದು ದೇಶದ ಜಾತ್ಯಾತೀತ ಸ್ವರೂಪವನ್ನು ರಕ್ಷಿಸುವಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿ ಯಶಸ್ವಿಯಾದ ಉತ್ತರ ಪ್ರದೇಶದ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಕೂಡಾ ಸಮಯಸಾಧಕರ ಜೊತೆ ಸೇರಿ ಕೋಮುವಾದಿಗಳೆದುರು ಬೊಗ್ಗಿ ಸಲಾಮು ಹಾಕಲಾರಂಭಿಸಿದ್ದಾರೋ ಎಂಬ ಭಯವೂ ದೇಶದ ಜಾತ್ಯಾತೀತ ಶಕ್ತಿಗಳಲ್ಲಿ ಮೂಡಲಾರಂಭಿಸಿದೆ.

1947 ರಿಂದೀಚೆಗೆ ಇಂತಹ ಕೋಮು ಗಲಭೆಯನ್ನು ಕಾಣದ ಎಂದೂ ಕೋಮು ವಿಷ ಕಾಣದ ಸುತ್ತಮುತ್ತಲ ಹಳ್ಳಿಗಳಿಗೂ ಮೊತ್ತಮೊದಲ ಬಾರಿಗೆ ಈ ರೋಗ ವ್ಯಾಪಿಸಿರುವ ಅಲೀಘಢದ ಸದ್ಯದ ದುಸ್ಥಿತಿ ಈ ಎಲ್ಲಾ ಆತಂಕಗಳನ್ನು ದ್ವಿಗುಣ ಗೊಳಿ-

ಪುಟ 2 ಕ್ಕೆ

ಈಗ ರಾಜೀವ್ ಗಾಂಧಿ ಹಾಗೂ ಅವರ ಪಕ್ಷವೇನು ಮಾಡುತ್ತಿದೆ ಎಂಬುದು ಊಹೆಗೂ ನಿಲುಕದ ವಿಷಯವೇನಲ್ಲ. ಜನತಾದಳ, ಡಿ.17 ರಂದು ನಡೆಸಲಿರುವ ರಾಜ್ಯ ರ್‍ಯಾಲಿಯಂತೆಯೇ ರಾಜ್ಯದೆಲ್ಲೆಡೆ ಜನರನ್ನು ಒಳಗೊಳ್ಳುವ ಅವರ ಪ್ರತಿಭಟನೆಯನ್ನು ರೂಪಿಸುವ ಕ್ರಮ ಮಾತ್ರವೇ ಈ ಅಧಿಕಾರ ದಾಹಕ್ಕೆ ಅಡ್ಡಿಯಾಗಬಲ್ಲದು. ಈ ತಿದ್ದುಪಡಿಯನ್ನು ಅರೋಗ್ಯಕರವಾಗಿಸಬಲ್ಲದು. ಇದನ್ನುಳಿದು ಬೇರಾವ ದಾರಿಯೂ ಕೇವಲ ತೋರಿಕೆಯ ಬದಲಾವಣೆಗೆ ಮಾತ್ರ ಎಡೆ ಕೊಡಬಹುದೆಹುದೇ ಹೊರತು ರಾಜ್ಯಕಾಂಗ್ರೆ ಸಚಿವ, ಶಾಸಕರ ಅಧಿಕಾರ ದಾಹ ಅಡಗುವುದಿಲ್ಲ. ಹೀಗಾಗಿ ಜಿಲ್ಲಾ ಪರಿಷತ್ ವ್ಯವಸ್ಥೆಯ ಮೇಲಿನ ಧಾಳಿ ತಪ್ಪುವುದಿಲ್ಲ.

ಜಿಲ್ಲಾ ಪರಿಷತ್ ಕಾಯಿದೆಗೆ ತಿದ್ದುಪಡಿ

ಕಾಂಗ್ರೆ ಸರಕಾರ ತರಾತುರಿಯಲ್ಲಿ ವಿಧಾನಸಭೆಯಲ್ಲಿಟ್ಟು ತಮ್ಮ ಪಕ್ಷದ ಭೀಮ ಬಲವನ್ನುಪಯೋಗಿಸಿ ಒಪ್ಪಿಗೆ ಪಡೆದು ಕೆಳಗಿನ ಮಟ್ಟದಲ್ಲಿನ ಪ್ರಜಾಸತ್ತೆಯ ಧಿಡೀರ್ ಉಸಿರುಕಟ್ಟಿಸುವ ಪ್ರಯತ್ನ ನಡೆಸಿತು. ಇದು ಅವರ ಪಕ್ಷದಲ್ಲಿಯೇ ದೊಡ್ಡ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿದೆ. ಕಾಂಗ್ರೆ ಶಾಸಕಾಂಗ ಪಕ್ಷದಲ್ಲಿಯೇ ಗೊಂದಲ, ಗದ್ದಲಗಳಾಗಿವೆ. ಎಲ್ಲರೂ ತಿದ್ದುಪಡಿ ಮಾಡಬೇಕು, ಜಿಲ್ಲಾ ಪರಿಷತ್ ಮಂಡಲ ಪಂಚಾಯತ್‌ಗಳ ಅಧಿಕಾರ ಮೊಟಕು ಮಾಡಬೇಕೆನ್ನುವವರೇ ಆದರೂ ಜಿಲ್ಲಾ ಪರಿಷತ್‌ಗಳು ಇಲ್ಲವೆನ್ನುವಂತೆ ಮಾಡುವ ಕರಾಳ ತಿದ್ದುಪಡಿಗಳನ್ನು ಕಾಂಗ್ರೆಸೊಳಗೆ ಯಾರೂ ನಿರೀಕ್ಷಿಸಿರಲಿಲ್ಲ. ಸಚಿವ ಸಂಪುಟದಲ್ಲಿ ಚರ್ಚಿತವಾಗದೇ, ಶಾಸಕಾಂಗ ಪಕ್ಷಕ್ಕೂ ತಿಳಿಯದೇ ವಿಧಾನಸಭೆಯಲ್ಲಿ ನೇರವಾಗಿ ಮಂಡಿತವಾದ ಈ ಮಸೂದೆ ಶಾಸಕಾಂಗ ಪಕ್ಷದ ಹೊರಗೆ ಕಾಂಗ್ರೆ ಪಕ್ಷದ ಒಳಗೆ ಪ್ರಬಲ ವಿರೋಧವನ್ನು ಎದುರಿಸಬೇಕಾಗಿದೆ. ಕಾಂಗ್ರೆ ಶಾಸಕರು ಹಿಂದೆ ಇದ್ದಂತೆಯೇ ಅವರವರ ಕ್ಷೇತ್ರಗಳಲ್ಲಿ ತಮ್ಮ ಸರ್ವಸ್ವಾಮ್ಯವನ್ನು ಉಳಿಸಿಕೊಳ್ಳಲು ಜಿಲ್ಲಾ ಪರಿಷತ್‌ಗಳ ಮಂಡಲ ಪಂಚಾಯತ್‌ಗಳ ಅಧಿಕಾರವನ್ನು ಮೊಟಕು ಮಾಡಲು ತೀವ್ರ ಆಸಕ್ತಿ ಹೊಂದಿರಬಹುದು. ಆದರೆ ಕಾಂಗ್ರೆ ಪಕ್ಷದೊಳಗೆ ಜಿಲ್ಲಾ ಪರಿಷತ್ ಸದಸ್ಯರ ಮಂಡಲ ಪಂಚಾಯತ್ ಸದಸ್ಯರ ಅಭಿಪ್ರಾಯವನ್ನೇ ಪಡೆಯದೇ ಶಾಸಕರು ತಮ್ಮ ಅಧಿಕಾರ ರಕ್ಷಣೆಗೆ ಅವರ ಅಧಿಕಾರವನ್ನು ಮೊಟಕುಗೊಳಿಸಲು ಬಯಸಿದರೆ ಸುಮಾರು 400 ಕಾಂಗ್ರೆ ಜಿಲ್ಲಾ ಪರಿಷತ್ ಸದಸ್ಯರು, 20,000 ಮಂಡಲ ಸದಸ್ಯರು ತೆಪ್ಪಗೆ ಕುಳಿತಿರುವರೇ? ಹೀಗೆ ಕಾಂಗ್ರೆ ಪಕ್ಷದ ಒಳಗೇ ಶಾಸಕಾಂಗ ಹಾಗೂ ಜಿಲ್ಲಾ ಪರಿಷತ್ ವ್ಯವಸ್ಥೆಯ ಪ್ರತಿನಿಧಿಗಳ ನಡುವೆ ಕಾಳಗ ಆರಂಭವಾಗಿದೆ.

ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣ ಕಾಂಗ್ರೆಯೊಳಗಿನ ಅಧಿಕಾರ ಕೇಂದ್ರೀಕರಣದ ವಿರುದ್ಧ ಅಪ್ರತ್ಯಕ್ಷ ಹೋರಾಟಕ್ಕೆ ಕಾರಣವಾಗಿದೆ. ಕಾಂಗ್ರೆ ಶಾಸಕಾಂಗ ಪಕ್ಷ ರಾಜಿ ಸೂತ್ರವಾಗಿ ಜಿಲ್ಲಾ, ಮಂಡಲ ಸದಸ್ಯರು ಪಕ್ಷದ ಪ್ರತಿನಿಧಿಗಳೂ ಇರುವಂತಹ ಒಂದು ಸಮಿತಿಯನ್ನು ನೇಮಿಸಬೇಕಾಗಿ ಬಂದದ್ದೇ ಇಂತಹ ಒಂದು ಪ್ರತಿಭಟನೆಯ ಫಲ.

ಆದರೆ ಈ ಸಮಿತಿಯ ರಚನೆ ಕಾಂಗ್ರೆ ಒಳಗಿನ ಗುಂಪುಗಾರಿಕೆಯನ್ನೂ ಬಯಲಿಗೆ ತಂದಿದೆ. ತಮ್ಮದೇ ಆದ ಒಂದು ತಿದ್ದುಪಡಿ ರೂಪಿಸುವುದಕ್ಕಾಗಿ ಸಾಕಷ್ಟು ಶ್ರಮಿಸಿದ್ದ ಫೀರ್‌ಪಾಷಾರವರನ್ನು ಮಂತ್ರಿಮಂಡಲದಿಂದ ಕೈಬಿಟ್ಟಿರುವುದರ ಜೊತೆಗೆ ಈ ಸಮಿತಿಯಲ್ಲಿಯೂ ಸೇರಿಸದಿರುವುದರ ಫಲವಾಗಿ ಅವರದೇ ಆದ ಒಂದು ಟಿಪ್ಪಣಿಯನ್ನು ಅವರು ತಯಾರಿಸಿ ರಾಜೀವ್ ಗಾಂಧಿಯವರನ್ನು ಭೇಟಿ ಮಾಡಲು ಹೊರಟಿದ್ದಾರೆ. ರಾಜೀವ್‌ಗಾಂಧಿಯವರು ತರಬಯಸಿದ 64 ನೇ ತಿದ್ದುಪಡಿಗೆ ಕರ್ನಾಟಕದ ತಿದ್ದುಪಡಿಗಳು ವಿರೋಧವಾಗಿದೆಯೆಂಬುದು ಅವರ ವಾದ.

64ನೇ ಸಂವಿಧಾನ ತಿದ್ದುಪಡಿ

ಜಿಲ್ಲಾ ಪರಿಷತ್ ಕಾನೂನಿಗೆ ತಿದ್ದುಪಡಿ ತಂದಿರುವ ಹಿನ್ನೆಲೆಯಲ್ಲಿ ರಾಜೀವ್‌ಗಾಂಧಿಯವರು ಅಧಿಕಾರ ವಿಕೇಂದ್ರೀಕರಣವೇ ತಮ್ಮ ಪಕ್ಷದ ಧ್ಯೇಯವೆಂದು ಘೋಷಿಸುತ್ತಾ ರಾಷ್ಟ್ರದ ಅನೇಕ ಕಡೆ ಅಧಿಕಾರವನ್ನೆಲ್ಲಾ ತಮ್ಮ ಕೈಯಲ್ಲೇ ಕೇಂದ್ರೀಕರಿಸಿಕೊಂಡ ಐಎಎಸ್ ಅಧಿಕಾರಿಗಳ ಜಾತ್ರೆಗಳನ್ನು ನಡೆಸಿದರು. ಅವರ "ಸಲಹೆ"ಗಳನ್ನು ಪಡೆದು ಅಧಿಕಾರ ವಿಕೇಂದ್ರೀಕರಣವನ್ನು ಸಂವಿಧಾನದಲ್ಲಿಯೇ "ಸ್ಥಿರ" ವಾಗಿಸುತ್ತೇವೆಂಬ 64ನೇ ತಿದ್ದುಪಡಿಯನ್ನು ರೂಪಿಸಿದರು. ಆ ಸಂದರ್ಭದಲ್ಲಿ ರಾಷ್ಟ್ರದ ಪ್ರಧಾನಿ ಇಡೀ ದೇಶದ ಎಲ್ಲಾ ಪಂಚಾಯತ್, ಮಂಡಲ ಪ್ರಧಾನರಿಗೆ ಪತ್ರ ಬರೆದು ತಮ್ಮ "ಉದಾರತೆಯನ್ನು" ಸಾರಿದರು.

ಈ ಸಂವಿಧಾನ ತಿದ್ದುಪಡಿ ಸಿಪಿಐ(ಎಂ) ತೆಗೆದುಕೊಂಡ ದೃಢನಿಲುವಿನಿಂದಾಗಿ ವಿರೋಧ ಪಕ್ಷದ [illegible] ಪ್ರತಿಭಟಿಸಿ ರಾಜ್ಯ ಸಭೆಯಲ್ಲಿ ಬಿದ್ದುಹೋಯಿತು. [illegible] ದಳ ತೂಗುಯ್ಯಾಲೆಯಲ್ಲಿತ್ತು. ಕೊನೆಗೆ ಸಿಪಿಐ(ಎಂ) ನಿಲುವನ್ನು ಒಪ್ಪಿಕೊಂಡಿತು. [illegible] ತಿದ್ದುಪಡಿಯನ್ನು ವಿರೋಧಿಸುವುದಿಲ್ಲವೆಂದು ಸಾರಿತು.

ಈಗ ರಾಜ್ಯ ಸರಕಾರ ತನ್ನ ತಿದ್ದುಪಡಿಗಳನ್ನು ವಿಧಾನಸಭೆಯಲ್ಲಿ ಮಂಡಿಸಿದ [illegible] ಯಾಗಿ ಅನೇಕ [illegible] ತಿದ್ದುಪಡಿಗಳು ರಾಜೀವ್ ಗಾಂಧಿಯವರ 64ನೇ ತಿದ್ದುಪಡಿಯ ಪ್ರಕಾರ ಇಲ್ಲ. [illegible] ಅನುಮತಿಯನ್ನು [illegible] ಎಂದೇ [illegible] ದ್ದಾರೆ. ಒಟ್ಟಿನಲ್ಲೂ ವಿ.ಪಿ.ಸಿಂಗ್ [illegible]

[illegible]

ಜಿಲ್ಲಾ ಪರಿಷತ್ ಕಾಯಿದೆಗೆ...

(ಪುಟ ಒಂದರಿಂದ)
ಸಂಬಂಧಿಸಿ ತರಬಯಸಿದ್ದ 74 ನೇ ತಿದ್ದುಪಡಿ ಮಸೂದೆಯೇ ಜಿಲ್ಲಾ ಪರಿಷತ್‌ಗಳಿಗೆ ಹೆಚ್ಚು ಅಧಿಕಾರವನ್ನು ಕೊಡುತ್ತದೆಂದಲ್ಲಾ ಹೇಳಿದ್ದಾರೆ.

ರಾಜೀವ್‌ಗಾಂಧಿಯವರ ಮಸೂದೆ ಅಧಿಕಾರ ವಿಕೇಂದ್ರೀಕರಣವನ್ನು ಬಲಪಡಿಸುವ ಪ್ರಜಾಸತ್ತಾತ್ಮಕ ಹೆಜ್ಜೆಯಾಗಿತ್ತೇ?

ಪ್ರಜಾಸತ್ತಾತ್ಮಕ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಸ್ವಾತಂತ್ರ್ಯ ಗಳಿಸಿದ ಮರುಗಳಿಗೆಯಿಂದಲೂ ಒಂದೇ ಸಮನೆ ದೃಢವಾಗಿ ಹೋರಾಡುತ್ತಾ ಬಂದಿರುವ ಹಾಗೂ ದೇಶಕ್ಕೆ ಮಾದರಿಯಾಗುವ ಅಧಿಕಾರ ವಿಕೇಂದ್ರೀಕರಣವನ್ನು ಸಾಧಿಸಿ ತೋರಿಸಿರುವ ಸಿಪಿಐ(ಎಂ) ಇಂತಹ "ಆದರ್ಶ" ತಿದ್ದುಪಡಿಯನ್ನೇಕೆ ವಿರೋಧಿಸಿತು? ಎಂಬ ಪ್ರಶ್ನೆ ಅನೇಕರಿಗೆ ಎದ್ದಿರಬಹುದು.

ದೇಶದೆಲ್ಲೆಡೆ ಕಾಂಗ್ರೆಸ್ ರಾಜ್ಯ ಸರಕಾರಗಳು ದಶಕಗಟ್ಟಲೇ ಪಂಚಾಯತ್ ಸಂಸ್ಥೆಗಳಿಗೆ ಚುನಾವಣೆ ನಡೆಸದಿರುವುದು ಆಡಳಿತಾಧಿಕಾರಿಗಳನ್ನು ನೇಮಿಸಿ ಎಲ್ಲಾ ಅಧಿಕಾರವನ್ನು ರಾಜ್ಯಸರಕಾರಗಳೇ ಕೇಂದ್ರೀಕರಿಸಿಕೊಳ್ಳುವುದು, ಕಾಂಗ್ರೆಸ್ ಕೇಂದ್ರ ಸರಕಾರ ದಿನ ದಿನಕ್ಕೂ ಹೆಚ್ಚು ಹೆಚ್ಚು ಅಧಿಕಾರವನ್ನು ರಾಜ್ಯ ಸರಕಾರಗಳಿಂದಲೇ ಕಿತ್ತುಕೊಳ್ಳುವುದು ಇಂತಹ ಕ್ರಮಗಳ ಫಲವಾಗಿ ಜನತೆಯ ಸಮಸ್ಯೆಗಳಿಗೆ ಗಮನ ಕೊಡುವವರಿಲ್ಲದೆ ಜನತೆಯಲ್ಲಿ ಅತೃಪ್ತಿ ಅಸಮಧಾನಗಳು ಬೆಳೆದಿದ್ದು ಒಂದು ಕಡೆ ದೇಶದ ಫೆಡರಲ್ ಸ್ವರೂಪವೂ ಕುಸಿಯುತ್ತಾ ನಡೆದಿದ್ದು ಮತ್ತೊಂದು ಕಡೆ ಪ್ರಜಾಸತ್ತೆಗಾಗಿ ತೀವ್ರ ಹೋರಾಟವನ್ನು ಹುಟ್ಟಿಸಿತು. ಇದಕ್ಕೆ ಬದಲಾಗಿ ವಿರೋಧ ಪಕ್ಷದ ಸರಕಾರಗಳು ರಾಜ್ಯ ಮಟ್ಟದಲ್ಲಿ ಚುನಾಯಿತವಾದಾಗ ಎಡ ಸರಕಾರಗಳು ತಮ್ಮ ಅಳವಿನೊಳಗೆ ಮಾಡಬಹುದಾದ ಅಧಿಕಾರ ವಿಕೇಂದ್ರೀಕರಣವನ್ನೆಲ್ಲಾ ಮಾಡಲು ಪ.ಬಂಗಾಳದ ರೀತಿ ಪ್ರಯತ್ನಿಸಿದರೆ-ಬೂರ್ಜ್ವಾ ವಿರೋಧ ಪಕ್ಷಗಳು ಕೂಡ ಅಧಿಕಾರ ವಿಕೇಂದ್ರೀಕರಣದ ಪ್ರಯತ್ನ ಮಾಡಿದ್ದು ಇದರಿಂದ ಆಯಾ ಪಕ್ಷಗಳು ವಿವಿಧರಾಜ್ಯಗಳಲ್ಲಿ ಬೇರು ಬಿಡತೊಡಗಿದ್ದು ಕಾಂಗ್ರೆಸ್‌ಗೆ ಒಂದು ಸವಾಲಾಯಿತು. ಈ ಸವಾಲನ್ನೆದುರಿಸುವಾಗಲೇ ರಾಜೀವ್ ಗಾಂಧಿ ನೇತೃತ್ವ ಒಂದು ಖಚಿತ ಯೋಜನೆಯನ್ನು ತಯಾರಿಸಿತು.

ಅಧಿಕಾರ ವಿಕೇಂದ್ರೀಕರಣದ ಮಾತನಾಡುತ್ತಲೇ ವಿವಿಧ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ವಿರೋಧ ಪಕ್ಷಗಳ ಸರಕಾರಗಳು ತಮ್ಮ ಕೆಲವು ಜನ ಪರ ಯೋಜನೆಗಳನ್ನು ರೂಪಿಸುತ್ತಾ ಜನಪ್ರಿಯವಾಗುವುದನ್ನು ತಪ್ಪಿಸಲು ರಾಜ್ಯ ಸರಕಾರಗಳೇ ಇಲ್ಲವೆಂಬಂತೆ ತಾನೇ ನೇರವಾಗಿ ದೆಹಲಿಯಿಂದ ಜಿಲ್ಲೆಗಳನ್ನು ಆಳಲು ಒಂದು ವ್ಯೂಹವನ್ನು ರಚಿಸಿತು. ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ, ಜಿಲ್ಲೆಗಳಲ್ಲಿ ತಾಲೂಕುಗಳಲ್ಲಿ, ಗ್ರಾಮಗಳಲ್ಲಿ ಚುನಾಯಿತ ಪ್ರತಿನಿಧಿಗಳ ಸಂಸ್ಥೆಗಳನ್ನು ರೂಪಿಸುವುದು. ಈ ಜಿಲ್ಲೆಗಳನ್ನು ಅವುಗಳಿಗೆ ಹಣದ ನೀಡಿಕೆ ಅಲ್ಲಿಯ ಯೋಜನೆಗಳ ನಿರೂಪಣೆಯನ್ನು ನೇರವಾಗಿ ದೆಹಲಿಯಿಂದಲೇ ನಿಯಂತ್ರಿಸುವುದು. ದೆಹಲಿಯೇ ಎಲ್ಲದಕ್ಕೂ ಹೊಣೆಯಾದಾಗ, ಅದರಲ್ಲಿಯೂ ಹಣಕ್ಕೆ ಹೊಣೆಯಾದಾಗ ಜಿಲ್ಲಾ ಪರಿಷತ್‌ಗಳು ಗ್ರಾಮಾಣ ಪ್ರದೇಶದ ಜನರು ರಾಜ್ಯ ಸರಕಾರಗಳತ್ತ ನೋಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವಾದ್ದರಿಂದ ವಿರೋಧ ಪಕ್ಷಗಳನ್ನು ಆರಿಸುತ್ತಿರುವ ಜನರನ್ನೂ ತಮ್ಮತ್ತ ಸೆಳೆಯಬಹುದು ಎಂದು ಯೋಚಿಸಿದರು.

ದೆಹಲಿಯಿಂದ ರಾಜ್ಯಗಳಿಗೆ, ರಾಜ್ಯಗಳಿಂದ ಜಿಲ್ಲೆಗಳಿಗೆ, ಜಿಲ್ಲೆಗಳಿಂದ ಗ್ರಾಮಗಳಿಗೆ ಅಧಿಕಾರ ಹಂಚಿಕೆ ಎಂಬ ಚತುಸ್ತಂಭ ರಾಷ್ಟ್ರದ ಮೂಲ ಕಲ್ಪನೆಯನ್ನೇ ದಿಕ್ಕೆಡಿಸಿ ನಮ್ಮ ದೇಶ ಒಂದು ಬಹು ಭಾಷಿತ ದೇಶ, ಒಂದು ಭಾಷೆಯನ್ನಾಡುವ ಜನರು, ಒಂದು ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಘಟಕವಾಗಿದ್ದಾರೆ. ಅದನ್ನು ಅಲಕ್ಷಿಸುವುದು ಸಾಧ್ಯವಿಲ್ಲ. ಅಲಕ್ಷಿಸಿದರೆ ದೇಶದ ಐಕ್ಯತೆಗೆ ಮಾರಕ. ಅಸ್ಸಾಂ, ಪಂಜಾಬ್, ಕಾಶ್ಮೀರಗಳಲ್ಲಿನಂತೆ ಭಯೋತ್ಪಾದಕರುಗಳ ಹುಟ್ಟಿಗೆ ಕಾರಣವಾಗಿದೆ ಎಂಬ ಸಂಗತಿಯನ್ನೇ ಅಲಕ್ಷಿಸುವ, ಪ್ರಜಾಸತ್ತಾತ್ಮಕ ದೇಶವೊಂದರಲ್ಲಿ ವಿವಿಧ ರಾಜಕೀಯ ಪಕ್ಷಗಳು ತಮ್ಮ ಕಾರ್ಯಕ್ರಮ ಮತ್ತು ಅವುಗಳ ಜಾರಿಯ ಆಧಾರದ ಮೇಲೆ ಜನರ ಬೆಂಬಲ ಪಡೆದು ಅಧಿಕಾರಕ್ಕೆ ಬರಬಹುದು ಎನ್ನುವ ಮೂಲಭೂತ ಸಂಗತಿಯನ್ನೇ ಮರೆತು ಸರ್ವಾಧಿಕಾರದತ್ತ ದೇಶವನ್ನೇ ಕೊಂಡೊಯ್ಯುತ್ತದೆ ಎಂಬುದಕ್ಕೆ ಸಿಪಿಐ(ಎಂ) ಈ ತಿದ್ದುಪಡಿಯನ್ನು ಖಡಾಖಂಡಿತವಾಗಿ ವಿರೋಧಿಸಿತು.

ದೇಶದ ಸರ್ವಾಧಿಕಾರವನ್ನು ಕೇಂದ್ರಕ್ಕೊಪ್ಪಿಸುವ ಕ್ರಮ ಇದು ಎನ್ನುವುದಕ್ಕೆ ಇದನ್ನು ಇಂದೂ ವಿರೋಧಿಸಬೇಕಾದೀತು. 64 ನೇ ತಿದ್ದುಪಡಿಯಲ್ಲಿ ರಾಜ್ಯ ಸರಕಾರಗಳನ್ನು ಅಲಕ್ಷಿಸಿ ಎಲ್ಲಾ ಅಧಿಕಾರವನ್ನೂ ತನ್ನಲ್ಲೇ ಕೇಂದ್ರೀಕರಿಸಿಕೊಳ್ಳುವ ದಾಹದಿಂದ ತುಡಿಯುತ್ತಿದ್ದ ಕಾಂಗ್ರೆಸ್ ರಾಜ್ಯದ ಅಧಿಕಾರಗಳಲ್ಲಿ ಬಹಳಷ್ಟು ತಾನು ಕಿತ್ತುಕೊಳ್ಳುವ ಮತ್ತು ಕೆಲವನ್ನು ಜಿಲ್ಲೆಗಳ ಮಟ್ಟಕ್ಕೆ ಕೊಡುವ ಹಂಚಿಕೆ ಹಾಕಿತು. ಅಂದರೆ ರಾಜ್ಯಗಳನ್ನು ದುರ್ಬಲಗೊಳಿಸುವ ಸಲುವಾಗಿ ಜಿಲ್ಲೆಗಳನ್ನು ಬಲಿಷ್ಠವಾಗಿಸುವ ಪ್ರಯತ್ನ ಮಾಡಿದರು.

ಈಗ ಅದೇ ರಾಜೀವ್ ಗಾಂಧಿಯವರ ಕಾಂಗ್ರೆಸ್ ಏನು ಮಾಡುತ್ತಿದೆ? ರಾಜ್ಯ ಮಟ್ಟದಲ್ಲಿಯೇ ಎಲ್ಲಾ ಅಧಿಕಾರಗಳನ್ನು ಕೇಂದ್ರೀಕರಿಸಿಕೊಳ್ಳುವುದಕ್ಕಾಗಿ ಜಿಲ್ಲೆಗಳನ್ನು ಬಯಸಿದೆ. ಅದೇ ಕಾರಣಕ್ಕಾಗಿಯೇ ಮಂಡಲಗಳನ್ನು ದುರ್ಬಲಗೊಳಿಸಲು ಅವುಗಳಿಗೆ ಹಿಂದಿನಂತೆ ಯಾವ ಕೆಲಸಕ್ಕೂ ಬಾರದ 'ಪಂಚಾಯಿತಿಗಳಾಗಿ ಪರಿವರ್ತಿಸುವ ಪ್ರಯತ್ನ ಮಾಡುತ್ತಿದೆ.

ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ರಾಜ್ಯಗಳ ಅಧಿಕಾರವನ್ನು ಕಿತ್ತುಕೊಳ್ಳುವ ಅದೇ ಅಧಿಕಾರ ದಾಹವೇ ಈಗ ರಾಜ್ಯದಲ್ಲಿ ಅಧಿಕಾರದಲ್ಲಿರುವಾಗ ಜಿಲ್ಲೆಗಳ ಅಧಿಕಾರನ್ನು ಕಿತ್ತುಕೊಳ್ಳುವ ಪ್ರಯತ್ನದ ಮೂಲ ಎಂಬುವುದನ್ನು ಗುರುತಿಸಬೇಕಾಗಿದೆ.

ಆದ್ದರಿಂದ ಈಗ ರಾಜೀವ್ ಗಾಂಧಿ ಹಾಗೂ ಅವರ ಪಕ್ಷವೇನು ಮಾಡುತ್ತಿದೆ ಎಂಬುದು ಊಹೆಗೂ ನಿಲುಕದ ವಿಷಯವೇನಲ್ಲ. ಜನತಾದಳ, ಡಿ.17 ರಂದು ನಡೆಸಲಿರುವ ರಾಜ್ಯ ರ‍್ಯಾಲಿಯಂತೆಯೇ ರಾಜ್ಯದೆಲ್ಲೆಡೆ ಜನರನ್ನು ಒಳಗೊಳ್ಳುವ ಅವರ ಪ್ರತಿಭಟನೆಯನ್ನು ರೂಪಿಸುವ ಕ್ರಮ ಮಾತ್ರವೇ ಈ ಅಧಿಕಾರ ದಾಹಕ್ಕೆ ಅಡ್ಡಿಯಾಗಬಲ್ಲದು. ಈ ತಿದ್ದುಪಡಿಯನ್ನು ಆರೋಗ್ಯಕರವಾಗಿಸಬಲ್ಲದು. ಇದನ್ನುಳಿದು ಬೇರಾವ ದಾರಿಯೂ ಕೇವಲ ತೋರಿಕೆಯ ಬದಲಾವಣೆಗೆ ಮಾತ್ರ ಎಡೆ ಕೊಡಬಹುದೇ ಹೊರತು ರಾಜ್ಯಕಾಂಗ್ರೆಸ್ ಸಚಿವ, ಶಾಸಕರ ಅಧಿಕಾರ ದಾಹ ಅಡಗುವುದಿಲ್ಲ. ಹೀಗಾಗಿ ಜಿಲ್ಲಾ ಪರಿಷತ್ ವ್ಯವಸ್ಥೆಯ ಮೇಲಿನ ಧಾಳಿ ತಪ್ಪುವುದಿಲ್ಲ.

ಮತ್ತೆ ಕೋಮುವಾದಿಗಳ...

(ಪುಟ ಒಂದರಿಂದ)
ಸಿದೆ. ವಿ.ಹೆಚ್.ಪಿ.-ಬಿ.ಜೆ.ಪಿ. ಕೋಮು ಭಾವೋದ್ರೇಕ ಹರಡಿ ಹಿಂದೂ - ಮುಸಲ್ಮಾನರ ನಡುವೆ ದಶಕಗಳ ಕಾಲ ನೆಲೆಸಿದ್ದ ಸೌಹಾರ್ದತೆಯನ್ನು ಮುರಿಯುವಲ್ಲಿ, ಪರಸ್ಪರ ಅಪನಂಬಿಕೆ ಹುಟ್ಟಿಸುವಲ್ಲಿ ಯಶಸ್ವಿಯಾಗಿರುವಂತೆ ಕಾಣುತ್ತದೆ ಎಂದು ಅಲೀಘಢಕ್ಕೆ ಭೇಟಿ ನೀಡಿದ ಸಿ.ಪಿ.ಐ.(ಎಂ) ಎಂ.ಪಿ.ಗಳ ತಂಡ ಅಭಿಪ್ರಾಯಪಟ್ಟಿದೆ. ಎರಡೂ ಕೋಮುಗಳಲ್ಲಿ ಸಾವು-ನೋವುಗಳು ಸಂಭವಿಸಿವೆ, ಆದರೆ ಅಲ್ಪ ಸಂಖ್ಯಾತರ ಮೇಲೆಯೇ ಈ ಹೊರೆ ಹೆಚ್ಚು ಎಂದೂ ಈ ತಂಡ ಹೇಳಿದೆ. ಕಾಂ: ಇ.ಬಾಲಾನಂದನ್, ಕಾಂ: ಆರ್.ಎಸ್.ಗೋಸ್ವಾಮಿ ಮತ್ತಿತರರು ಈ ತಂಡದಲ್ಲಿದ್ದರು. ಉಚ್ಚ ಪೊಲೀಸ್ ಅಧಿಕಾರಿಗಳನ್ನು, ಪತ್ರಕರ್ತರನ್ನು, ಅಲೀಘಢ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರನ್ನು, ಕಾಲೇಜು ಶಿಕ್ಷಕರನ್ನು, ಸ್ಥಳೀಯ ನಿವಾಸಿಗಳನ್ನು ಈ ತಂಡ ಭೇಟಿ ಮಾಡಿತು.

ಡಿವೈಎಫ್‌ಐನ ದಶಮಾನೋತ್ಸವ ಆಚರಣೆ

ಕುಂದಾಪುರದಲ್ಲಿ ಡಿವೈಎಫ್‌ಐನ ಪಡುಕೋಣೆ ಘಟಕದ ದಶಮಾನೋತ್ಸವದ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಜಿ.ಬಿ.ಮಯ್ಯರವರು ಮನುಷ್ಯ ತಾನು ಯಾವುದೇ ಮತವನ್ನು ಆಚರಿಸುವುದರ ಮೂಲಕ ಕೋಮುವಾದಿಯಾಗಲಾರ. ಆತ ಇನ್ನೊಂದು ಮತವನ್ನು ವಿರೋಧಿಸುವುದಕ್ಕೋ ದ್ವೇಷಿಸುವುದಕ್ಕೋ ಪ್ರಾರಂಭಿಸಿದಾಗ ಕೋಮುವಾದಿಯಾಗುತ್ತಾನೆ ಎಂದು ತಿಳಿಸಿದರು. ಎ.ಎಸ್. ಆಚಾರ್ಯರು ಮಾತನಾಡುತ್ತಾ ವಿಜಯನಗರದ ಉಕ್ಕಿನ ಕಾರ್ಖಾನೆ ಕರ್ನಾಟಕದ ಅಗತ್ಯದ ಬೇಡಿಕೆಯಾಗಿದೆ ಎಂದರು. ಮಂಡಲ ವರದಿ ಜಾರಿಯಾಗಬೇಕೆಂದು ಕೆ.ಪಿ. ಯವರು ಒತ್ತಾಯಿಸಿದರು. ಸಮಾವೇಶದ ಅಧ್ಯಕ್ಷತೆಯನ್ನು ಘಟಕಾಧ್ಯಕ್ಷ ರಾಜೀವ್ ಪಡುಕೋಣೆಯವರು ವಹಿಸಿದ್ದರು. ಕೆ.ನಾರಾಯಣ ಆಚಾರ್ ಉದ್ಘಾಟಿಸಿದರು.

ಕೊಂಚಾಡಿಯಲ್ಲಿ

ಡಿವೈಎಫ್‌ಐನ ದಶಮಾನೋತ್ಸವದಂಗವಾಗಿ ರಾಜ್ಯ ಸಮಿತಿ ನೀಡಿದ ಕರೆಯ ಮೇರೆಗೆ ಕೊಂಚಾಡಿ ಘಟಕವು ನವೆಂಬರ್ 10 ಮತ್ತು 11ರಂದು ಕಾಂ. ನಾರಾಯಣ ಕೊಂಚಾಡಿಯವರು ಧ್ವಜಾರೋಹಣದ ಮೂಲಕ ಎರಡು ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಸಮಾರಂಭದಲ್ಲಿ ಕೃಷ್ಣಪ್ಪ ಕೊಂಚಾಡಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ವಾಸುದೇವ್ ಉಚ್ಚಿಲ್‌ರವರು ಮಂಡಲ್ ವರದಿಯನ್ನು ಕೆಲವು ಬದಲಾವಣೆಯೊಂದಿಗೆ ಜಾರಿಗೊಳಿಸುವ ಅಗತ್ಯವನ್ನು ವಿವರಿಸಿದರು.

ಕಾಂ. ಜಯಕುಮಾರ್‌ರವರು ದೇಶದಲ್ಲಿ ಹೆಚ್ಚುತ್ತಿರುವ ಕೋಮುವಾದಿಗಳ ಬಗ್ಗೆ ಹೋರಾಡುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಉಪಾಧ್ಯಕ್ಷೆ ಕಾಂ.ಎಸ್.ಆರ್. ಲೀಲಾವತಿಯವರು ಸಮಾರಂಭದಲ್ಲಿ ಶುಭ ಕೋರಿ ಮಾತನಾಡಿದರು. ಮುಖ್ಯ ಅತಿಥಿಗಳಾದ ಎಸ್. ಆರ್.ಕುಮಾರ್‌ರವರು ಆಟೋಟ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ ಮತ್ತು ಸಾಕ್ಷರತಾ ಆಂದೋಲನದ ಕಾರ್ಯಕರ್ತರಿಗೆ ಬಹುಮಾನ ವಿತರಿಸಿದರು.

ನವೆಂಬರ್ 13ರಂದು ಡಿವೈಎಫ್‌ಐನ ಕೊಂಚಾಡಿ ಘಟಕವು ಸ್ಥಳೀಯ ನಾಗರೀಕರ ಸಮಸ್ಯೆಗಳಾದ ರಸ್ತೆ ಕಾಮಗಾರಿ, ಬೀದಿ ದೀಪ ಹಾಗೂ ನಲ್ಲಿ ನೀರಿನ ಅವ್ಯವಸ್ಥೆ ಸರಿಪಡಿಸಲು ಒತ್ತಾಯಿಸಿ ಮಂಗಳೂರು ಮಹಾನಗರ ಪಾಲಿಕೆಯ ಮೇಯರ್, ಕಮಿಷನರ್‌ಗೆ ಮನವಿ ಅರ್ಪಿಸಲಾಯಿತು.

"ಕನ್ನಡಿಗರಿಗೇ ಉದ್ಯೋಗ" ಮಹಿಷಿ ವರದಿ ಅಂಗೀಕಾರಕ್ಕೆ ನಯನಾರ್ ಟೀಕೆ

ಸರೋಜಿನಿ ಮಹಿಷಿ ವರದಿಯನ್ನು ಜಾರಿಗೊಳಿಸಲು ಕರ್ನಾಟಕ ಸರಕಾರ ಕೈಗೊಂಡಿರುವ ಕ್ರಮವನ್ನು ಕೇರಳದ ಮುಖ್ಯಮಂತ್ರಿ ಇ.ಕೆ.ನಯನಾರ್ ತೀವ್ರವಾಗಿ ಖಂಡಿಸಿದ್ದಾರೆ.

ಈ ಸಂಬಂಧ ಇ.ಕೆ.ನಯನಾರ್ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಅಧ್ಯಕ್ಷ ವಿ.ಎಸ್.ಅಚ್ಯುತಾನಂದ್ ಅವರು ಪ್ರಧಾನಿ ಚಂದ್ರಶೇಖರ್ ಅವರಿಗೆ ಪತ್ರ ಬರೆದು ಕರ್ನಾಟಕದ ಈ ಕ್ರಮದ ಬಗ್ಗೆ ಕೂಡಲೇ ಗಮನ ಹರಿಸುವಂತೆ ತಿಳಿಸಿದ್ದಾರೆ.

ಸರೋಜಿನಿ ಮಹಿಷಿ ಆಯೋಗವು ಎಲ್ಲಾ ಸರಕಾರಿ ಹುದ್ದೆಗಳಲ್ಲಿ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರಾಜ್ಯದಲ್ಲಿರುವ ಕೇಂದ್ರ ಉದ್ದಿಮೆಗಳಲ್ಲಿ ಸಂಪೂರ್ಣವಾಗಿ ಕನ್ನಡಿಗರನ್ನೇ ನೇಮಿಸಿಕೊಳ್ಳಬೇಕೆಂದು ಶಿಫಾರಸ್ಸು ಮಾಡಿರುವ ಮಹಿಷಿ ವರದಿಯನ್ನು ಜಾರಿಗೊಳಿಸಲು ಕರ್ನಾಟಕ ಸರಕಾರ ನಿರ್ಧರಿಸಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಕರ್ನಾಟಕ ರಾಜ್ಯ ಸರಕಾರಿ ಸೇವೆಯಲ್ಲಿನ ಎಲ್ಲಾ ಉದ್ಯೋಗಗಳನ್ನು ಕನ್ನಡಿಗರಿಗೇ ಮೀಸಲಿಡಬೇಕೆಂಬ ನಿಲುವು ಭಾರತದ ನಾಗರೀಕರ ಮೂಲಭೂತ ಹಕ್ಕಿನ ಮೇಲಿನ ಪ್ರಹಾರವೆಂದು ನಯನಾರ್ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಕ್ಕೆ ಅಂತಿಮ ತೆರೆ ಎಳೆಯಲು ಬಂಗಾರಪ್ಪ ಅವರು ಪಣ ತೊಟ್ಟಿದ್ದಾರೆಂಬ ವರದಿಗಳನ್ನು ಪ್ರಸ್ತಾಪಿಸಿದ ನಯನಾರ್ "ಆ ವರದಿಗಳು ನಿಜವಾಗಿದ್ದರೆ ಕನ್ನಡ ವಿಸ್ತರಣಾಕಾಂಕ್ಷೆಯಾಗಲು ಬಂಗಾರಪ್ಪ ಹೊರಟಂತಿದೆ" ಎಂದು ಅಭಿಪ್ರಾಯಪಟ್ಟರು.

ಮಣ್ಣಿನ ಮಕ್ಕಳವಾದ ತಪ್ಪು ಹೆಜ್ಜೆ. ಸ್ಥಳೀಯರಿಗೆ ಉದ್ಯೋಗ ಎಂಬ ನೀತಿಯೂ ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟುಮಾಡುತ್ತದೆ. ಇದನ್ನು ಮೊಳಕೆಯಲ್ಲೇ ಚಿವುಟಬೇಕು ಎಂದು ತಾವು ಪತ್ರದಲ್ಲಿ ಬರೆದಿರುವುದಾಗಿ ಅವರು ತಿಳಿಸಿದ್ದಾರೆ.

ಆಕಸ್ಮಾತ್ ಈ ಕ್ರಮ ನಿಜವಾದರೆ ಕರ್ನಾಟಕದಲ್ಲಿರುವ ಉಳಿದ ರಾಜ್ಯದವರ ಪಾಡೇನು ಎಂದು ಅವರು ಆತಂಕವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸರಕಾರದ ಪ್ರಯತ್ನಗಳು ನ್ಯಾಯದ ಎಲ್ಲಾ ನೀತಿ ನಿಯಮಗಳ ವಿರುದ್ಧವಲ್ಲದೆ ರಾಷ್ಟ್ರೀಯ ಏಕತೆಗೆ ಬೆದರಿಕೆ ಒಡ್ಡುತ್ತದೆ ಎಂದು ಅಚ್ಯುತಾನಂದನ್ ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಶಿವಸೇನೆ ಇಂತಹದೇ ಚಳುವಳಿ ಆರಂಭಿಸಿದಾಗ ಕಾಂಗ್ರೆಸ್ ಅದನ್ನು ವಿರೋಧಿಸಿತ್ತು. ಆದರೆ ಈಗ ಕಾಂಗ್ರೆಸ್ ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ನೀತಿಗಳನ್ನು ಬದಿಗೊತ್ತಿದೆ ಎಂದು ತಿಳಿಸಿದ್ದಾರೆ.

ಭಾರತದ ಯಾವುದೇ ನಾಗರೀಕನಿಗೆ ದೇಶದ ಯಾವುದೇ ಸ್ಥಳದಲ್ಲಿಯಾದರೂ ದುಡಿಯುವಹಕ್ಕು ಇದೆ. ಕರ್ನಾಟಕ ಸರಕಾರವು ಈ ಅಸಮರ್ಥನೀಯ ಹಾಗೂ ಆಕ್ಷೇಪಾರ್ಹ ನೀತಿಯನ್ನು ಹಿಂತೆಗೆದುಕೊಳ್ಳಬೇಕೆಂದು ಅಚ್ಯುತಾನಂದ್ ಒತ್ತಾಯಿಸಿದ್ದಾರೆ.

ವಾಟಾಳ್ ಅಪ್ರಲಾಪ

ಸರೋಜಿನಿ ಮಹಿಷಿ ವರದಿ ಬಗ್ಗೆ ನಯನಾರ್ ವಿಮರ್ಶೆಯನ್ನು ಶಾಸಕ ವಾಟಾಳ್ ನಾಗರಾಜ್ ಆಕ್ಷೇಪಿಸಿದ್ದಾರಲ್ಲದೆ ಇತರೆ ಸಂಘಗಳು ಇ.ಕೆ.ನಯನಾರ್ ಪ್ರತಿಕೃತಿ ದಹನ ಮಾಡಿವೆ. ಕನ್ನಡಿಗರು ಎಚ್ಚೆತ್ತುಕೊಳ್ಳದಿದ್ದರೆ ಕರ್ನಾಟಕ ಮತ್ತೊಂದು ಅಸ್ಸಾಂ ಆಗುತ್ತದೆ, ಕರ್ನಾಟಕವನ್ನು ನೆರೆ ರಾಜ್ಯಗಳ 'ಜಹಗೀರಿ' ಮಾಡಲು ಬಿಡುವುದಿಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಸಾರಿದ್ದಾರೆ.

ಮಹಿಷಿ ವರದಿ ಬಗ್ಗೆ ಈಗಾಗಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸ್ಪಷ್ಟ ನಿಲುವು ತಳೆದಿದ್ದು ಬಂಗಾರಪ್ಪನವರ ಕ್ರಮವನ್ನು ವಿರೋಧಿಸಿದೆ. 'ಮಣ್ಣಿನ ಮಕ್ಕಳ ವಾದ' ಎನ್ನುವುದು ದೇಶದ ಏಕತೆಯನ್ನು ಹೇಗೆ ಛಿದ್ರಮಾಡುತ್ತದೆ ಎಂಬುದನ್ನು ತಿಳಿಸಿದೆ.

ಕೇವಲ ರಾಜ್ಯೋತ್ಸವದ ನೇತಾರರಾಗುವವರು ಕರ್ನಾಟಕದ ಚೌಕಟ್ಟಿನಲ್ಲಿ ಕರ್ನಾಟಕದ ಬಗ್ಗೆ ಯೋಚನೆ ಮಾಡುವುದಕ್ಕಿಂತ ರಾಷ್ಟ್ರದ, ವಿಶ್ವದ ಚೌಕಟ್ಟಿನಲ್ಲಿ ಕರ್ನಾಟಕದ ಏಳಿಗೆಯ ಬಗ್ಗೆ ಚಿಂತನೆ ನಡೆಸಿದಾಗ ಮಾತ್ರ ಸರೋಜಿನಿ ಮಹಿಷಿ ವರದಿಯ ಸೀಮಿತತೆ ಅರ್ಥವಾಗುತ್ತದೆ. 'ಎಲ್ಲವೂ ಕನ್ನಡಿಗರಿಗೇ' ಎನ್ನುವ ಅಪ್ರಲಾಪದಿಂದ ಕನ್ನಡಿಗರ ಏಳಿಗೆಗೆ ಧಕ್ಕೆಯಾಗುವುದೇ ಹೆಚ್ಚು.

'ಜಹಗೀರಿ' ಮಾಡಲು ಬಿಡುವುದಿಲ್ಲ ಎಂದು ಸಾರಿರುವ ವಾಟಾಳ್ ಅವರಿಗೆ ನೆರೆ ರಾಜ್ಯಗಳವರೂ ಇತರೆ ರಾಜ್ಯಗಳಿಗೆ ಜಹಗೀರಿ ಕೊಡದೆ ಸುಮ್ಮನಾಗಿಬಿಟ್ಟರೆ ಕರ್ನಾಟಕದ ಕನ್ನಡಿಗರ ಸ್ಥಿತಿ ಏನಾಗುತ್ತದೆ ಎಂಬುದು ಹೊಳೆದಂತಿಲ್ಲ.

ದೇಶ ಈಗಾಗಲೇ ಪಂಜಾಬ್, ಕಾಶ್ಮೀರ, ಅಸ್ಸಾಂ ಸಮಸ್ಯೆಗಳಿಂದ ಛಿದ್ರವಾಗಿರುವಾಗ ಕರ್ನಾಟಕವನ್ನು ಮತ್ತೊಂದು ಅಸ್ಸಾಂ ಮಾಡಲು ಹೊರಟಿರುವ ವಾಟಾಳ್ ಮುಕ್ಕೋಟಿ ಕನ್ನಡಿಗರ ಸ್ವಯಂ ಘೋಷಿತ ನಾಯಕರಾಗಿಬಿಟ್ಟಿದ್ದಾರೆ: ವಾಟಾಳ್‌ರವರ ಹಾದಿ ಗುಲಾಬಿಯ ಹಾದಿಯೇನಲ್ಲ. ಕರ್ನಾಟಕದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳು ವಾಟಾಳ್‌ರ ಅಪ್ರಲಾಪವನ್ನು ಬಗ್ಗುಬಡಿಯಬಲ್ಲವು.

"ಪೂರ್ವಾಗ್ರಹಪೀಡಿತ ಪತ್ರಕರ್ತರು"- --ರಾಂ

"ಇವರೇನು ಪತ್ರಕರ್ತರೋ ಇಲ್ಲ ಕರಸೇವಕರೋ!" ಎಂಬ ಉದ್ಗಾರ ಎಲ್ಲೆಡೆ ತಾಂಡವವಾಡುತ್ತಿರುವುದನ್ನು ಈಗಾಗಲೇ 'ಐಕ್ಯರಂಗ' ವರದಿಮಾಡಿದೆ. ಇದೇ ಉದ್ಗಾರವನ್ನು ಖ್ಯಾತ ಪತ್ರಕರ್ತ ಎನ್.ರಾಂ ಅವರು ಮುಂದಿಟ್ಟು ಇದಕ್ಕೆ ತಕ್ಕಂತೆ ಉದಾಹರಣೆಗಳನ್ನು ನೀಡಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಏರ್ಪಡಿಸಿದ್ದ "ಕೋಮುವಾದ ಮತ್ತು ಮಾಧ್ಯಮ" ಕುರಿತು ಮಾತನಾಡುತ್ತಾ ಪತ್ರಿಕೆಗಳು ರಾಮಜನ್ಮಭೂಮಿ ಮತ್ತು ಮಂಡಲ್ ವರದಿಗೆ ಸಂಬಂಧಿಸಿದಂತೆ ನಿರಾಶಾದಾಯಕ ರೀತಿಯಲ್ಲಿ ನಡೆದುಕೊಂಡಿವೆ ಎಂದಿದ್ದಾರೆ.

ಕರಸೇವಕರು ಸ್ವಾತಂತ್ರ್ಯಹೋರಾಟದಲ್ಲಿ ತೊಡಗಿದ್ದಾರೇನೋ ಎಂಬಂತಹ ಚಿತ್ರಣವನ್ನು ಪತ್ರಿಕೆಗಳು ನೀಡಿದವು. ಮೂಲಭೂತವಾಗಿ ಪೂರ್ವಾಗ್ರಹವಿಲ್ಲದ ವರದಿ ನೀಡಬೇಕು. ಆದರೆ ಸುದ್ದಿಗಳು ಪೂಜ್ಯವಾದದ್ದು ಅಭಿಪ್ರಾಯಗಳು ಸ್ವತಂತ್ರವಾದದ್ದು ಎನ್ನುವ ಕಾಲ ಹೋಗಿದೆ ಎಂದರು.

ಈ ವಿವಾದಗಳಿಗೆ ಸಂಬಂಧಿಸಿದಂತೆ ಪತ್ರಕರ್ತರು ಭಾವಾವೇಶದಿಂದ ವರ್ತಿಸಿದ್ದಾರೆ, ಮಂಡಲ ವರದಿ ಬಗ್ಗೆಯಂತೂ ಪತ್ರಕರ್ತರು ಪೂರ್ವಾಗ್ರಹ ಪೀಡಿತ ವರದಿ ನೀಡಿದರು.

ಮಂಡಲ ವಿರೋಧಿ ನಿಲುವು ತಳೆದದ್ದಕ್ಕಾಗಿ ರಾಂ ಅವರು ಇಂಡಿಯನ್ ಎಕ್ಸ್‌ಪ್ರೆಸ್‌ನಿಂದ ಹೊರದೂಡಲ್ಪಟ್ಟ ಅರುಣ್ ಶೌರಿಯವರನ್ನು ಟೀಕಿಸಿದರು.

ಈಗಲೂ ಪತ್ರಿಕೆಗಳು ಕೋಮುವಾದಿಗಳಿಗೆ ವೇದಿಕೆ ಒದಗಿಸಿಕೊಟ್ಟಿವೆ. ಪತ್ರಿಕೆಗಳು ಕಳೆದ ಒಂದು ದಶಕದಿಂದ ಕೋಮುವಾದವನ್ನು ಅರ್ಥಮಾಡಿಕೊಳ್ಳಲು ವಿಫಲವಾಗಿವೆ ಎಂದು ರಾಂ ಬಣ್ಣಿ-

ಕೋಮುವಾದ ವಿರೋಧಿ ಹೋರಾಟದಲ್ಲಿ ಹೊಸ ಉತ್ಸಾಹ ಮೂಡಿಸಿತು

ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದ 'ಮಾನವ ಸರಪಳಿ' ರಾಜ್ಯಾದ್ಯಂತ ಕೋಮುವಾದದ ವಿರುದ್ಧ ಜಾತ್ಯಾತೀತ ಶಕ್ತಿಗಳ ಹೋರಾಟದಲ್ಲಿ ಹೊಸ ಉತ್ಸಾಹದ ಅಲೆಯು ಎಬ್ಬಿಸಿದೆ. ರಾಜ್ಯದ ಇತರೆಡೆ ಈ ಕಾರ್ಯಕ್ರಮದ ಯಶಸ್ವಿ ವರದಿ.

ಬಿಜಾಪುರ

ಬಿಜಾಪುರದ ಮಹಾತ್ಮ ಗಾಂಧಿ ರಸ್ತೆಯಲ್ಲಿ ಒಂದು ಕಿಲೋ ಮೀಟರಿನಷ್ಟು ಉದ್ದವಿದ್ದ ಮಾನವ ಸರಪಳಿಯಲ್ಲಿ ನೂರಕ್ಕೂ ಹೆಚ್ಚು ಮಹಿಳೆಯರನ್ನೊಳಗೊಂಡ ಸಾವಿರಾರು ಜನರು ದೇಶದ ಐಕ್ಯತೆ ಸಮಗ್ರತೆಯನ್ನು ರಕ್ಷಿಸುತ್ತೇವೆಂದೂ ಹಾಗೂ ಹಿಂದು-ಮುಸ್ಲಿಂ ಕೋಮು ಸೌಹಾರ್ದತೆಯನ್ನು ಕಾಪಾಡುತ್ತೇವೆಂದೂ ಪ್ರತಿಜ್ಞೆ ಮಾಡಿದರು.

ಸಿಪಿಐ(ಎಂ), ಸಿಪಿಐ, ಜನತಾದಳ, ಜನತಾಪಕ್ಷದವರು ಸಂಘಟಿಸಿದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಕರ್ನಾಟಕ ಕೃಷಿ ಕೂಲಿಗಾರರ ಸಂಘ, ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್, ನೂಲಿನ ಗಿರಣಿ ಕೆಲಸಗಾರರ ಸಂಘ, ಮುನಿಸಿಪಲ್ ಕಾಮಗಾರ್ ಯೂನಿಯನ್, ವಿದ್ಯಾರ್ಥಿ ಯುವಜನತೆ, ವಕೀಲರು, ಬುದ್ಧಿಜೀವಿಗಳು, ವ್ಯಾಪಾರಸ್ಥರು, ಹಾಗೂ ಜನವಾದಿ ಮಹಿಳಾ ಸಂಘಟನೆಯವರೆಲ್ಲಾ ಭಾಗವಹಿಸಿದ್ದರು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ.ಉಪಾಧ್ಯಾಯರು ಕೋಮು ಸೌಹಾರ್ದತೆ, ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಯ ಪ್ರತಿಜ್ಞೆ ಓದಿದರು.

ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜನರು ಮೆರವಣಿಗೆಯಲ್ಲಿ ತೆರಳಿ ಬಸವೇಶ್ವರ ಚೌಕದಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಿದರು. ಸಭೆಯ ಅಧ್ಯಕ್ಷತೆಯನ್ನು ನಜಮಾ ಭಾಂಗಿಯವರು ವಹಿಸಿದ್ದರು. ಇವರು ಮುಸಲ್ಮಾನ ಹೆಣ್ಣುಮಕ್ಕಳು ಸಿನೆಮಾ ನೋಡಬಾರದೆಂಬ ಮುಸ್ಲಿಂ ಪಂಥವಾದಿಗಳ ಕರೆಯನ್ನು ಧಿಕ್ಕರಿಸಿ ಬಿಜಾಪುರದಲ್ಲಿ ಹೊಸ ವಿಚಾರಧಾರೆಯ ಅಲೆಯನ್ನು ಎಬ್ಬಿಸಿದವರು. ಸಭೆಯನ್ನುದ್ದೇಶಿಸಿ ಎಸ್.ಡಿ. ಕಪೂರ್, ಮಲ್ಲಿಕಾರ್ಜುನ ಎಂಟಿಗೇರಿ(ಜನತಾದಳ), ಎನ್.ಕೆ.ಉಪಾಧ್ಯಾಯ, ಅಣ್ಣಾರಾಯ ಇರಿಗೇಳ (ಸಿಪಿಐ(ಎಂ)), ಪಿ.ಎಸ್ ಪಾಟೀಲ ವಕೀಲರು, ಪ್ರಕಾಶ ಹಿಟ್ಟಿನಹಳ್ಳಿ (ಸಿಪಿಐ), ಭೀಮಸಿ ಕಲಾದಗಿ(ಪ್ರಾಂತ ರೈತ ಸಂಘ), ಮನ್ನಾಸಾಬ ಕಲಾದಗಿ, ಸದಾನಂದ ಮೋದಿ(-ಡಿವೈಎಫ್‌ಐ), ಡಿ.ಎ. ಮುಲ್ಲಾ, ಮೆಹಬೂಬ್ ಪಾಶಾ ಇನಾಮದಾರ ಮೊದಲಾದವರು ಭಾಷಣ ಮಾಡಿದರು.



ಬಿಜಾಪುರ ಮಾನವ ಸರಪಳಿಯಲ್ಲಿ ಮಹಿಳೆಯರು

ಕೆ.ಜಿ.ಎಫ್

ರಾಜ್ಯಾದ್ಯಂತ ಕೋಮುಸೌಹಾರ್ದದ ಅಂಗವಾಗಿ ಕೆಜಿಎಫ್‌ನಲ್ಲಿ ಮಾನವ ಸರಪಳಿ ಕಾರ್ಯಕ್ರಮ ಬಿಇಎಂಎಲ್ ಮುಖ್ಯದ್ವಾರದಿಂದ, ಟೋಲ್‌ಗೇಟ್-ಪೈಪ್ ಲೈನ್--ಉರ್‌ಗಾಂ ರೈಲ್ವೇ ಸ್ಟೇಷನ್--ಸೂರಜ್ ವೃತ್ತ--ಗಾಂಧಿ ವೃತ್ತ-ಚಾಮರಾಜ ಪೇಟೆ--ಅಂಡರ್‌ಸನ್ ಪೇಟೆ ಮೂಲಕ ಹಾದು ಕೆ.ಎನ್.-ವಾಸನ್ ವೃತ್ತದವರೆಗೆ ಸುಮಾರು ಹತ್ತು ಕಿ.ಮೀ. ಗಳಷ್ಟು ಉದ್ದವಿತ್ತು. ಹತ್ತು ಕಿ.ಮೀ.ಗಳಷ್ಟು ದೂರಗಳಲ್ಲಿ ಧ್ವನಿವರ್ಧಕಗಳನ್ನು ಹಾಕಿ ಸರಿಯಾಗಿ 5.30 ಗಂಟೆಗೆ ಸರಿಯಾಗಿ ತಮಿಳು ಮತ್ತು ಕನ್ನಡದಲ್ಲಿ ದೇಶದ ಐಕ್ಯತೆ ಮತ್ತು ಸಮಗ್ರತೆ ಹಾಗೂ ಕೋಮು ಸೌಹಾರ್ದತೆಯನ್ನು ಕಾಪಾಡುತ್ತೇವೆಂದು ಪ್ರತಿಜ್ಞೆ ಮಾಡಿದರು.

ಈ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರಾದ ಟಿ. ಎಸ್.ಮಣಿ ಅವರ ಮುಖಂಡತ್ವದಲ್ಲಿ ರಾದಕೀಯ ಪಕ್ಷಗಳಾದ ಜನತಾದಳ, ಆರ್‌ಪಿಐ. ಎಐಎಡಿಎಂಕೆ, ಡಿಎಂಕೆ; ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ, ಎಐಡಿಡಬ್ಲ್ಯುಎ ಮತ್ತು ಯುವಜನರು, ವಿದ್ಯಾರ್ಥಿಗಳು, ವಕೀಲರು, ವೈದ್ಯರು, ಉಪಾಧ್ಯಾಯರು, ವ್ಯಾಪಾರಿಗಳು, ಸಮುದಾಯ ಕಾರ್ಯಕರ್ತರು, ತಮಿಳು ಸಂಘಟನೆ ಹಾಗೂ ಎಲ್ಲಾ ಮತಕ್ಕೆ ಸೇರಿದವರು ಈ ಮಾನವ ಸರ-

ಕುಟ್ಟಿಕೃಷ್ಣ

ಐತಿಹಾಸಿಕ ಮಾನವ ಸರಪಳಿ

ಕೋಮುವಾದಿಗಳ ಸವಾಲಿಗೆ ದಿಟ್ಟ ಉತ್ತರ

ವಿಜಯೋತ್ಸವಾಗಿ ಸಾಗುತ್ತಿದ್ದ ಕೋಮುವಾದಿಗಳ ಪ್ರಹಸನಕ್ಕೆ ನಿರ್ಣಾಯಕ ತಡೆ. ಡಿಸೆಂಬರ್ 6--- ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆಯಲ್ಲಿ ಮಹತ್ವದ ದಿನವಾಗಿ ಪರಿವರ್ತನೆ. ಕೋಮು ಸೌಹಾರ್ದತೆಗಾಗಿ ಹೃದಯ--ಹೃದಯಗಳನ್ನು ಬೆಸೆದ ಐತಿಹಾಸಿಕ ಮಾನವ ಸರಪಳಿಯನ್ನು ಪೋಣಿಸಿದ ದಿನ.

ಹಿಂದು, ಮುಸ್ಲಿಂ, ಕ್ರೈಸ್ತ--ಕೂಲಿಗಾರ, ಶ್ರೀಮಂತ ಎನ್ನುವ ಯಾವ ಪ್ರಭೇಧವನ್ನು ಲೆಕ್ಕಿಸದೆ ಜನಸಾಗರ ಕೋಮುವಾದಿ, ಮತೀಯವಾದಿ ಶಕ್ತಿಗಳ ವಿರುದ್ಧ ಸಂಘಟಿಸಿ, ಪ್ರತಿರೋಧವಾಗಿ ಮಾನವ ಸರಪಳಿಯಲ್ಲಿ ಅತ್ಯುತ್ಸಾಹದಿಂದ ಕೈ ಪೋಣಿಸಿದರು. ಮಂಗಳೂರಿನ ಹೃದಯ ಕೇಂದ್ರವಾದ ಬಾವುಟ ಗುಡ್ಡದ ಈದ್ಗಾದಿಂದ ಮೊದಲ್ಗೊಂಡು ಮಿಲಾಗ್ರಿಸ್ ಚರ್ಚ್ ಹಾದು ಶರವು [illegible] ದೇವಾಲಯದವರೆಗೆ ಹೃದಯಗಳ ಬೆಸುಗೆ ನಡೆಯಿತು. ಮುಸ್ಲಿಂ, ಕ್ರೈಸ್ತ, ಹಿಂದು ಧರ್ಮೀಯರ ಪ್ರಾರ್ಥನಾ ಮಂದಿರಗಳನ್ನು ಪೋಣಿಸಿದ ಸರಪಳಿ--ಕೋಮುವಾದವನ್ನು ಮೀರಿ ಜನರ ಐಕ್ಯತೆಯನ್ನು ಸಾಬೀತುಪಡಿಸಿತು. ವಿದ್ಯಾರ್ಥಿಗಳು, ಯುವಜನರು, ಬುದ್ಧಿಜೀವಿಗಳು, ರೈತ-ಕಾರ್ಮಿಕರು, ಪುಟಾಣಿ ಮಕ್ಕಳು--- ರಿಕ್ಷಾ ಚಾಲಕ ಮಹಮ್ಮದ್, ಕಾನ್ವೆಂಟಿನ ಸಿಸ್ಟರ್ ಮೇರಿ, ಹಂಚಿನ ಮಜೂರ ರಾಮಣ್ಣ ಎಲ್ಲರೂ ಬಂದರು. ಒಂದಾಗಿ ನಿಂತರು. ಐದು ಸಾವಿರದಷ್ಟು ಜಮಾಯಿಸಿದರು. ಹಲವು ಕಡೆ ಜನರ ಅತ್ಯುತ್ಸಾಹದಿಂದ ಮಾನವ ಸರಪಳಿ ಗೋಡೆಯಾಗಿ ಪರಿವರ್ತಿಸಲ್ಪಟ್ಟಿತ್ತು.

ಸಂಜೆ 4 ಗಂಟೆಗೆ ಕಂಕನಾಡಿ ಮೈದಾನ,

ದ.ಕ.ಜಿಲ್ಲಾ ವಾರ್ತಾ ಪತ್ರ

ಬಾವುಟ ಗುಡ್ಡ, ಶರವು ದೇವಾಲಯದ ಆವರಣದಲ್ಲಿ ಜಮಾಯಿಸಿದ ಎಲ್ಲಾ ವಿಭಾಗದ ಜನತೆ ಐದು ಗಂಟೆಗೆ ಸರಿಯಾಗಿ ಸರಪಳಿ ಪೋಣಿಸಿ 5-15 ರವರೆಗೆ ಕೋಮು ಸೌಹಾರ್ದತಾ ಪ್ರತಿಜ್ಞೆಗೈದರು. "ನಮ್ಮ ಭಾರತ ದೇಶವು ವಿವಿಧ ಭಾಷೆಗಳನ್ನು ಮಾತನಾಡುವ ಹಾಗೂ ವಿವಿಧ ಧರ್ಮಗಳಲ್ಲಿ ನಂಬಿಕೆ ಇರುವವರು ಒಂದಾಗಿ ಬಾಳಿ ಬದುಕುವ ದೇಶವಾಗಿದೆ...." ಎಂದು ಆರಂಭವಾದ ಪ್ರತಿಜ್ಞೆ ....

"ನಾವೆಲ್ಲರೂ ಭಾರತೀಯರು ಯಾರೂ ಯಾರ ಗುಲಾಮರೂ ಅಲ್ಲ, ಯಾರ ಯಜಮಾನನೂ ಅಲ್ಲ.

ನಾವು ಭಾರತೀಯರೆಲ್ಲರೂ ಭಾರತದ ಹಕ್ಕುದಾರರು

ಭಾರತ ಬೆಳಗಲಿ ! ಭಾರತೀಯರು ಜಯಿಸಲಿ!........."


ಎಂದು ಮಾನವ ಸರಪಳಿಯ ಉದ್ದಗಲಕ್ಕೂ ಜನತೆ ಪ್ರತಿಜ್ಞೆಗೈದರು.

ಡಿವೈಎಫ್‌ಐ, ಎಸ್‌ಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಸಮುದಾಯ, ಯುವ ಜನತಾದಳ, ಎಐವೈಎಫ್, ದಲಿತ ಸಂಘರ್ಷ ಸಮಿತಿ, ವಿಚಾರವಾದಿ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಐತಿಹಾಸಿಕ ಮಾನವ ಸರಪಳಿಗೆ ಸರ್ವ ಸಿದ್ಧತೆಗಳನ್ನು ಯಶಸ್ವಿಯಾಗಿ ಮಾಡಲಾಗಿತ್ತು. ಸಿಪಿಐ(ಎಂ), ಸಿಪಿಐ ಮತ್ತು ಜನತಾದಳ ಪಕ್ಷಗಳು ಪೂರ್ಣವಾಗಿ ಕಾರ್ಯಕ್ರಮದ ಯಶಸ್ಸಿಗಾಗಿ ದುಡಿದವು. ಫ್ಯಾಕ್ಟರಿಯಿಂದ ಕಾರ್ಮಿಕರು, ದುಡಿಮೆಯ ನೆಲದಿಂದ ರೈತರು, ಶಾಲಾ-ಕಾಲೇ-ಜುಗಳಿಂದ ವಿದ್ಯಾರ್ಥಿಗಳು, ಎಲ್ಲಾ ವಿಭಾಗದ ಯುವಜನತೆ, ಮಹಿಳೆಯರು ಛಲತೊಟ್ಟು ಕಾರ್ಯಕ್ರಮ ಅಭೂತಪೂರ್ವವಾಗಿ ಯಶಸ್ವಿ-ಯಾಗಲು ದುಡಿದರು. ದಿನನಿತ್ಯವೂ ಹತ್ತಾರು ವಿಭಾಗದ ಸಂಘಟನೆಗಳಿಂದ ಬೆಂಬಲದ ಕೇಳಿಕೆಗಳು ಹರಿದುಬಂದವು. ಜನತೆಯ ಕಾರ್ಯಕ್ರಮವಾಗಿ ಪರಿವರ್ತಿಸಲ್ಪಟ್ಟಿತು.

ಅದ್ವಾನಿ ಬಂಟರನ್ನು ಚಕಿತಗೊಳಿಸಿದ ಸಾರ್ವಜನಿಕ ಸಭೆ

ವಿಫಲ [illegible] ಪ್ರಯತ್ನದ ನಂತರ [illegible]

ಪುಟ 4



ಮಂಗಳೂರಿನಲ್ಲಿ ಹೆಣೆದ ಸರಪಳಿಯ ಒಂದು ದೃಶ್ಯ

ಡಿವೈಎಫ್‌ಐ ದಶಮಾನೋತ್ಸವ ವರ್ಷ:

ರಾಜ್ಯದ ರಾಜಧಾನಿಯಲ್ಲಿ ಮೊಳಗಿದ ಯುವ ಧ್ವನಿ!

ಡಿಸೆಂಬರ್ 8. ಮೈಕೊರೆಯುವ ಚಳಿ. ಬೆಂಗಳೂರು ನಗರದ ಬೀದಿಗಳು ಇನ್ನೂ ಎಚ್ಚೆತ್ತು ಕೊಂಡಿರಲಿಲ್ಲ. ರೈಲ್ವೆ ನಿಲ್ದಾಣ--ಬಸ್ ನಿಲ್ದಾಣ ಎಲ್ಲೆಲ್ಲೂಹರಿದಾಡುತ್ತಿದ್ದ ಯುವ ಚೇತನಗಳು. ಯುವಕರು ಯುವತಿಯರು. ಕೆಂಪು ಚುಕ್ಕೆಯ ಶ್ವೇತ ಪತಾಕೆ ಉತ್ಸಾಹಕ್ಕೆ ಮೆರುಗು ನೀಡಿತ್ತು.ಹೈದರಾಬಾದ್ ಎಕ್ಸ್‌ಪ್ರೆಸ್- ಉದ್ಯಾನ ಎಕ್ಸ್‌ಪ್ರೆಸ್, ಕರ್ನಾಟಕ ಎಕ್ಸ್‌ಪ್ರೆಸ್, ಮಂಗಳೂರು ಎಕ್ಸ್‌ಪ್ರೆಸ್-ಎಲ್ಲವೂ ತನ್ನ ಒಡಲ ತುಂಬ ಯುವಜನರನ್ನು ತುಂಬಿ ಬಂದಿದ್ದವು. ಡಿ.ವೈ.ಎಫ್.ಐ.-ಕರ್ನಾಟಕ ರಾಜ್ಯ ಸಮಿತಿಯು ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಆಗ್ರಹಿಸಿ, ಉದ್ಯೋಗ ಮೂಲಭೂತ ಹಕ್ಕನ್ನಾಗಿಸುವ ಕಡೆ ಆಳುವ ವರ್ಗದ ಗಮನ ಸೆಳೆಯಲು, ನಿರುದ್ಯೋಗ ಪರಿಹಾರ ಭತ್ಯೆಗಾಗಿ ಒತ್ತಾಯಿಸಲು -ಬೆಂಗಳೂರು ಚಲೋ ಕಾರ್ಯಕ್ರಮಕ್ಕೆ ಕರೆ ನೀಡಿತ್ತು. ರಾಜ್ಯದ ಎಲ್ಲಾ ಕಡೆಗಳಿಂದಲೂ ಸಹಸ್ರಾರು ಯುವಜನತೆ ಅತ್ಯುತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದರು.

ನಿಷೇದಾಜ್ಞೆಯ ನೆಪ ಹೇಳಿ ರ್‍ಯಾಲಿ ನಡೆಸಲು ಪೋಲೀಸ್ ಇಲಾಖೆಯಿಂದ ಹಲವಾರು ಅಡ್ಡಿ, ಫ್ಯಾಸಿಸ್ಟ್ ಶಕ್ತಿಗಳಿಗೆ "ಭಜನೆ" "ಕರಸೇವೆಗೆ" ಮುಕ್ತಅವಕಾಶ ನೀಡಿ ನೂರಾರು ಅಮಾಯಕ ಜನ ಕೋಮು ದಳ್ಳುರಿಗೆ ಬಲಿಯಾಗಲು ಮೌನ ಸಮ್ಮತಿ ನೀಡುವ-ಕಾನೂನು ರಕ್ಷಕರು ಪ್ರಜಾಪ್ರಭುತ್ವ ರೀತಿಯಲ್ಲಿ ಜನತೆ ಬೇಡಿಕೆ ಮುಂದಿಡಲು ಮಾತ್ರ ಅವಕಾಶ ನೀಡರು! ಕೊನೆಗೂ ನಾನಾ ವಿಚಾರಣೆ ನಂತರ ಅವರು ನೀಡಿದ ರೋಡಿನಲ್ಲಿ ಮೆರವಣಿಗೆ ನಡೆಸಲು ಅವಕಾಶ ಕಲ್ಪಿಸಲಾಯಿತು. ಚಿಕ್ಕ ಲಾಲ್ ಭಾಗ್‌ನಿಂದ ಮಧ್ಯಾಹ್ನ 2 ಗಂಟೆಗೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಯುವಜನತೆ ಮೆರವಣಿಗೆ ಹೊರಟು ನೂತನ ಮಾರ್ಗಗಳಲ್ಲಿ ಸಾಗಿ ಸಿಲ್ವರ್ ಜುಬಿಲಿ ಪಾರ್ಕ್ ತಲುಪಿತು.

"ವಿಜಯನಗರ ಉಕ್ಕಿನ ಕಾರ್ಖಾನೆ ಆರಂಭಿಸಿರಿ" , "8ನೇ ಪಂಚವಾರ್ಷಿಕ ಯೋಜನೆ ಜಾರಿಗೊಳಿಸಿರಿ" , "ನಿರುದ್ಯೋಗ ಭತ್ತೆನೀಡಿರಿ" , "ಉದ್ಯೋಗ ಮೂಲಭೂತ ಹಕ್ಕನ್ನಾಗಿಸಿರಿ" , "ಕೋಮುವಾದಿ ಶಕ್ತಿಗಳಿಗೆ ಧಿಕ್ಕಾರ",....ಹೀಗೆ ಬೇಡಿಕೆಗಳ -ಆಶಯಗಳ ಘೋಷಣೆಗಳು ನಗರದ ತುಂಬಾ ಪ್ರತಿಧ್ವನಿಸಿದವು. ರಾಜ್ಯ ಡಿ.ವೈ.ಎಫ್.ಐ ಮುಖಂಡರುಗಳಾದ ಎಚ್.ಎಸ್. ನಾಗಮೋಹನ್‌ದಾಸ್, ಎಸ್.ಶಿವರಾಂ, ಆರ್.ಜಯಕುಮಾರ್, ಶಿವಶಂಕರ್‌ರವರುಗಳುಮೆರವಣಿಗೆಯ ನೇತೃತ್ವವಹಿಸಿದ್ದರು.

ಬಹಿರಂಗ ಸಭೆ
ಆಳುವ ವರ್ಗಕ್ಕೆ ಎಚ್ಚರಿಕೆ

ಸಿಲ್ವರ್ ಜುಬಲಿ ಪಾರ್ಕ್‌ನಲ್ಲಿ ಜಮಾಯಿಸಿದ ಯುವಜನರು ಸಾರ್ವಜನಿಕ ಸಭೆಯಾಗಿ ರೂಪಗೊಂಡರು. ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷರಾದ ಎಚ್.ಎಸ್. ನಾಗಮೋಹನ್ ದಾಸ್ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯುನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ಅಧ್ಯಕ್ಷರೂ-ಹಿರಿಯ ಕಾರ್ಮಿಕ ಮುಂದಾಳುವೂ ಆಗಿರುವ ಎಸ್.ಸೂರ್ಯನಾರಾಯಣ ರಾವ್ ರವರು ಇಕೋಮುವಾದದ ಅಪಾಯದ ಬಗ್ಗೆ ಯುವಜನತೆ ಜಾಗ್ರತರಾಗಲು-ಮೂಲಭೂತ ಸಮಸ್ಯೆಗಳ ಬಗ್ಗೆ ಹೋರಾಡಲು ರಾಜ್ಯದಲ್ಲಿ ಪ್ರಬಲ ಯುವಜನ ಸಂಘಟನೆ ಕಟ್ಟಿ ಬೆಳಸಲು ಕರೆ ನೀಡಿದರು.

ಅಪಾರ-ತ್ಯಾಗಬಲಿದಾನಗಳಿಂದ ಪಡೆದ ಸ್ವಾತಂತ್ರ್ಯ ನಾರಿ-ನರಿಗಳಪಾಲಾಗಲು ಖಂಡಿತಾ ಅವಕಾಶ ಕೊಡಲಾರೆವು ಎಂದು ರಾಜ್ಯ ಡಿ.ವೈ.-ಎಫ್.ಐ. ಸಹ ಕಾರ್ಯದರ್ಶಿ ಆರ್.ಜಯಕುಮಾರ್ ದೃಢವಾಗಿ ಹೇಳಿದರು. ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಮುಂದೆ ಪ್ರಬಲವಾದ ಜಂಟಿ ಹೋರಾಟ ರೂಪಿಸಲಾಗುವುದೆಂದು ಜಂಬಯ್ಯನಾಯಕ್ ವ್ಯಕ್ತಪಡಿಸಿದರು. ಡಿ.ವೈ.ಎಫ್.ಐ. ಕಾರ್ಯದರ್ಶಿ ಮೊದಲಿಗೆ ಸ್ವಾಗತಿಸಿ ಮಾತನಾಡುತ್ತಾ ರಾಜ್ಯದಲ್ಲಿ ಮುಂದಿನ ವರ್ಷಗಳಲ್ಲಿ ಪ್ರಬಲ ಯುವ ಚಳುಗಳು ಬೆಳೆದು ಬರಲಿದೆ ಎಂದುತಿಳಿಸಿದರು. ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ಪ್ರಾಂತ ರೈತ ಸಂಘದ ಮುಂದಾಳು ಜಗನ್ನಾಥ್, ಶುಭಕೋರಿ ಮಾತನಾಡಿದರು. ಕಾಂ.ಶಿವಶಂಕರ್ ವಂದಿಸಿದರು.

ಹೋರಾಟ -ಖಾತರಿಯಾದ ಫಲಿತಾಂಶದ ದೃಢತೆಯೊಂದಿಗೆ ಯುವಜನತೆ ಮರಳಿದರು.

-ಕುಮಾರ್ ಕುಂದಾಪುರ

ನಿಮ್ಮ ಪ್ರಶ್ನೆ-ನಮ್ಮ ಉತ್ತರ

? ಪ್ರಜಾಸತ್ತಾತ್ಮಕ ಪ್ರಗತಿಪರ ಹೋರಾಟಗಳಲ್ಲಿ ಮಹಿಳೆಯ ಪಾತ್ರದ ಬಗ್ಗೆ ವಿವರಣೆ ನೀಡಿ.

ಮಹಿಳೆ ಪ್ರಥಮ ಶೋಷಿತೆ. ಮಹಿಳೆಯ ವಿಮೋಚನೆ ಬಹುಶಃ ಎಲ್ಲಕ್ಕಿಂತಲೂ ಕೊನೆಯದು ಎನ್ನಲಾಗುತ್ತದೆ. ಆದ್ದರಿಂದ ಸಮಾಜದ ಎಲ್ಲಾ ವಿಭಾಗಗಳ ವಿಮೋಚನಾ ಹೋರಾಟದಲ್ಲಿ ಆಕೆ ಭಾಗವಹಿಸುವುದು ಅತ್ಯಗತ್ಯ. ಮಹಿಳೆ ಭಾಗವಹಿಸದೆ ಯಾವುದೇ ವಿಭಾಗದ ಹೋರಾಟ ಸಂಪೂರ್ಣವಾಗದು.

ಪ್ರಜಾಸತ್ತಾತ್ಮಕ ಹೋರಾಟ ,ಭಾರತದಲ್ಲಿ ಮುಖ್ಯವಾಗಿ ಪಾಳೆಯಗಾರಿ ವಿರೋಧಿ ಹೋರಾಟ. ಇದಕ್ಕೆ ಹಲವು ಆಯಾಮಗಳಿವೆ. ಪಾಳೆಯಗಾರಿ ಭೂ ಸಂಬಂಧಗಳ ವಿರುದ್ಧ ಹೋರಾಟದಲ್ಲಿ ಮಹಿಳೆ ದೊಡ್ಡ ರೀತಿಯಲ್ಲಿ ಭಾಗವಹಿಸದೆ ಅದು ಸಫಲವಾಗುವುದು ಸಾಧ್ಯವಿಲ್ಲ. ಏಕೆಂದರೆ ಸಣ್ಣ, ಮಧ್ಯಮ ರೈತರ ಕುಟುಂಬ ಶ್ರಮದಲ್ಲಿ, ಭೂಹೀನ ಕೃಷಿ ಕೂಲಿಗಳಲ್ಲಿ ಮಹಿಳೆಯರ ಪಾತ್ರ ಗಣನೀಯವಾದದ್ದು. (ಇನ್ನು ಪಾಳೆಯಗಾರಿ ಸಾಮಾಜಿಕ) ಮೌಲ್ಯಗಳ ವಿರುದ್ಧ ಹೋರಾಟದಲ್ಲಿ ಮಹಿಳೆಯರ ಪಾತ್ರ ಅಷ್ಟೇ ಮಹತ್ವದ್ದು. ಸತಿ ಪದ್ಧತಿ, ದೇವದಾಸಿ ಪದ್ಧತಿ ಅಜ್ಞಾನ, ಮೂಢ ನಂಬಿಕೆಗಳು, ಇವುಗಳ ವಿರುದ್ಧ ಹೋರಾಟದಲ್ಲಿ ಮಹಿಳೆ ಪಾತ್ರ ವಹಿಸದೆ ಸಾಧ್ಯವಿಲ್ಲ. ಸಾಕ್ಷರತೆಯ ಹೋರಾಟದಲ್ಲಿ ಮಹಿಳೆ ತೊಡಗದೆ, ಪೂರ್ಣ ಸಾಕ್ಷರತೆ ಕನಸಿನ ಮಾತು.

ಕಾರ್ಮಿಕ ವರ್ಗ ಮತ್ತು ಇತರ ದುಡಿಯುವ ವರ್ಗಗಳ ವರ್ಗ ಹೋರಾಟದಲ್ಲಿ, ಆ ವರ್ಗದ ಮಹಿಳೆಯ ಪಾತ್ರ ತುಂಬಾ ಕಡಿಮೆಯಿದೆ. ತನ್ನ ವರ್ಗದ ಹೋರಾಟದಲ್ಲಿ ಪುರುಷರೊಡನೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡದೆ ಮಹಿಳಾ ಕಾರ್ಮಿಕರ ವಿಶಿಷ್ಟ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿಲ್ಲ.

ಎಲ್ಲಾ ವರ್ಗಗಳ ಜನರನ್ನು ಕಾಡುವ ಬೆಲೆ ಏರಿಕೆ, ನಿರುದ್ಯೋಗ, ಕೋಮು ಗಲಭೆಗಳ ವಿರುದ್ಧ ಜನತೆಯ ಪ್ರತಿರೋಧದಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು. ಸಾಮ್ರಾಜ್ಯಶಾಹಿ ಯುದ್ಧಕೋರತನದ ವಿರುದ್ಧ ವಿಶ್ವ ಶಾಂತಿಗಾಗಿ ಜಾಗತಿಕ ಹೋರಾಟದಲ್ಲಿ ಮಹಿಳೆಯರ ಪಾತ್ರ ಅಷ್ಟೇ ಮುಖ್ಯವಾದುದು. ಇವಲ್ಲದೆ ಹೊಸ ಜನಾಂಗದಲ್ಲಿ ಪ್ರಜಾಸತ್ತಾತ್ಮಕ ಪ್ರಗತಿಪರ ಮೌಲ್ಯಗಳನ್ನು ಬಿತ್ತುವುದರಲ್ಲಿ ಮಹಿಳೆಯರದ್ದು ವಿಶಿಷ್ಟ ಪಾತ್ರ.

ಎಡ, ಜಾತ್ಯಾತೀತ ಶಕ್ತಿಗಳ ಸಹಕಾರ ರೂಪುಗೊಳ್ಳುತ್ತಿದೆ.

ಎಡ ಪಕ್ಷಗಳ ಮುಖಂಡರು, ವಿ.ಪಿ.ಸಿಂಗ್ ಹಾಗೂ ಇತರ ಜನತಾದಳದ ಮುಖಂಡರು ಜಾತ್ಯಾತೀತ ಶಕ್ತಿಗಳ ಹೋರಾಟವನ್ನು ಜನರ ರಡುವೆ ಕೊಂಡೊಯ್ಯುತ್ತಿದ್ದಾರೆ. ಅದಕ್ಕೆ ಜನರ ಉತ್ಸಾಹಕಾರಿ ಸ್ಪಂದನವೂ ದೊರೆಯುತ್ತಿದೆ.

ಜನತಾದಳದೊಂದಿಗೆ ಎಡಪಕ್ಷಗಳ ಈ ಸಹಕಾರದ ರಾಜಕೀಯ ಮಹತ್ವವೇನು, ಎಡ-- ಪ್ರಜಾಪ್ರಭುತ್ವ ಐಕ್ಯತೆ ಕಟ್ಟುವ ನಮ್ಮ ದೀರ್ಘಕಾಲದ ಯೋಜನೆಯಲ್ಲಿ ಜಾತ್ಯಾತೀತ ಶಕ್ತಿಗಳ ಈ ಸಹಕಾರದ ಪಾತ್ರವೇನು?

ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ: ಹರ್ಕಿಶನ್ ಸಿಂಗ್ ಸುರ್ಜಿತ್ ವಿವರಿಸುತ್ತಾರೆ.

ಈಚೆರ ಚುನಾವಣೆಗಳಲ್ಲಿ ಹಾಗೂ ನಂತರ ನಡೆದ ಹೋರಾಟಗಳ ಫಲಿತಾಂಶವಾಗಿ ಈಗ ದೇಶದಲ್ಲಿ ಮೂರು ಭಿನ್ನ ರಚನೆಗಳು ಅಸ್ತಿತ್ವಕ್ಕೆ ಬಂದಿವೆ. ಮೊದಲನೆಯದು, ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳಿಂದ ದೂರತಳ್ಳಲ್ಪಟ್ಟಿರುವ ಬಿ.ಜೆ.ಪಿ., ಎರಡನೆಯದು ತಮ್ಮ ಮೈತ್ರಿ ಏಕೆ ಎಂದು ಇನ್ನೂ ಜನತೆಗೆ ತಿಳಿಹೇಳದ ಕಾಂಗ್ರೆಸ್(ಐ)--ಜನತಾದಳ(ಎಸ್)ನ ಪ್ರಜಾಪ್ರಭುತ್ವ- ವಿರೋಧಿ ವಿಧಾನಗಳ ಮೂಲಕ ರಚನೆಗೊಂಡ ಅಪವಿತ್ರ ಕೂಟ ಹಾಗೂ ಮೂರನೆಯದು ಜನತಾದಳ-ಎಡಪಕ್ಷಗಳ ಮೈತ್ರಿ.

ಎಡಪಕ್ಷಗಳು ಜನರ ಆದೇಶಕ್ಕೆ ಸಂಪೂರ್ಣ ಗೌರವ ನೀಡಿ ಸರಕಾರಕ್ಕೆ ತಮ್ಮ ಬೆಂಬಲ ನೀಡುವ ನಿಲುವಿಗೆ ಬದ್ಧವಾಗಿದ್ದವು ಎಂಬುದು ಜನತಾದಳಕ್ಕೆ ತನ್ನೆಲ್ಲಾ ಚಂಚಲ ನಿಲುವುಗಳ ಮೂಲಕವೇ ಮನವರಿಕೆಯಾಗಿದೆ.ಅತ್ತ ಕೋಮುವಾದ ಹಾಗೂ ಪ್ರತ್ಯೇಕತಾವಾದದ ವಿರುದ್ಧ ಸಮಾನ ನಿಲುವು ತಳೆದುದರಿಂದ ಈ ಪ್ರಶ್ನೆಗಳು ಅವರನ್ನು ಇನ್ನೂ ಹತ್ತಿರ ತಂದವು. ಘಟನೆಗಳ ಒತ್ತಡದಿಂದಾಗಿ ಜನತಾದಳ ತನ್ನ ಹಿಂದಿನ ಚಂಚಲತೆಗಳನ್ನು ತ್ಯಜಿಸಿದೆ. ಆದ್ದರಿಂದಲೇ ಕೋಮುವಾದದ ಪ್ರಶ್ನೆಯ ಮೇಲೆ ಒಂದು ದೇಶವ್ಯಾಪಿ ಪ್ರಚಾರ ಕೈಗೊಳ್ಳಲು ಎಡಪಕ್ಷಗಳು ಹಾಗೂ ಜನತಾದಳ ನಿರ್ಧರಿಸಿವೆ.

ನವೆಂಬರ್ 24 ರಂದು ಬಿಹಾರದಲ್ಲಿ ಆಗಲೇ ಇದು ಆರಂಭವಾಗಿದೆ. ಇದಕ್ಕೆ ಜನತೆಯ ಅಭೂತಪೂರ್ವ ಸ್ಪಂದನವೂ ದೊರೆತಿದೆ. ತಮಿಳುನಾಡು, ಕೇರಳ, ಕರ್ನಾಟಕ, ಉತ್ತರಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಈ ಪಕ್ಷಗಳು ತಮ್ಮ ಪ್ರಚಾರ ಪ್ರಕ್ಷೋಭೆ ನಡೆಸಲಿವೆ. ಒಂದು ಸಮನ್ವಯ ಸಮಿತಿಯನ್ನು ರಚಿಸಲೂ ನಿರ್ಧರಿಸಲಾಗಿದೆ.

ಇದರಲ್ಲಿ ಸಮಾನ ಕಾರ್ಯಕ್ರಮವೂ ಇರುತ್ತದೆಯೇ? ಈ ಪ್ರಶ್ನೆಯನ್ನು ಎತ್ತಲಾಗಿದೆ. ಈ ಬಗ್ಗೆ ನಮ್ಮ ಪಕ್ಷದೊಳಗಾಗಲೀ, ಎಡ ಪಕ್ಷಗಳ ನಡುವೆಯಾಗಲೀ ಚರ್ಚೆ ನಡೆದಿಲ್ಲ. ಇಂತಹ ಸಮಾನ ಕಾರ್ಯಕ್ರಮ ಬೇಕೆಂದು ಒತ್ತಾಯಿಸದರೆ ಈಗಾಗಲೇ ಒಮ್ಮತವಿರುವ ವಿಷಯಗಳ ಮೇಲೆ ಎಡಪಕ್ಷಗಳು ಹಾಗೂ ಜನತಾದಳದೊಡನೆ ಸಹಕಾರ ಖಂಡಿತ ಸಾಧ್ಯ ಎಂಬುದು ನಮ್ಮ ನಿಲುವು. ಇಂತಹ ಒಮ್ಮತದ ವಿಷಯಗಳಿಗೂ ಬರವಿಲ್ಲ.

ಇಂತಹ ಹಲವು ವಿಷಯಗಳಲ್ಲಿ ಸಹಕಾರ ರೂಪಿಸಲು ಸಮನ್ವಯ ಸಮಿತಿ ಒಂದು ಸಾಧನವಾಗಿ ಕೆಲಸ ಮಾಡುತ್ತದೆ. ಈಗಾಗಲೇ ಎಡಪಕ್ಷಗಳು ಹಾಗೂ ಜನತಾದಳ ಕಟಿಬದ್ಧವಾಗಿರುವ ರಾಷ್ಟ್ರೀಯ ಐಕ್ಯತೆ, ಪ್ರಜಾಪ್ರಭುತ್ವದ ರಕ್ಷಣೆಯ ವಿಷಯದಲ್ಲಷ್ಟೇ ಅಲ್ಲ ಇತರ ಪ್ರಮುಖ ವಿಷಯಗಳ ಬಗ್ಗೆಯೂ ಒಂದು ಸಮಾನ ನಿಲುವನ್ನು ರೂಪಿಸುವುದು ಜಂಟಿ ಹೋರಾಟಗಳ ಮೂಲಕವೇ ಸಾಧ್ಯ.

ಈಗಿನ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್(ಐ) ಮೇಲೆ ಅವಲಂಬಿಸಿರುವ ಸರಕಾರ ಕಾಂಗ್ರೆಸ್(ಐ) ಚುನಾವಣೆಗೆ ಸಮಯ ಸೂಕ್ತವಾಗಿದೆ ಎಂದು ನಿರ್ಧರಿಸುವವರೆಗೆ ಮಾತ್ರ ಉಳಿಯಬಲ್ಲುದು. ಸಂವಿಧಾನದ ಪ್ರಕಾರ ಬಜೆಟ್‌ಗೆ ಮಂಜೂರಾತಿ ಕೇವಲ ಸಂಸತ್ತು ಮಾತ್ರ ನೀಡಲು ಸಾಧ್ಯ. ಆದ್ದರಿಂದ ಸಂಸತ್ತಿನಲ್ಲಿ ಬಜೆಟ್ ಮಂಡಿಸಿದ ಮೇಲೆ ಕಾಂಗ್ರೆಸ್(ಐ) ಪರಿಸ್ಥಿತಿಯನ್ನು ಸಂಪೂರ್ಣವಾಗಿ ಮತ್ತೆ ಪರಿಶೀಲಿಸುತ್ತದೆ. ಏಕೆಂದರೆ ಅದು ಕಾಂಗ್ರೆಸ್(ಐ)ನ ಚುನಾವಣಾ ಕಾರ್ಯಕ್ರಮವನ್ನು ತಟ್ಟುತ್ತದೆ.

ಈ ಹಿನ್ನೆಲೆಯಲ್ಲಿ ನಾವೂ ಕೂಡಾ ಮುಂಬರುವ ಚುನಾವಣೆಗಳು ನಿರ್ಣಾಯಕವಾಗಲಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಎಡಪಕ್ಷಗಳು, ಜನತಾದಳ ಹಾಗೂ ರಾಷ್ಟ್ರೀಯ ರಂಗದ ಐಕ್ಯತೆಯನ್ನು ಬಲಗೊಳಿಸುವುದು ಅಗತ್ಯ. ಈ ಪ್ರಕ್ರಿಯೆ ಆಗಲೇ ಆರಂಭವಾಗಿದೆ.

ಸಧ್ಯದ ಪ್ರಚಾರದಲ್ಲಿ ವಿ.ಪಿ.ಸಿಂಗ್ ಹಾಗೂ ಇತರ ಜನತಾದಳ ಮುಖಂಡರು ಹಾಗೂ ಎಡಪಕ್ಷಗಳು ಇಂತಹ ಐಕ್ಯತೆಯ ಮಹತ್ವ ಹಾಗೂ ಅಗತ್ಯವನ್ನು ಒತ್ತಿ ಹೇಳಿತ್ತಿದ್ದಾರೆ. ಮೇಲೆ ಹೇಳಿದಂತೆ ಇಂತಹ ಪ್ರಕ್ರಿಯೆಯ ಮೂಲಕವೇ ದೇಶದ ಐಕ್ಯತೆಗೆ ದಿನೇ ದಿನೇ ಹೆಚ್ಚೆಚ್ಚು ಅಪಾಯಕಾರಿಯಾಗುತ್ತಿರುವ ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಜನರನ್ನು, ದೇಶವನ್ನು ಒಗ್ಗಟ್ಟಾಗಿ ಇಡಬಲ್ಲ ಏಕೈಕ ಮಾರ್ಗವಾದ ಜಾತ್ಯಾತೀತ ಮೌಲ್ಯಗಳ ರಕ್ಷಣೆ ಮಾಡುವ ಹಾಗೂ ತಮ್ಮ ಸಮಯಸಾಧಕ ಧೋರಣೆಗಳಿಂದ ದೇಶದ ಐಕ್ಯತೆಗೆ ಅಪಾಯ ತಂದಿರುವ, ಆರ್ಥಿಕ ದುರ್ದೆಸೆ ತಂದಿರುವ ಕಾಂಗ್ರೆಸ್(ಐ) ಹಾಗೂ ಅದರ ಮಿತ್ರರನ್ನು ಸೋಲಿಸುವ ಇಬ್ಬಗೆಯ ಗುರಿ ಸಾಧಿಸಲು ಸಾಧ್ಯ. ಈ ಗುರಿ ಸಾಧನೆಗಾಗಿ ಎಡಪಕ್ಷಗಳು, ಜನತಾದಳ ಹಾಗೂ ರಾಷ್ಟ್ರೀಯರಂಗ ಸೂಕ್ತ ಹೊಂದಾಣಿಗೆಗೆ ಬರುವುದು ಹಾಗೂ ಪರಸ್ಪರ ಬೆಂಬಲ ನೀಡುವುದು ಅಗತ್ಯ.

> "ಸಧ್ಯದ ಹೊಂದಾಣಿಕೆ ಎಡ-ಪ್ರಜಾಪ್ರಭುತ್ವ ಐಕ್ಯತೆ ಕಟ್ಟುವ ಪ್ರಕ್ರಿಯೆಗೆ ನೆರವಾಗಬಲ್ಲದು. ಆದರೆ ಇದೇ ಎಡ--ಪ್ರಜಾಪ್ರಭುತ್ವ ಐಕ್ಯತೆ ಎಂದು ಮಾತ್ರ ಗೊಂದಲಮಾಡಿಕೊಳ್ಳಬಾರದು. ಏಕೆಂದರೆ ಸಧ್ಯದ ಸಹಕಾರ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿವರ್ತನೆಯ ಒಂದು ಕಾರ್ಯಕ್ರಮದ ಮೇಲೆ ಆಧರಿಸಿಲ್ಲ. ಆದರೆ ಈ ಸಹಕಾರದ ಮಹತ್ವವನ್ನೂ ನಿರ್ಲಕ್ಷಿಸಬಾರದು"

ನಾವು ಪ್ರತ್ಯೇಕ ಪ್ರಣಾಳಿಕೆಗಳೊಂದಿಗೆ ಚುನಾವಣೆಯ ಕಣಕ್ಕಿಳಿಯುತ್ತೇವೆ, ಆದರೆ ಪರಸ್ಪರ ನಿಕಟ ಸಹಕಾರ ಇಟ್ಟುಕೊಳ್ಳುತ್ತೇವೆಎಂದು ವಿ.ಪಿ.ಸಿಂಗ್ ತನ್ನ ಇತ್ತೀಚಿನ ಹೇಳಿಕೆಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.ಮುಂದಿನ ಸನ್ನಿವೇಶ ಹಾಗೂ ಚುನಾವಣಾ ಫಲಿತಾಂಶಗಳ ಆಧಾರದ ಮೇಲೆ ಮುಂದಿನ ದಾರಿ ನಿರ್ಧರಿಸಬಹುದು. ಆದರೆ ನಮ್ಮ ಗುರಿ ಸ್ಪಷ್ಟವಾಗಿರಬೇಕು. ನಾವು ಇಡುವ ಪ್ರತಿಯೊಂದು ಹೆಜ್ಜೆಯೂ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನವನ್ನು ಮುಂದೆ ಕೊಂಡೊಯ್ಯುವಂತಿರಬೇಕು. ಇದರ ಸ್ವರೂಪ ಹೇಗಿಬೇಕು ಎಂಬುದು ನಿರ್ದಿಷ್ಟ ಸನ್ನಿವೇಶವನ್ನು ಅವಲಂಬಿಸಿರುತ್ತದೆ.

ಜನತಾದಳದೊಂದಿಗೆ ಈ ಸಹಕಾರ ಮತ್ತು ಎಡ-ಪ್ರಜಾಪ್ರಭುತ್ವ ಐಕ್ಯತೆಯ ಘೋಷಣೆಯ ನಡುವೆ ಗೊಂದಲ ಮಾಡಿಕೊಳ್ಳಬಾರದು. ಎಡ-ಪ್ರಜಾಪ್ರಭುತ್ವ ಐಕ್ಯತೆ ಕಟ್ಟುವಲ್ಲಿ ಸಾಮೂಹಿಕ ಆಂದೋಲನಗಳ ಮೂಲಕ, ವರ್ಗ ಸಮರಗಳಿಗೆ ನೇತೃತ್ವ ನೀಡುವ ಮೂಲಕ ದೇಶದಲ್ಲಿ ವರ್ಗಶಕ್ತಿಗಳ ಬಲಾಬಲವನ್ನು ಕಾರ್ಮಿಕ ವರ್ಗ ಹಾಗೂ ದುಡಿಯುವ ಜನಸಮೂಹಗಳ ಪರವಾಗಿ ಬದಲಿಸುವ ಸಹನವಾದ ಕರ್ತವ್ಯ ನಮ್ಮ ಮೇಲಿರುತ್ತದೆ. ಈ ಪ್ರಕ್ರಿಯೆಯಲ್ಲಿ ಗುತ್ತೇದಾರಿ ಬಂಡವಾಳ, ಸಾಮ್ರಾಜ್ಯಶಾಹಿ ಹಾಗೂ ಪಾಳೆಯಗಾರಿ ಶಕ್ತಿಗಳ ವಿರುದ್ಧ ಹೋರಾಡಲು ಕಟಿಬದ್ಧವಾದ ಪ್ರಜಾಪ್ರಭುತ್ವವಾದಿ ವರ್ಗಗಳು ಒಟ್ಟಾಗುತ್ತವೆ. ಇದು ಸಾಮಾಜಿಕ ಪರಿವರ್ತನೆ ತರುವ, ನಮ್ಮ ದೇಶದ ಪ್ರಜಾಸತ್ತಾತ್ಮಕ ಸ್ವರೂಪವನ್ನು ಬಲಗೊಳಿಸುವ ದೀರ್ಘಕಾಲದ ಮೈತ್ರಿಕೂಟ.

ಜನತಾದಳ, ರಾಷ್ಟ್ರೀಯ ರಂಗದೊಡನೆ ಸಧ್ಯದ ಹೊಂದಾಣಿಕೆ ಈ ಪ್ರಕ್ರಿಯೆಗೆ ನೆರವಾಗಬಲ್ಲದು. ಆದರೆ ಇದು ಅದೇ ಪ್ರಕ್ರಿಯೆ ಅಲ್ಲ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು. ಏಕೆಂದರೆ ಸಧ್ಯದ ಸಹಕಾರ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿವರ್ತನೆಯ ಒಂದು ಸ್ಪಷ್ಟ ಕಾರ್ಯಕ್ರಮದ ಮೇಸೆ ನಿಂತಿಲ್ಲ. ಆದರೆ ಅದೇ ವೇಳೆಗೆ ಇಂತಹ ಸಹಕಾರದ ಮಹತ್ವವನ್ನು ನಿರ್ಲಕ್ಷಿಸುವಂತಿಲ್ಲ. ಏಕೆಂದರೆ ಮೊತ್ತಮೊದಲ ಬಾರಿಗೆ ಆಳುವ ವರ್ಗಗಳ ಒಂದು ಪಕ್ಷ ತನ್ನನ್ನು ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳಿಂದ ಸ್ಪಷ್ಟವಾಗಿ ಬೇರ್ಪಡಿಸಿಕೊಂಡು ಎಡ ಪಕ್ಷಗಳೊಂದಿಗೆ ಐಕ್ಯತೆಯ ಬಹಿರಂಗ ಘೋಷಣೆ ನೀಡಿದೆ.

ಪುಟ 3 ರಿಂದ

ಮುಚ್ಚಿ ಹಾಕಲು ಚುನಾವಣಾ ಪೂರ್ವ ತಯಾರಿಯಂತೆ- ಭಾರತದ ಉದ್ದಗಲಕ್ಕೂ ಧ್ವೇಷದ ವಿಷ ಸುರಿಸಿದ ಅದ್ವಾನಿಯವರು ಮಂಗಳೂರಿಗೂ ಬಂದಿದ್ದರು. ಜಿಲ್ಲೆಯ ಎಲ್ಲೆಡೆಗಳಿಂದ ಜನರನ್ನು ಜಮಾಯಿಸಿದರೂ ......ಕೋಮುವಾದಿಗಳ ನಿರೀಕ್ಷೆಯಷ್ಟು ಸಭೆ ಯಶಸ್ವಿಯಾಗಲಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಮಾನವ ಸರಪಳಿ ನಂತರ ನೆಹರೂ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನತೆ ಭಾಗವಹಿಸಿದ್ದರು. ಖ್ಯಾತ ಬರಹಗಾರ ಫಕೀರ್ ಮಹಮ್ಮದ್ ಕಟ್ಪಾಡಿಯವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್‌ರವರು ಬಿಜೆಪಿ-ವಿಎಚ್‌ಪಿ ಶಕ್ತಿಗಳು ಈಗ ಗೂಂಡಾಗಿರಿ ದಾರಿ ಹಿಡಿದಿವೆ. ಇವರ ಲಾಠಿ-ಚೂರಿ-ಕಠಾರಿಗೆ ನಾವು ಖಂಡಿತಾ ಉತ್ತರಿಸುವೆವು....ಎಂದು ಆವೇಶದಿಂದ ನುಡಿದಾಗ ಮುಗಿಲು ಮುಟ್ಟುವ ಕರತಾಡನ ಮಾಡಿದರು. ಸಿಪಿಐ ಮುಂದಾಳು ಬಿ.ವಿ.ಕಕ್ಕಿಲ್ಲಾಯರವರು ಮಾತನಾಡುತ್ತಾ "......ಹಿಂದು ಮಹೇಯರ ಹೃದಯದಲ್ಲಿ ಶ್ರೀ ರಾಮನು ಬಿಜೆಪಿ ಪ್ರತಿಪಾದಿಸುವ ಕೋಮುವಾದಿ ರಾಮನಲ್ಲ" ಎಂದರು. ಜನತಾದಳದ ಮುಂದಾಳು ಪಿ.ಎಫ್.ರೋಡ್ರಿಗ್ಸ್ ರವರು ಮಾತನಾಡಿ ಜಿಲ್ಲೆಯಲ್ಲೇ ಮತಾಂಧ ಶಕ್ತಿಗಳು ಯಜಮಾನರಾಗಲು ಅವಕಾಶ ನೀಡಲಾರೆವು ಎಂದು ದೃಢವಾಗಿ ಹೇಳಿದರು. ಮಾನವ ಸರಪಳಿ ಕೂಟದ ಸಂಚಾಲಕರೂ ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿಗಳೂ ಆದ ಜಯಕುಮಾರ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಎಸ್.ಆರ್.ಲೀಲಾವತಿ, ದಲಿತ ಸಂಘರ್ಷ ಸಮಿತಿಯ ದೇವದಾಸ್, ಯುವ ಜನತಾದಳದ ಬಲರಾಮ್ ಕೈ, ವಿಚಾರವಾದಿ ಕೂಟದ ಡಾ.ನರೇಂದ್ರ ನಾಯಕ್, ಎಸ್ಸೈ-ಎಫ್‌ನ ರಾವ್ ಮಾತನಾಡಿ ಕೋಮುವಾದಿ ಶಕ್ತಿಗಳ ವಿರುದ್ಧ ಜಿಲ್ಲೆಯ ಜನತೆ ಸಂಘಟಿತ ಪ್ರತಿರೋಧ ರೂಪಿಸಲು ಕರೆ ನೀಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಅಮ್ಮೆಂಬಳ ಬಾಳಪ್ಪನವರು ಮಾತನಾಡುತ್ತಾ ......ಬ್ರಿಟಿಷರ ವಿರುದ್ಧ ಸಂಘಟಿತರಾಗಿ ಹೋರಾಡಿ ನಾವು ಪಡೆದ ಸ್ವಾತಂತ್ರ್ಯವನ್ನು ಮತ್ತೆ ಅಪಾಯಕ್ಕೆ ತಳ್ಳಲು ಬ್ರಿಟಿಷರ ಏಜೆಂಟರು ದೇಶದೊಳಗೆ ಪ್ರಯತ್ನಿಸುತ್ತಿದ್ದಾರೆ ಎಂದು ಪರೋಕ್ಷವಾಗಿ ಬಿಜೆಪಿಯನ್ನು ಉಲ್ಲೇಖಿಸಿ ವ್ಯಂಗ್ಯ ಮಾಡಿದರು.

ಮೊದಲಿಗೆ ಸಮುದಾಯದ ವಾಸುದೇವ ಉಚ್ಚಿಲ್ ಸ್ವಾಗತಿಸಿದರು. ಡಿವೈಎಫ್‌ಐನ ಗಣೇಶ್ ಕುಂದರ್ ವಂದಿಸಿದರು.

ಈಗಾಗಲೇ ವರದಿಯಾಗಿರುವಂತೆ ಜಿಲ್ಲೆಯಲ್ಲಿ ಮೊದಲ ಬಾರಿಗೆ ರೂಪಿಸಲ್ಪಟ್ಟ ಈ ಮಾನವ ಸರಪಳಿ ಕಾರ್ಯಕ್ರಮಕ್ಕೆ ಜನರಿಂದ ದೊರೆತ ಸ್ಪಂದನದಿಂದ ಕಂಗೆಟ್ಟ ಮತಾಂಧ ಶಕ್ತಿಗಳು 'ಜೈ ಶ್ರೀರಾಮ್' ನ ಘೋಷಣೆಗಳೊಂದಿಗೆ ಬಂದು ಸರಪಳಿ ಮುರಿಯಲು ಪ್ರಯತ್ನಿಸಿದರು. ಆದರೆ ಕೋಮು ಸೌಹಾರ್ದತೆಗಾಗಿ ಕೈ ಪೋಣಿಸಿದ ಜನರಿಂದಲೇ ಸರಿಯಾದ ಉತ್ತರ ಪಡದು ಹಿಮ್ಮೆಟ್ಟಿದರು. ನಂತರ ಸಾರ್ವಜನಿಕ ಸಭೆಯಲ್ಲಿ ಮತ್ತೆ ಅವರು ನಡೆಸಿದ ಪ್ರಯತ್ನದಲ್ಲಿ, ಕಲ್ಲು ತೂರಾಟದಲ್ಲಿ ಹೆಂಚಿನ ಕಾರ್ಮಿಕ ನಾರಾಯಣ್ ಸೇರಿದಂತೆ ಹಲವರಿಗೆ ಗಾಯಗಳಾದವು. ತಮ್ಮೆದುರೇ ಗಲಭೆ ಮಾಡುತ್ತಿದ್ದರೂ ಸುಮ್ಮನಿದ್ದ ಪೋಲೀಸರು ಕೊನೆಗೆ ಬೇಜವಾಬ್ದಾರಿಯಿಂದ ಅದ್ವಾರಿದ್ದಿ ಲಾಠಿ ಚಾರ್ಜ್ ನಡೆಸಿ ಹಲವರಿಗೆ ಗಾಯಗಳಾಗುವ ಪರಿಸ್ಥಿತಿ ನಿರ್ಮಿಸಿದರು. ಪತ್ರಕರ್ತ ಶಂಕರ್‌ರವರಿಗೂ ಇದರಲ್ಲಿ ಏಟು ಬಿದ್ದಿದ್ದು ಅವರ ಕ್ಯಾಮರಾ ಪುಡಿಯಾಗಿತ್ತು. ಪೋಲೀಸರ ಈ ಬೇಜವಾಬ್ದಾರಿ ನೀತಿಯನ್ನು ಖಂಡಿಸಲಾಗಿದೆ.

ದ.ಕ. ಜಿಲ್ಲಾ ಪತ್ರ

ಮಾನವ ಸರಪಳಿ ಬೆಂಬಲಿಸಿ ಕಲಾ ಕಮ್ಮಟ


ಡಿಸೆಂಬರ್ 6 ರಂದು ಮಂಗಳೂರಿನ ಪುರಭವನದ ಆವರಣದಲ್ಲಿ ಜಿಲ್ಲೆಯ ಖ್ಯಾತ ಚಿತ್ರ ಕಲಾವಿದರು ಭಾಗವಹಿಸಿ ಕೋಮುವಾದದ ವಿರುದ್ಧ ಚಿತ್ರಗಳನ್ನು ಬರೆದರು. ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಂದರ್ಭದಲ್ಲಿ ಹಾಜರಿದ್ದು ಚಿತ್ರಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಕೂಡಾ ಈ ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಕುಂದಾಪುರದಲ್ಲಿ ಅಭೂತಪೂರ್ವ ಸರಪಳಿ

ಡಿ.ವೈ.ಎಫ್.ಐ, ಎಸ್.ಎಫ್.ಐ, ಜನವಾದಿ ಮಹಿಳಾ ಸಂಘಟನೆ, ಯುವ ಜನತಾದಳ, ಡಿ.ಎಸ್.ಎಸ್, ಎಲ್.ಐ.ಸಿ, ಬ್ಯಾಂಕ್, ಟೆಲಿಕಾಂ, ಸಮುದಾಯ, ಕ.ರಾ.ವಿ.ಪ.-ಇವೇ ಮೊದಲಾದ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಕೋಟೇಶ್ವರದಿಂದ ಕುಂದಾಪುರದ ಬಸ್ ನಿಲ್ದಾಣದವರೆಗಿನ ಮಾನವ ಸರಪಳಿ ಅತ್ಯಂತ ಯಶಸ್ವಿಯಾಗಿ ಪೋಣಿಸಲ್ಪಟ್ಟಿತು. 3 ಸಾವಿರಕ್ಕೂ ಮಿಕ್ಕಿ ಜನತೆ ಇದರಲ್ಲಿ ಪಾಲ್ಗೊಂಡಿದ್ದರು. ಸಿ.ಪಿ.ಐ.(ಎಂ), ಜನತಾದಳ, ಕಾರ್ಮಿಕ ಸಂಘಟನೆಗಳು ಕಾರ್ಯಕ್ರಮಕ್ಕೆ ಆಧಾರವಾಗಿ ನಿಂತು ಬೆಂಬಲಿಸಿದವು.

ನಂತರ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ಅಧ್ಯಕ್ಷರಾದ ವೆಂಕಟೇಶ್ ಕೋಣೆ ವಹಿಸಿದ್ದರು. ಎಲ್ಲಾ ಸಂಘಟನೆಗಳ ಮುಂದಾಳುಗಳು ಮಾತನಾಡಿ ಕೋಮುವಾದಿಗಳ ಕುಕೃತ್ಯವನ್ನು ಖಂಡಿಸಿದರು. ಎಲ್ಲಾ ವಿಭಾಗದ ಜನತೆ ದೊಡ್ಡ ರೀತಿಯಲ್ಲಿ ಕಾರ್ಯಕ್ರಮಕ್ಕೆ ಬೆಂಬಲಿಸಿದರು.

ಪುಟ 7 ಕ್ಕೆ



ತಮ್ಮ ಇತ್ತೀಚಿನ ಸಂದರ್ಶನದಲ್ಲಿ, ಭಾಜಪಾಗಳಲ್ಲಿ ಬಿ.ಜೆ.ಪಿ. ಅಧ್ಯಕ್ಷ ಅದ್ವಾನಿಯವರು ತನ್ನ 'ರಥಯಾತ್ರೆ'ಗೆ ರಾಜಕೀಯ ಉದ್ದೇಶವಿತ್ತು ಎಂದು ಒಪ್ಪಿಕೊಂಡಿದ್ದಾರೆ. ಮುಸ್ಲಿಮರು 'ಹಿಂದೂ ರಾಷ್ಟ್ರ'ದಲ್ಲಿ ಸುರಕ್ಷಿತರಾಗಿರಬಲ್ಲರು ಎಂಬ ಮುಸುಕಿನ ಬೆದರಿಕೆ ಕೂಡಾ ಹಾಕಿದ್ದಾರೆ. ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ನಡೆದ ಭಾರತದ ವಿಭಜನೆಯ ಸಂದರ್ಭವನ್ನು ನೆನಪಿಸುವಂತಹ ಭೀಕರ ಕೋಮು ದ್ವೇಷದ ಜ್ವಾಲೆಯನ್ನು ಈಗ ಎಬ್ಬಿಸುವ ಹಿಂದಿರುವ ಉದ್ದೇಶ 'ಹಿಂದುತ್ವ'ದ ಅಲೆಯ ಮೇಲೆ ದೆಹ-

ಅಯೋಧ್ಯೆಯಲ್ಲಿ ಎರಡನೇ ಸುತ್ತಿನ ಕರಸೇವೆ ಶಾಂತಿಯುತವಾಗಿ ನಡೆಯುತ್ತಿದೆಯಂತೆ. ಅತ್ತ ಅಲೀಘಡದಲ್ಲಿ ಅದರ ಹೆಸರಲ್ಲಿ ಪ್ರಾಣ ಕಳೆಕೊಂಡಿದ್ದಾರೆ. ಹೈದರಾಬಾದಿನಲ್ಲಿ ಎಪ್ಪತ್ತು ಜನ ಪ್ರಾಣ ಕಳಕೊಂಡು ಸೇನೆ ಕರೆಸಲಾಗಿದೆ. ಅಹ್ಮದಾಬಾದ್ ಸ್ಫೋಟಕ ಸನ್ನಿವೇಶ ಎದುರಿಸುತ್ತಿದೆ.

ಅಕ್ಟೋಬರ್ ಮುವ್ವತ್ತರಿಂದ ನವೆಂಬರ್ ಎರಡರ ನಡುವೆ ಇನ್ನೂರು ಜನರನ್ನು ಬಲಿತೆಗೆದುಕೊಂಡ ನಂತರ ಈ ಜ್ವಾಲೆ ತಣ್ಣಗಾಗಬಹುದೆಂದು ನಿರೀಕ್ಷಿಸಿದವರಿಗೆ ಆಘಾತವುಂಟಾಗುತ್ತಿದೆ.

ಅತ್ತ ಮುಂಬೈಯಲ್ಲಿ ಕೋಮುವಾದಿಗಳ ಒತ್ತಡವನ್ನು ಪ್ರತಿಭಟಿಸಿದ ಪೋಷಕನೊಬ್ಬನನ್ನು ಕೋಮುವಾದಿಗಳು ಬಡಿದಿದ್ದಾರೆ. ಭೂಪಾಲದಲ್ಲಿ ಮಾಜಿ ಪ್ರಧಾನ ಮಂತ್ರಿಯೂ ಸೇರಿದಂತೆ ಜಾತ್ಯಾತೀತತೆಯ ರಕ್ಷಣೆಗಾಗಿ ಜನರನ್ನು ಜಾಗೃತಗೊಳಿಸುತ್ತಿರುವವರ ಮೇಲೆ ಹಲ್ಲೆ ನಡೆಸಿದ್ದಾರೆ.

ಎಷ್ಟೆಲ್ಲಾ ನಡೆದರೂ ಕೆಲವರು ಇನ್ನೂ ನಿಷ್ಕ್ರಿಯರಾಗಿ ಉಳಿದಿದ್ದಾರೆ--ತಮಗೆ ಏನೂ ತಟ್ಟಿಲ್ಲವಲ್ಲ ಎಂದು. ಈ ನಿಷ್ಕ್ರಿಯತೆ ವಿಪತ್ಕಾರಿ ಎಂದಿದ್ದಾರೆ ಸಿಪಿಐ(ಎಂ) ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಕಾಮ್ರೇಡ್ ಸೀತಾರಾಮ್ ಯೆಚೂರಿ ಈ ಲೇಖನದಲ್ಲಿ. ಹಿಟ್ಲರ್‌ನ 'ಬೂದಿಶರ್ಟು' ಗಳಿಗೆ ಹೋಲಿಸಬಹುದಾದ ಭಾರತದ ಖಾವಿ ಶರ್ಟುಗಳು ಫ್ಯಾಸಿಸ್ಟ್ ದಾರಿ ಹಿಡಿದಿದ್ದಾರೆ ಎಂಬುದು ಎಲ್ಲರಿಗೂ ಮನವರಿಕೆಯಾಗಬೇಕು ಎಂದಿದ್ದಾರೆ.

ಹೊಸ ಪದುತ್ತೇನೆ. ಪ್ರತಿಯೊಂದು ಧರ್ಮದ ಬಾಗಿಲುಗಳಲ್ಲಿ ಇನ್ನು ಮುಂದೆ ಯಾರೂ ವಿರೋಧಿಸಿದರೂ, ಜಗಳ ಕಿತ್ತಾಟದ ಬದಲು ನೆರವು, ಸಾಮರಸ್ಯ ಶಾಂತಿಯ ಸಂದೇಶವಿರುತ್ತದೆ ಎಂದು ಅಂಕಿತವಾಗಿ ಸೂಚಿಸಬಯಸುತ್ತೇನೆ" ಎಂದಿದ್ದರು ಸ್ವಾಮಿ ವಿವೇಕಾನಂದ ಸ್ವಾಮಿಯವರು. ಅದ್ವಾನಿ ಮತ್ತಿತರ ಕಾವಿಶರ್ಟುಗಳು ಹೀಗೆ ಹೇಳಿದ್ದಕ್ಕಾಗಿ ಸ್ವಾಮಿ ವಿವೇಕಾನಂದರನ್ನೇ ಧರ್ಮ ಬಾಹಿರನೆಂದು ಘೋಷಿಸುತ್ತಾರೆಯೇ? 'ಹಿಂದೂ ರಾಷ್ಟ್ರ' ದ ಪರಿಕಲ್ಪನೆಗಿಂತ ಸ್ವಾಮಿ ವಿವೇಕಾನಂದರ ಈ ವಾಣಿಯೇ ಹಿಂದೂ ಜೀವನ ಮಾರ್ಗವನ್ನು ಹೆಚ್ಚು ನಿಖರವಾಗಿ ಪ್ರತಿಪಾದಿಸುತ್ತಿಲ್ಲವೇ?

"ದುಷ್ಟರ ಗೆಲುವಿಗೆ ಶಿಷ್ಟರ ಮೌನವೇ ಸಾಕು"

ಕೋಮುವಾದಿಗಳೆದುರು ನಿಷ್ಕ್ರಿಯತೆ ವಿನಾಶಕಾರಿ

ಲಿಯಲ್ಲಿ ಅಧಿಕಾರ ಹಿಡಿದು ಆರ್.ಎಸ್.ಎಸ್.ನ 'ಹಿಂದೂ ರಾಷ್ಟ್ರ'ದ ಗುರಿಯನ್ನು ಸಾಧಿಸುವುದೇ ಆಗಿದೆ ಎನ್ನುವುದು ಈಗ ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟವಾಗಿದೆ.

1980 ರಲ್ಲಿ ರಾಜಕೀಯ ಅಜ್ಞಾತವಾಸಕ್ಕೆ ತಳ್ಳಲ್ಪಟ್ಟ ಆಗಿನ ಜನಸಂಘ ನಂತರ "ಗಾಂಧೀ ಸಮಾಜ"ದ ಪರಿಕಲ್ಪನೆಯ ಹೆಸರಿನಲ್ಲಿ ಮತ್ತೆ ದೇಶದ ರಾಜಕೀಯ ರಂಗದಲ್ಲಿ ಸ್ಥಾನ ಗಿಟ್ಟಿಸಲು ಪ್ರಯತ್ನಿಸಿತು. ಅಂತಿಮವಾಗಿ, ಆರ್.ಎಸ್.ಎಸ್.ನ 'ಹಿಂದೂ ರಾಷ್ಟ್ರ'ವೇ ಇದಕ್ಕೆ ಅತ್ಯಂತ ಸೂಕ್ತವಾದ ದಾರಿಎಂಬ ತೀರ್ಮಾನಕ್ಕೆ ಅದು ಬಂತು. 1983 ರಲ್ಲಿ ವಿಶ್ವ ಹಿಂದೂ ಪರಿಷತ್ ಅಸ್ತಿತ್ವಕ್ಕೆ ಬಂದಿದ್ದು ಈ ಹಿನ್ನೆಲೆಯಲ್ಲಿ. 1984 ರಲ್ಲಿ ನಡೆದ 'ಏಕಾತ್ಮಕಾ ಯಜ್ಞ'ದಿಂದ ಕೋಮು ಜ್ವಾಲೆ ಹಚ್ಚಲು ಆರಂಭವಾಯಿತು.

ಇಂದಿರಾಗಾಂಧಿಯ ಕೊಲೆಯ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ಬಿ.ಜೆ.ಪಿ--ಆರ್. ಎಸ್.ಎಸ್.ನ ಈ ತಂತ್ರ ಫಲಕಾರಿಯಾಗಲಿಲ್ಲ. ಅಂದಿನಿಂದ ರಾಮಜನ್ಮಭೂಮಿ ಪ್ರಶ್ನೆ ದೇಶದಲ್ಲಿ ಕೋಮು ಜ್ವಾಲೆ ಹಬ್ಬಿಸುವ ಉತ್ತಮ ಅವಕಾಶವಾಗಿ ಕಂಡು ಬಂತು ಇವರಿಗೆ. ಕಾಂಗ್ರೆಸ್(ಐ)ನ ದುಷ್ಟ ಸಮಯ ಸಾಧಕತನವೂ ಇದರಲ್ಲಿ ಅವರಿಗೆ ನೆರವಾಯಿತು.

ಈಗ ಜ್ಯಾತ್ಯತೀತತೆಯಲ್ಲಿ ನಂಬಿಕೆಯಿರುವವರಿಗೆಲ್ಲಾ ಅತ್ಯಂತ ಆತಂಕ ತಂದಿರುವ ಸಂಗತಿಯೆಂದರೆ ಈ ಕೋಮುವಾದಿ ಶಕ್ತಿಗಳು ಬಳಸುತ್ತಿರುವ ಫ್ಯಾಸಿಸ್ಟ್ ವಿಧಾನಗಳು, ಶುದ್ಧ ಸುಳ್ಳು ಪ್ರಚಾರವನ್ನು ಮತ್ತೆ-ಮತ್ತೆ ಹೇಳಿ ಕೆಲವು ಜನ ವಿಭಾಗಗಳು ಅದನ್ನು 'ನಂಬುವಂತೆ ಮಾಡುವುದು ಅವರಿಗೆ ಸಾಧ್ಯವೂ ಆಗಿದೆ. ಹಿಟ್ಲರ್‌ನ ಅಪಪ್ರಚಾರಕ ಮಂತ್ರಿ ಗೋಬೆಲ್ಸ್‌ನ ತಂತ್ರವನ್ನು ಅವರು ಬಳಸುತ್ತಿದ್ದಾರೆ.

"ಫ್ಯಾಸಿಸಂ ಅತೀ ಉಗ್ರ ಸಾಮ್ರಾಜ್ಯಶಾಹಿಗಳ ಪರವಾಗಿ ಕೆಲಸ ಮಾಡುತ್ತದೆ. ಆದರೆ ಅದು ಜನಸಾಮಾನ್ಯರೆದುರು ಒಂದು ಅನ್ಯಾಯಕ್ಕೊಳಗಾದ ದೇಶದ ಉದ್ಧಾರಕನ ವೇಷ ತೊಟ್ಟು ಬರುತ್ತದೆ. ದೇಶೀಯ ಭಾವನೆಗಳಿಗೆ ತಟ್ಟಿದ ಆಘಾತವನ್ನು ಸರಿಪಡಿಸಬೇಕೆಂಬ ಮಾತಿನ ಮೋಡಿ ಹಾಕಿ ಜನರನ್ನು ಆಕರ್ಷಿಸುತ್ತದೆ" ಎಂದಿದ್ದರು 1935 ರಲ್ಲಿ ಜಾರ್ಜಿ ದಿಮಿತ್ರೋವ್.

'ಬೂದು ಶರ್ಟು'ಗಳೆಂದು ಕುಖ್ಯಾತರಾದ ಹಿಟ್ಲರ್‌ನ ತಂಡದವರು ಧಿಕಾರಕ್ಕೆ ಬರಲು ಬಳಸಿದ ತಂತ್ರ ಇದೇ. ನಮ್ಮಲ್ಲಿ 'ಕಾವಿ ಶರ್ಟು'ಗಳೆನ್ನಬಹುದಾದ ಆರ್.ಎಸ್.ಎಸ್.-ಬಿ.ಜೆ.ಪಿ.-ವಿ.ಹೆಚ್.ಪಿ.-ಭಜರಂಗ ದಳದವರು ಅದನ್ನೇ ಮಾಡಲು ಪ್ರಯತ್ನಿಸುತ್ತಿದ್ದಾರೆ.ರಾಮ ಜನ್ಮ ಭೂಮಿಯ ಪ್ರಶ್ನೆಯನ್ನೆತ್ತಿ ತಾವು ಹಿಂದೆ ಮುಸ್ಲಿಂ ಆಕ್ರಮಣಕಾರರು ಹಿಂದೂಗಳ ಮೇಲೆ ಹೂಡಿರುವ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸುತ್ತೇವೆ ಎಂದು ಹೇಳುತ್ತಾ ಈ 'ಕಾವಿ ಶರ್ಟು'ಗಳು ಆ ವಿಧಾನಗಳನ್ನೇ ಬಳಸುತ್ತಿದ್ದಾರೆ.

ಮುಸ್ಲಿಂ ಮತಾಂಧರು ಹಲವಾರು ಹಿಂದೂ ದೇವಾಲಯಗಳನ್ನು ನಾಶ ಮಾಡಿದ್ದರೆಂಬುದರ ಬಗ್ಗೆ ಯಾರದ್ದೂ ತಕರಾರಿಲ್ಲ. ಅದು ಇತಿಹಾಸದ ಭಾಗವಾಗಿಬಿಟ್ಟಿರುವ ಅಂಶ. ನಮ್ಮ ದೇಶ ಆ ಘಟ್ಟ ದಾಟಿ ಎಷ್ಟೋ ಮುಂದೆ ಬಂದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಬೆಸೆದ ಐಕ್ಯತೆ ಎಂದೋ ಇತ್ಯರ್ಥ ಮಾಡಿದೆ. ಆ ಸ್ವಾತಂತ್ರ್ಯ ಹೋರಾಟದ ಫಲವಾದ ಭಾರತದ ಸಂವಿಧಾನ ರಚಿಸಿದ ಸಭೆಯಲ್ಲಿ ಬಹುಪಾಲು ಹಿಂದೂಗಳೇ ಇದ್ದರೂ ನಮ್ಮ ದೇಶದ ಭವಿಷ್ಯ ಇಂದು ಜಾತ್ಯತೀತ ರಾಷ್ಟ್ರವಾಗಿ ಬೆಳೆಯುವುದರಲ್ಲೇ ಇದೆ ನಿರ್ಧರಿಸಿದರು. ಬಹುಪಾಲು ಹಿಂದೂಗಳೇ ಇರುವ ಭಾರತದ ಜನತೆ ಜಾತ್ಯಾತೀತತೆಯನ್ನೇ ಅಂಗೀಕರಿಸಿದ್ದಾರೆ. ಏಕೆಂದರೆ ನಮ್ಮ ದೇಶದ ಬಹು ಧರ್ಮೀಯ, ಬಹು ಭಾಷೀಯ, ಬಹು ಸಾಂಸ್ಕೃತಿಕ ಸ್ವರೂಪವನ್ನು ಅವರು ಒಪ್ಪಿಕೊಂಡಿದ್ದಾರೆ. ಜಾತ್ಯಾತೀತತೆಯ ಪರಿಕಲ್ಪನೆ ಮಾನವ ಸಮಾಜದ ಮುನ್ನಡೆಯ ದಾರಿಯಲ್ಲಿ ಒಂದು ಮೈಲಿಗಲ್ಲು ಎಂದು ಅವರು ಸ್ವೀಕರಿಸಿದ್ದಾರೆ. 'ಹಿಂದೂ ರಾಷ್ಟ್ರ'ದ ಪರಿಕಲ್ಪನೆಯನ್ನು ಅರ್ಧಶತಮಾನದ ಹಿಂದೆಯೇ ಧಿಕ್ಕರಿಸಿ ಬಿಟ್ಟಿದ್ದಾರೆ. ಏಕೆಂದರೆ ಆ ಪರಿಕಲ್ಪನೆಯನ್ನು ಅಂಗೀಕರಿಸುವುದೆಂದರೆ ದೇಶವನ್ನು ಮತತ್ತೆ ಮಧ್ಯಯುಗಕ್ಕೆ ಹಿಂದೂಡಿದಂತೆ ಎಂಬುದು ಅವರಿಗೆ ಮನವರಿಯಾಗಿತ್ತು.

ಹಾಗಿದ್ದರೆ ಈ 'ಕಾವಿ ಶರ್ಟು'ಗಳು ಯಾವ ಹಿಂದೂ ಭಾವನೆಗಳನ್ನು ಪ್ರತಿಪಾದಿಸುತ್ತಿದ್ದಾರೆ? ಅವರು ಯಾವ ಬಹುಸಂಖ್ಯಾತ ಹಿಂದೂ ಭಾವನೆಗಳನ್ನೂ ಪ್ರತಿಪಾದಿಸುತ್ತಿಲ್ಲ. ಬದಲಾಗಿ ಹಲವಾರು ಪೀಳಿಗೆಗಳ ಹಿಂದೂಗಳು ದೀರ್ಘ ಹೋರಾಟಗಳ ಮೂಲಕ ಸ್ಥಾಪಿಸಿದ ಜಾತ್ಯಾತೀತ ಭಾರತವನ್ನು ನಾಶ ಮಾಡಲು ಮುಂದಾಗುತ್ತಿದ್ದಾರೆ. ಇದಕ್ಕಾಗಿ ಅವರು ಫ್ಯಾಸಿಸ್ಟ್ ಪ್ರಚಾರಕ್ಕೆ ಇಳಿದಿದ್ದಾರೆ.

ಈ ಕಾವಿ ಶರ್ಟಿನ "ಸೈನಿಕ"ರು ದೇಶದ ಸಮ್ಮುಖ ಒಂದು ವಿಭಜನೆ ಇಡುತ್ತಿದ್ದಾರೆ--ಅದೆಂದರೆ ಅವರ ದೃಷ್ಟಿಯ "ರಾಷ್ಟ್ರವಾದಿ"-ಗಳು ಹಾಗೂ "ಸೋಗಿನ ಜಾತ್ಯತೀತ"ರ ನಡುವಿನ ವಿಭಜನೆ. ಅವರ ಪರವಾಗಿರುವವರು 'ನಿಜವಾದ ರಾಷ್ಟ್ರವಾದಿ'ಗಳು ಅವರನ್ನು ವಿರೋಧಿಸಿ ದೇಶದ ಜಾತ್ಯಾತೀತತೆಯನ್ನು ಎತ್ತಿ ಹಿಡಿಯುವವರು 'ಸೋಗಿನ ಜಾತ್ಯಾತೀತರು' ! ಆದರೆ ಪ್ರತಿಪಾದಿಸುತ್ತಿರುವ ಈ ಸಿದ್ಧಾಂತದಲ್ಲಿ ಗೊಸಬೇನೂ ಇಲ್ಲ. 1939 ರಲ್ಲೇ ಆಗಿನ ಆರ್.ಎಸ್.ಎಸ್. ಮುಖಂಡ ಗೋಲ್ವಾಲ್ಕರ್ ಹೇಳಿದ್ದನ್ನು, ದೇಶದ ಬಹುಪಾಲು ಜನ ಸ್ವೀಕರಿಸಲು ನಿರಾಕರಿಸಿದ ಪರಿಕಲ್ಪನೆಯನ್ನು ಮತ್ತೆ ಇಡುತ್ತಿದ್ದಾರಷ್ಟೆ.

"ಹಿಂದೂಸ್ತಾನದಲ್ಲಿ ಇದೆ ಹಾಗೂ ಇರಬೇಕಾದ್ದು, ಪ್ರಾಚೀನ ಹಿಂದೂ ರಾಷ್ಟ್ರವಲ್ಲದೆ ಬೇರಾವುದೂ ಅಲ್ಲ. ಈ ರಾಷ್ಟ್ರಕ್ಕೆ ಸೇರಿದವರೆಲ್ಲಾ ಅಂದರೆ ಹಿಂದು ಜನಾಂಗ, ಧರ್ಮ, ಸಂಸ್ಕೃತಿ, ಭಾಷೆಗೆ ಸೇರಿರದವರೆಲ್ಲಾ ನಿಜವಾದ ರಾಷ್ಟ್ರೀಯ ಪರಿಧಿಯ ಹೊರಗಿರಬೇಕು" ಎಂದಿದ್ದರು ಗೋಲ್ವಾಲ್ಕರರ್ ತಮ್ಮ ಪುಸ್ತಕ "ವಿ ಔರ್ ವರ್ ನೇಶನ್‌ಹುಡ್ ಡಿಫೈನ್ಡ್" [ನಾವು ಅಥವಾ ನಮ್ಮ ರಾಷ್ಟ್ರದ ನಿರ್ವಚನೆ]ದಲ್ಲಿ. "ನಮಗೆ ಜೀವನದ ಪ್ರತಿಯೊಂದು ಕೆಲಸ ಅದು ಸಾಮಾಜಿಕವಾಗಿರಲಿ, ರಾಜಕೀಯವಾಗಿರಲಿ ಧರ್ಮದ ಆದೇಶವಷ್ಟೇ" ಎಂದಿದ್ದರು ಅವರು. ಇದನ್ನು ಮತ್ತೆ ಎತ್ತಿ ಹಿಡಿಯುವ ಕಾವಿ ಶರ್ಟುಗಳು "ಹಿಂದೂ ರಾಷ್ಟ್ರ"ವನ್ನು ಕಟ್ಟುತ್ತಿದ್ದಾರೆಯೇ ಅಥವಾ ದೇಶದ ಶತ್ರುಗಳನ್ನು, ರಾಜಕೀಯಲ್ಲಿ ಧರ್ಮವನ್ನು ಎಳೆದುತಂದು ವಿನಾಶಲೀಲೆ ಮಾಡುತ್ತಿರುವ ಖಾಲಿಸ್ತಾನಿ ಉಗ್ರಗಾಮಿಗಳಿಗೆ, ಕಾಶ್ಮೀರದಲ್ಲಿ ಮುಸ್ಲಿಂ ಮೂಲಭೂತವಾದಿಗಳಿಗೆ ಬಲ ತುಂಬುತ್ತಿದ್ದಾರೆಯೇ?

"ಹಿಂದೂಸ್ತಾನದಲ್ಲಿರುವ ವಿದೇಶಿ ಜನಾಂಗಗಳು ಹಿಂದೂ ಸಂಸ್ಕೃತಿ, ಭಾಷೆಯನ್ನು ಅಂಗೀಕರಿಸಬೇಕು, ಹಿಂದೂ ಧರ್ಮವನ್ನು ಗೌರವಿಸುವುದನ್ನು ಕಲಿಯಬೇಕು, ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಮರೆತು 'ಹಿಂದೂ ರಾಷ್ಟ್ರ' ದೊಂದಿಗೆ ಬೆರೆತುಬಿಡಬೇಕು, ಅಥವಾ ಹಿಂದೂ ರಾಷ್ಟ್ರದ ಅಡಿಯಾಳಾಗಿ, ಆವ ಹಕ್ಕುಗಳನ್ನೂ, ಸೌಲಭ್ಯಗಳನ್ನೂ, ನಾಗರೀಕ ಹಕ್ಕುಗಳನ್ನೂ ಕೂಡ ಕೇಳದೇ ಇಲ್ಲಿ ಇರಬಹುದು.ಇದು ಬಿಟ್ಟು ಬೇರೆ ದಾರಿ ಅವರಿಗೆ ಇರಬಾರದು"ಎಂದಿದ್ದರು. ಅದೇ ಪುಸ್ತಕದಲ್ಲಿ ಗೋಲ್ವಾಲ್ಕರ್. ಈಗ ಅದ್ವಾಣಿಯವರು ಬಹಿರಂಗವಾಗಿ ಒಪ್ಪಿಕೊಳ್ಳುತ್ತಿರುವುದು, ಕಾವಿ ಶರ್ಟುಗಳುಫ್ಯಾಸಿಸ್ಟ್ ವಿಧಾನಗಳನ್ನು ಬಳಸಿ ಜನರ ಮೇಲೆ ಹೇರಲು ಪ್ರಯತ್ನಿಸುತ್ತಿರುವುದು ಈ 'ಹಿಂದೂ ರಾಷ್ಟ್ರ' ಪರಿಕಲ್ಪನೆಯನ್ನೇ.

ಈ ಹಿಂದೂ ರಾಷ್ಟ್ರವನ್ನು ಅವರು ಹೇಗೆ ಕಟ್ಟಬಯಸುತ್ತಾರೆ? ಗೋಲ್ವಾಲ್ಕರ್‌ರವರ ಉತ್ತರ ಆಗ ಜರ್ಮನಿಯಲ್ಲಿ ಮತ್ತಿತರ ಯುರೋಪಿಯನ್ ದೇಶಗಳಲ್ಲಿ ದುಷ್ಟತನದ ತಾಂಡವವಾಡುತ್ತಿದ್ದ ನಾಝಿಗಳ ಉತ್ತರಕ್ಕಿಂತ ಭಿನ್ನವಾಗಿರಲಿಲ್ಲ. ವಾಸ್ತವವಾಗಿ ಆ ವಿಧಾನಗಳ ಬಗ್ಗೆ ಆದರದಿಂದ ಅವರು ಹೀಗೆ ಬರೆದಿದ್ದರು-

"ತನ್ನ ಜನಾಂಗದ, ಸಂಸ್ಕೃತಿಯ ಶುದ್ಧತೆಯನ್ನು ಕಾಪಾಡಲು ಜರ್ಮನ್ ದೇಶ ಯಹೂದಿ ಜನಾಂಗವನ್ನು ಶುದಧೀಕರಿಸಿ ಜಗತ್ತನ್ನು ಮೂಕವಿಸ್ಮಿತಗೊಳಿಸಿತು. ಜನಾಂಗ ಹೆಮ್ಮೆಯ ಅತ್ಯುಚ್ಚ ಉದಾಹರಣೆ ಅಲ್ಲಿ ವ್ಯಕ್ತಗೊಂಡಿತು. ಭಿನ್ನವಾಗಿರುವ ಜನಾಂಗಗಳು, ಸಂಸ್ಕೃತಿಗಳು ಬೇರು ಬಿಡಲು ಹೇಗೆ ಖಂಡಿತ ಅಸಾಧ್ಯ ಎಂಬುದನ್ನೂ, ಹೇಗೆ ಅದನ್ನು ಬೆಸೆಯಬಹುದೆಂಬ ಎಂಬುದನ್ನು ಜರ್ಮನಿ ತೋರಿಸಿಕೊಟ್ಟಿತು. ಹಿಂದೂಸ್ತಾನದಲ್ಲಿರುವ ನಾವು ಕಲಿಯಬೇಕಾದ, ಅದರಿಂದ ಲಾಭ ಪಡೆಯಬೇಕಾದ ಪಾಠವಿದು."

ಅಂದರೆ 'ಹಿಂದೂ ರಾಷ್ಟ್ರ' ಕಟ್ಟಲು 50 ವರ್ಷಗಳ ಹಿಂದೆ ಇಡೀ ವಿಶ್ವ ಧಿಕ್ಕರಿಸಿದ ಫ್ಯಾಸಿಸ್ಟ್ ವಿಧಾನಗಳನ್ನು ಬಳಸಬೇಕು ! ಅದ್ವಾನಿಯವರು "ರಾಷ್ಟ್ರವಾದ"ದ ಚರ್ಚೆಯ ಮರೆಯಲ್ಲಿ ಪ್ರತಿಪಾದಿಸುತ್ತಿರುವುದು ಈ ಮೇರೆ ಮೀರಿದ ಫ್ಯಾಸಿಸ್ಟ್ ಹಿಂಸಾಚಾರವನ್ನೇ. ಇದರ ಆಧಾರ ಗೋಬೆಲ್ಸ್‌ನ ಸುಳ್ಳುಗಳ ಸರಮಾಲೆ. ಐತಿಹಾಸಿಕ ಪುರಾವೆಗಳನ್ನು ಬದಿಗೆ ಒತ್ತಲಾಗುತ್ತದೆ, ನಿರ್ಲಕ್ಷಿಸಲಾಗುತ್ತದೆ ಅಥವಾ ವಿಕೃತಗೊಳಿಸಲಾಗುತ್ತದೆ. ಆದ್ದರಿಂದರೇ ರಾಮನ ನಿರ್ದಿಷ್ಟ ಜನ್ಮಸ್ಥಾನದ ಪ್ರಶ್ನೆ ಐತಿಹಾಸಿಕ ಪುರಾವೆಗಳ ಪ್ರಶ್ನೆಯಾಗುವುದಿಲ್ಲ, ಕೇವಲ ನಂಬಿಕೆಯ ಪ್ರಶ್ನೆಯಾಗುತ್ತದೆ ! ಆ ನಂಬಿಕೆಯನ್ನು ಎಲ್ಲರೂ ಕಣ್ಣು ಮುಚ್ಚಿ ಒಪ್ಪಿಕೊಳ್ಳಲೇಬೇಕು! ಇದಕ್ಕಾಗಿ ಇದುವರೆಗೆ 76 ಬಾರಿ 4 ಲಕ್ಷ ಹಿಂದೂಗಳು ಹುತಾತ್ಮರಾದರು ಎಂಬ ಶುದ್ಧ ಸುಳ್ಳಿನ ಪ್ರಚಾರ ಮಾಡಲಾಗುತ್ತಿದೆ. ಪಂಜಾಬ್, ಕಾಶ್ಮೀರಗಳಲ್ಲಿ ಮನಸ್ವೇಚ್ಛೆ ದೇಶದ ಕಾನೂನನ್ನು ಉಲ್ಲಂಘಿಸುವವರು, ಪ್ರತ್ಯೇಕತಾವಾದಿಗಳು- ಆದರೆ ಅಯೋಧ್ಯೆಯಲ್ಲಿ ಅದೇ ಕೃತ್ಯ ನಡೆಸುವವರು ಹುತಾತ್ಮರು! ಜಾತ್ಯಾತೀತ, ಪ್ರಜಾಸತ್ತಾತ್ಮಕ ಭರತದ ಡಿಗಲ್ಲು ಹಾಕಲು ಪ್ರಾಣಾಹುತಿ ನೀಡಿದ ಜಲಿಯನ್ ವಾಲಾಬಾಗ್ ಹುತಾತ್ಮರೊಂದಿಗೆ ಆ ಜಾತ್ಯಾತೀತತೆಯ ಅಡಿಗಲ್ಲನ್ನು ನಾಶಮಾಡಲು ಉದ್ಯುಕ್ತರಾಗಿರುವವರ ಹೋಲಿಕೆ ನಡೆಸಲಾಗುತ್ತಿದೆ ! ಅನುಭವದಿಂದ ಪರಿಷ್ಕೃತಗೊಂಡ ಕಾವಿ ಶರ್ಟುಗಳ ವರ್ಗಿಕೋರತನ ಪತ್ರಿಕಾರಂಗದ ಒಂದು ವಿಭಾಗದ ನೆರವು ಸುಳ್ಳುಗಳ ಸರಮಾಲೆ ಹೆಣೆಯುತ್ತಿದೆ, ಕೋಮು ವಿಷವನ್ನು ನಮ್ಮ ಸಮಾಜದಲ್ಲಿ ತುಹುತ್ತಿದೆ.

ಹಿಂದೂ ಸಮಾಜದ ಹೆಸರಿನಲ್ಲಿ ಇವನ್ನೆಲ್ಲಾ ಮಾಡುತ್ತಿರುವಾಗ ಹಿಂದೂ ಕೋಮಿನ ಅಂತರಿಕ ಭಿನ್ನತೆಯನ್ನು ನಿರಾಕರಿಸಲಾತ್ತಿದೆ. ವಾಸ್ತವವಾಗಿ ಈ ಕಾವಿ ಶರ್ಟುಗಳ ಪ್ರಕಾರ ವಿಂಧ್ಯ ಪರ್ವತದ ದಕ್ಷಿಣದಲ್ಲಿರುವರು ಹಿಂದೂಗಳಲ್ಲ. ಆರ್ಯರಿಗಿಂತ ಕೀಳು ವಂಶದವರು, ಕೋತಿಗಳೆಂದು ಅವರು ಚಿತ್ರಿಸಿರುವ ಜನ. ಗೋಲ್ವಾಲ್ಕರ್‌ರವರ 'ಹಿಂದೂ' ನಿರ್ವಚನೆಯಲ್ಲಿ ಒಂದೇ ಭಾಷೆಯನ್ನು ಉಲ್ಲೇಖಿಸಲಾಗಿದೆ. ಆದ್ದರಿಂದ ಭಾರತದ ವಿವಿಧ ಭಾಷೆಗಳನ್ನಾಡುವ ಜನಗಳೆಲ್ಲಾ ಈ ಕಾವಿ ಶರ್ಟುಗಳ ಪ್ರಕಾರ ಹಿಂದೂಗಳಲ್ಲ. ಕೇರಳದಲ್ಲಿ ಓಣಂ ಆಚರಿಸುವವರು ಯಾರೂ ಅವರ ಪ್ರಕಾರ ಹಿಂದೂಗಳಲ್ಲ. ಏಕೆಂದರೆ ಆರ್ಯರ ಕಥೆಯ ಪ್ರಕಾರ ಮಹಾಬಲಿ ಒಬ್ಬ ಅಸುರ, ವಿಷ್ಣು ವಾಮನನ ಅವತಾರ ತಾಳಿ ಕೊಂದ ಅಸುರ.

ಹಿಂದೂ ಸಮಾಜದ ಅಪಾರ ಭಿನ್ನತೆಗಳನ್ನು ಈ ಕಾವಿಶರ್ಟುಗಳು ಈಗ ಹಿಂದಿ ಮಾತನಾಡುವ ಮೇಲ್ಜಾತಿಗಳ 'ಹಿಂದೂ ರಾಷ್ಟ್ರ' ದ ಪರಿಕಲ್ಪನೆಯೊಳಗೆ ತುರುಕಿಸಲು ಪ್ರಯತ್ನಿಸುತ್ತಿದ್ದಾರೆ.

" ಯಾರಾದರೂ ತನ್ನ ಧರ್ಮ ಮಾತ್ರವೇ ಉಳಿಯಬೇಕು ಉಳಿದೆಲ್ಲಾ ನಾಶವಾಗಬೇಕು ಎಂದು ಕನಸು ಕಾಣುತ್ತಿದ್ದರೆ ನಾನು ಅವನ ಬಗ್ಗೆ ಹೃದಯಾಂತರಾಳದಿಂದ

ಇದು ನಮ್ಮ ದೇಶದ ಜನರ ಮುಂದಿರುವ ಗಂಭೀರ ಸವಾಲು. ನಮ್ಮ ಮಿಲಿಯಗಟ್ಟಲೆ ಮಕ್ಕಳು ಬೆವರು ಸುರಿಸಿ ಬದುಕಬೇಕಾಗಿದೆ, ಆಸ್ಟ್ರೇಲಿಯಾದ ಒಟ್ಟು ಜನಸಂಖ್ಯೆಗಿಂತ ಹೆಚ್ಚು ಸಂಖ್ಯೆಯಲ್ಲಿ -ಭಾರತೀಯರು ಪೋಷಕ ಆಹಾರವಿಲ್ಲದೆ ಸಾಯುತ್ತಿದ್ದಾರೆ, ಇಡೀ ಅಮೇರಿಕಾದ ಜನಸಂಖ್ಯೆಗಿಂತ ಹೆಚ್ಚು ಜನ ನಮ್ಮಲ್ಲಿ ಬಡತನದ ರೇಖೆಯ ಕೆಳಗೆ ಜೀವ ಹಿಡಿದುಕೊಂಡಿದ್ದಾರೆ ಎಂಬುದೆಲ್ಲಾ ಈ ಕಾವಿ ಶರ್ಟುಗಳಲ್ಲಿ ಯಾವ ಭಾವನೆಗಳನ್ನೂ ಜಾಗೃತಗೊಳಿಸುವುದಿಲ್ಲ. ಅವರ ಪ್ರಕಾರ ಬಾಬ್ರಿ ಮಸೀದಿ ಕೆಡುವುದೊಂದೇ ದೇಶದ ಜನರ ಮುಂದಿರುವ ಸಮಸ್ಯೆ. ಇದು ದೇಶದಲ್ಲಿ ಮುಂದುವರಿಯುತ್ತಿರುವ ಶೋಷಣೆಯ ವ್ಯವಸ್ಥೆಯನ್ನು ಬಲಗೊಳಿಸುವ ಯತ್ನವೆಂದರೆ ತಪ್ಪೇ?

ಈ ಸವಾಲನ್ನು ಒಗ್ಗಟ್ಟಿನಿಂದ ಎದುರಿಸಲೇಬೇಕು. ನಮಗೆ ಇನ್ನೂ ತಟ್ಟವೆಂದು ಕೆಲವರು ಈ ಮಹಾ ವಿಪತ್ತಿನ ಅರಿವಿಲ್ಲದೆ ಇನ್ನೂ ನಿಷ್ಕ್ರಿಯರಾಗಿದ್ದಾರೆ. ಅವರಿಗೆ ನಾಝೀಗಳ ಸಮಯದಲ್ಲಿ ಜರ್ಮನ್ ಕವಿಯೊಬ್ಬ ಬರೆದುದನನ್ನು ನೆನಪಿಸಬೇಕಾಗಿದೆ.

ಮೊದಲು ಯೆಹೂದಿಯರನ್ನು ಹುಡುಕಿ ಬಂದರು ಅವರು
ನಾನು ಮಾತಾಡಲಿಲ್ಲ--ಏಕೆಂದರೆ ನಾನು ಯೆಹೂದಿಯಲ್ಲ
ನಂತರ ಕಮ್ಯುನಿಸ್ಟರನ್ನು ಹುಡುಕಿ ಬಂದರು ಅವರು
ನಾನು ಮಾತಾಡಲಿಲ್ಲ--ಏಕೆಂದರೆ ನಾನು ಕಮ್ಯುನಿಸ್ಟನಾಗಿರಲಿಲ್ಲ
ನಂತರ ಕ್ಯಾಥೋಲಿಕರನ್ನು ಹುಡುಕಿ ಬಂದರು ಅವರು
ನಾನು ಮಾತಾಡಲಿಲ್ಲ--ಏಕೆಂದರೆ ನಾನು ಕ್ಯಾಥೋಲಿಕನಾಗಿರಲಿಲ್ಲ
ನಂತರ ನನ್ನನ್ನೇ ಹುಡುಕಿ ಬಂದರು ಅವರು
ಆಗ ನನ್ನ ಪರ ಮಾತಾಡುವವರು ಯಾರೂ ಉಳಿದಿರಲಿಲ್ಲ.

ಈ ಗಂಭೀರ ಸವಾಲನ್ನು ಎದುರಿಸುವಲ್ಲಿ ನಿಷ್ಕ್ರಿಯತೆಯ ಅರ್ಥ ದೇಶಕ್ಕೆ, ನಮಗೆ ಮಹಾ ವಿಪತ್ತು-ಏಕೆಂದರೆ ದುಷ್ಟ ಶಕ್ತಿಯ ಗೆಲುವಿಗೆ ಶಿಷ್ಟ ಶಕ್ತಿಯ ಮೌನವೇ ಸಾಕು.

ಈ ಕಾವಿ ಶರ್ಟುಗಳು ಯಾವ ಹಿಂದೂಗಳ ಪ್ರತಿಪಾದನೆ ಮಾಡುತ್ತಿದ್ದಾರೆ?

ನಾಲ್ಕು ದಶಕಗಳ ಹಿಂದೆ, ದಶಕಗಳ ಹೋರಾಟದ ನಂತರ ಜಾತ್ಯಾತೀತ ಭಾರತದ ಸ್ಥಾಪನೆ ಮಾಡಲು ನಿರ್ಧರಿಸಿದ, 'ಹಿಂದೂ ರಾಷ್ಟ್ರ'ದ ಪರಿಕಲ್ಪನೆ ದೇಶವನ್ನು ಹಿಂದಕ್ಕೆಳೆಯುವ ಪರಿಕಲ್ಪನೆಯೆಂದು ಧಿಕ್ಕರಿಸಿದ ಬಹುಪಾಲು ಹಿಂದೂಗಳದ್ದಂತೂ ಅಲ್ಲ.

ವಿಂಧ್ಯ ಪರ್ವತದ ದಕ್ಷಿಣದಲ್ಲಿರುವವರಂತೂ ಈ ಕಾವಿಶರ್ಟುಗಳ ಪ್ರಕಾರ 'ಹಿಂದೂ'ಗಳೇ ಅಲ್ಲ. ಕೇರಳದಲ್ಲಿ ಓಣಂ ಆಚರಿಸುವವರು ಯಾರೂ ಇವರ ಪ್ರಕಾರ ಹಿಂದೂಗಳಾಗಲಾರರು ಏಕೆಂದರೆ ಮಹಾಬಲಿ 'ಅಸುರ' ತಾನೇ?

ಹಿಂದೂಸ್ತಾನದಲ್ಲಿರುವ ವಿದೇಶಿ ಜನಾಂಗಗಳು ಹಿಂದೂಭಾಷೆ, ಧರ್ಮ, ಸಂಸ್ಕೃತಿಯಲ್ಲಿ ಬೆರೆತು ಹೋಗಬೇಕು ಇಲ್ಲವೇ ಯಾವ ಹಕ್ಕುಗಳೂ ಇಲ್ಲದೆ ಬದುಕಬೇಕು- ಎಂದಿದ್ದರು 'ಹಿಂದೂ ರಾಷ್ಟ್ರ' ದ ಪ್ರತಿಪಾದಕ ಗೋಲ್ವಾಲ್ಕರ್

ತನ್ನ ಧರ್ಮ ಮಾತ್ರವೇ ಉಳಿಯಬೇಕು, ಉಳಿದವೆಲ್ಲಾ ನಾಶವಾಗಬೇಕು ಎಂಬ ಕನಸು ಕಾಣುವವನ ಬಗ್ಗೆ ತನಗೆ ಬಹಳ ಕನಿಕರವೆನಿಸುತ್ತದೆ ಎಂದಿದ್ದರು ಸ್ವಾಮಿ ವಿವೇಕಾನಂದ.

ಕಾವಿಶರ್ಟುಗಳು ಸ್ವಾಮಿ ವಿವೇಕಾನಂದರನ್ನೇ ಧರ್ಮ ಬಾಹಿರನೆಂದು ಘೋಷಿಸುವರೇ?

ಈ ಎರಡು ದಾರಿಗಳಲ್ಲಿ ಸ್ವಾಮಿ ವಿವೇಕಾನಂದರು ಹೇಳಿದ ದಾರಿಯೇ ನಿಜವಾದ ಹಿಂದೂ ಜೀವನ ಮಾರ್ಗವೆಂದರೆ ನಿಜವಲ್ಲವೇ?

ಇನ್ನೊಬ್ಬ ಆಕಾಶವಾಣಿ ನಿರ್ದೇಶಕನ ಹತ್ಯೆ

ಭಾರತದಿಂದ ಪಂಜಾಬನ್ನು ಪ್ರತ್ಯೇಕಿಸಲು ಪ್ರಯತ್ನ ನಡೆಸುತ್ತಿರುವ ಸಾಮ್ರಾಜ್ಯಶಾಹಿ ಪ್ರೇರಿತ ಶಕ್ತಿಗಳು ಅಂಥದಕ್ಕೆ ಸರ್ವಥಾ ಅವಕಾಶ ಕೊಡುವುದಿಲ್ಲ ಎಂಬ ದೃಢತೆಯಿಂದಾಗಿ ಹತಾಶಗೊಂಡಿರುವುದು ಇನ್ನಷ್ಟು ಸ್ಪಷ್ಟವಾಗತೊಡಗಿದೆ. ಭಯೋತ್ಪಾದಕರು ತೀವ್ರಗೊಳಿಸಿರುವ ಹತ್ಯಾಕಾಂಡಗಳೇ ಇದಕ್ಕೆ ಪುರಾವೆ ಒದಗಿಸುತ್ತವೆ.

ಭಯೋತ್ಪಾದಕರ ಅಮಾನವೀಯ ಕೃತ್ಯಗಳ ಬಗ್ಗೆ 'ಪಕ್ಷರಂಗ' ಡಿಸೆಂಬರ್ ಎರಡರ ಸಂಚಿಕೆಯಲ್ಲಿ ಓದಿದ್ದೀರಿ. ಸಂಚಿಕೆಯಲ್ಲಿ ಈ ದೇಶದ್ರೋಹಿಗಳು ಸುದ್ದಿ ಮಾಧ್ಯಮದವರಿಗೆ ಹಾಕಿರುವ ಬೆದರಿಕೆ ವಿಚಾರ ಓದಿರುವಿರಿ. ಈ ಬೆದರಿಕೆಗೆ ಯಾರೂ ಮಣಿಯದಿರುವಂಥ , ಅದಕ್ಕೆ ಬದಲಾಗಿ ಅದನ್ನು ಮೀರುವಂಥ ದೇಶಪ್ರೇಮಿಗಳನ್ನು ಕಂಡ ಈ ಕ್ರೂರರ ನೈತಿಕ ದಿವಾಳಿಕೋರತನಕ್ಕೆ ಸಾಕ್ಷಿಯಾಗಿ ಒಂದು ಹೃದಯಸ್ಪರ್ಶಿ ಘಟನೆ ಈಗ ನಮ್ಮ ಮುಂದೆ ಇದೆ.

ಅದುವೇ ಆಕಾಶವಾಣಿ ಚಂಡೀಗಢ ನಿಲಯದ ನಿರ್ದೇಶಕ ರಾಜೇಂದ್ರರ ಕುಮಾರ್ ತಾಲಿಬ್(54 ವರ್ಷ) ಅವರ ಅಮಾನುಷ ಹತ್ಯೆ. ಡಿಸೆಂಬರ್ 6 ರಂದು ಬೆಳಿಗ್ಗೆ ಮನೆಯ ವರಾಂಡದಲ್ಲಿದ್ದ ತಾಲಿಬ್‌ರ ಮೇಲೆ ಇಬ್ಬರು ಭಯೋತ್ಪಾದಕರು ಸಮೀಪದಿಂದ ಗುಂಡು ಹಾರಿಸಿ ಕೊಂದು ಹಾಕಿದರು.

ಆ ದಿನ ಬೆಳಿಗ್ಗೆ ಮನೆಯ ವರಾಂಡದಲ್ಲಿ ಮಗನೊಂದಿಗೆ ತಾಲಿಬ್ ಕುಳಿತಿದ್ದಾಗ ಇಬ್ಬರು ಯುವಕರು ಬಂದರು. ಅವರು ಬರುತ್ತಿದ್ದುದನ್ನು ಕಂಡ ತಾಲಿಬ್ ಕುರ್ಚಿ ತರುವಂತೆ ಮಗನಿಗೆ ಹೇಳಿದರು. ಮಗ ಅತ್ತ ಹೋದ ಕೂಡಲೇ ಈ ಇಬ್ಬರು ಹೇಡಿಗಳಂತೆ ನಿಶ್ಶಸ್ತ್ರ ತಾಲಿಬ್‌ರ ಮೇಲೆ ಗುಂಡು ಹಾರಿಸಿ ಸ್ಕೂಟರ್‌ನಲ್ಲಿ ಪರಾರಿಯಾದರು.

ಅಂಗವಿಕಲರಾಗಿದ್ದ ತಾಲಿಬ್ ಒಳ್ಳೆಯ ಉರ್ದು ಕವಿಯಾಗಿಯೂ ಪ್ರಸಿದ್ಧರಾಗಿದ್ದರು. ಈ ವ್ಯಕ್ತಿ ಮಾಡಿದ ಅಪರಾಧವಾದರೂ ಏನು? ಈಗಾಗಲೆ ಪ್ರಸ್ತಾಪಿಸಿರುವಂತೆ 'ಸೋಹನ್ ಸಿಂಗ್ ನೇತೃತ್ವದ ಪಂಥೀಯ ಸಮಿತಿ ವಿಧಿಸಿದ್ದ ನೀತಿ ನಿಯಮಗಳನ್ನು'(ಕೋಡ್ ಆಫ್ ಕಂಡಕ್ಟ್) ಅವರು ಕ್ಯಾರೇ ಎನ್ನದೆ ಅರಬಿ ಸಮುದ್ರಕ್ಕೆ ಎಸೆದದ್ದು. ಅವರು ಆಕಾಶವಾಣಿ ಚಂಡೀಗಢ ನಿಲಯದ ಮೂಲಕ ಪ್ರಸಾರ ಮಾಡಿದ ಒಂದು ಚರ್ಚೆಯಲ್ಲಿ ಭಾಗವಹಿಸಿದ್ದ ಖ್ಯಾತ ಪತ್ರಕರ್ತರೊಬ್ಬರು ಪಂಥೀಯ ಸಮಿತಿಯ ಬೆದರಿಕೆಯನ್ನು ಕಟುವಾಗಿ ಟೀಕಿಸಿದ್ದರು. ಇದುವೇ ರಕ್ತ ಪಿಪಾಸು ಭಯೋತ್ಪಾದಕರ ಕಣ್ಣು ಕೆಂಪಾಗಲು ಕಾರಣವಾಗಿತ್ತು.

ಅದಕ್ಕೂ ಹಿಂದಿನಿಂದಲೂ ಭಯೋತ್ಪಾದಕರು ತಾಲಿಬ್‌ರ ಮೇಲೆ ಒಂದು ಕಣ್ಣಿಟ್ಟಿದ್ದರು. ಅವರು ಛತ್ರಿ ಪಡೆದು ನಿಲಯ ನಿರ್ದೇಶಕರಾಗಿ ಚಂಡೀಗಢಕ್ಕೆ ಬಂದಾಗಲೇ ಅವರ ಹೆಸರು ಭಯೋತ್ಪಾದಕರ 'ಹತ್ಯಾ ಪಟ್ಟಿ' ಯಲ್ಲಿ(ಹಿಟ್ ಲಿಸ್ಟ್) ಸೇರಿತ್ತು.

ಮಗಳ ಮದುವೆಯ ಸಂಭ್ರಮದಲ್ಲಿ ಇನ್ನೇನು ಕೆಲ ದಿನಗಳಲ್ಲಿ ಮುಳುಗಬೇಕಾಗಿದ್ದ ತಾಲಿಬ್ ರಜೆ ಮೇಲಿದ್ದರು. ದೇಶದ್ರೋಹಿಗಳ ಗುಂಡಿನಿಂದಾಗಿ ರಕ್ತದ ಮಡುವಿನಲ್ಲಿ ಮುಳುಗಿದರು. ವೀರ ಮರಣ ಅಪ್ಪಿದರು........

ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಚುಟುವಟಿಕೆ ನಡೆಸುತ್ತಿರುವ ಪಾಕಿಸ್ತಾನ್ ಬೆಂಬಲಿತ ಮುಸ್ಲಿಂ ಮೂಲಭೂತವಾದಿಗಳು ತಮ್ಮ ಬೆದರಿಕೆಗೆ ಮಣಿಯದ ಶ್ರೀನಗರ ದೂರದರ್ಶನ ಕೇಂದ್ರದ ನಿರ್ದೇಶಕರನ್ನು ಕೊಂದಿದ್ದು ಇಲ್ಲಿ ನೆನಪಿಗೆ ಬರುತ್ತದೆ. ಇದೇ ವರ್ಷ ಫೆಬ್ರವರಿ 13 ರಂದು ಆ ಅಧಿಕಾರಿಯ ಹತ್ಯೆ ನಡೆದಿತ್ತು.

ಒಬ್ಬ ತಾಲಿಬ್‌ನನ್ನು ಕೊಂದು ತಾವೇನೋ ಸಾಧಿಸಿಬಿಟ್ಟೆವು ' ಖಲಿಸ್ತಾನ್ ' ರಚನೆ ಆಗೇಬಿಟ್ಟಿತು ಎಂದು ಭಯೋತ್ಪಾದಕರೇನೋ ಉಬ್ಬಬೇಕಾಗಿಲ್ಲ. ಸಾವಿರ ಸಾವಿರ, ಲಕ್ಷ ಲಕ್ಷ ತಾಲಿಬ್‌ಗಳು ಇಲ್ಲಿದ್ದು ಭಾರತವನ್ನು ಐಕ್ಯವಾಗಿಡಲು ಪಣತೊಟ್ಟಿರುವರು ಎನ್ನುವುದನ್ನವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಅಷ್ಟೇ.

ಕಾರ್ಬೈಡ್ ವಿಚಾರ ಕೇಂದ್ರದ ವಿರುದ್ಧ ಮಧ್ಯ ಪ್ರದೇಶ ಸರಕಾರ

ಸಾವಿರಾರು ಜನರ ಸಾವು, ಇನ್ನೂ ಲಕ್ಷಾಂತರ ಜನರಿಗೆ ಅಪಾರ ನೋವು ತಂದಿತ್ತಿರುವ ಯೂನಿಯನ್ ಕಾರ್ಬೈಡ್ ಕಂಪನಿಯ ವಿರುದ್ಧ ಕ್ರಿಮಿನಿಲ್ ದಾವೆಗಳನ್ನು ರದ್ದು ಮಾಡಲು ಕೇಂದ್ರ ಸರಕಾರ ಯೋಚಿಸಿದೆ. ಸರಕಾರದ ಈ ಕ್ರಮವನ್ನು ಮಧ್ಯ ಪ್ರದೇಶ ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಆರು ವರ್ಷಗಳ ಹಿಂದೆ, ಡಿಸೆಂಬರ್ 2-3 ರ ಮಧ್ಯ ರಾತ್ರಿ ಸಂಭವಿಸಿದ 'ಭೋಪಾಲ್ ವಿಷಾನಿಲ ದುರಂತ' ಎಂದು ಕರೆಯಲಾಗುವ ಕರಾಳ ಛಾಯೆ ಸಂತ್ರಸ್ತರ ಮೇಲೆ ಇನ್ನೂ ಹರಿದಾಡುತ್ತಿದೆ. ಹೋದ ಜೀವಗಳು ಮರಳವು, ಹೌದು ಆದರೆ ಬದುಕುಳಿದವರಿಗೆ ಪರಿಹಾರವೂ ಇಲ್ಲಿ ಮರೀಚಿಕೆಯಾಗಿದೆ. ಅನಾರೋಗ್ಯಕರ ಸಾಮಾಜಿಕ ವ್ಯವಸ್ಥೆಯ ಒಂದು (ಸ)ಲಕ್ಷಣವಿದು!

ಮೇಹಂ ಪ್ರಕರಣ: ವಿಚಾರಣಾ ಆಯೋಗದ ರಾಜೀನಾಮೆ

ರಾಜಕೀಯ ಹಿಂಸಾಚಾರಕ್ಕೆ ಪರ್ಯಾಯ ಪದದಂತಿರುವ ಮೇಹಂ, ಹರ್ಯಾಣ ರಾಜ್ಯದ ಈ ವಿಧಾನ ಸಭಾ ಕ್ಷೇತ್ರದ ಚುನಾವಣೆ ಸಂದರ್ಭದಲ್ಲಿ ಕಳೆದ ವರ್ಷ ನಡೆದ ಹಿಂಸೆ, ದೊಂಬಿ, ಕೊಲೆ ಸುಲಿಗೆ ಅಪಾರವಾದುದು. ಮೇಹಂ ಹೆಸರನ್ನು ಅದು (ಕು)ಖ್ಯಾತಗೊಳಿಸಿತು. ಇಂಥವುಗಳಿಂದ ಒಂದು ಬಾರಿ ಮುಂದಕ್ಕೆ ಹಾಕಲ್ಪಟ್ಟ ಚುನಾವಣೆ, ಎರಡನೇ ಬಾರಿಗೆ ಸ್ವತಂತ್ರ ಅಭ್ಯರ್ಥಿಯೊಬ್ಬರ ಹತ್ಯೆಯಿಂದಾಗಿ ಮುಂದಕ್ಕೆ ಹೋಯಿತು. ಈ ಎರಡು ಸಂದರ್ಭಗಳಲ್ಲೂ ದೇಶದ 'ದೊಡ್ಡಪ್ಪ'ನ ಶಣ್ಮಗ ಓಂ ಪ್ರಕಾಶ್ ಚೌತಾಲ ಪ್ರಧಾನ ಸೂತ್ರಧಾರ. ಜನರ ವ್ಯಾಪಕ ಚಳುವಳಿಯಿಂದಾಗಿ ಚೌತಾಲ ಹರ್ಯಾಣ ಮುಖ್ಯ ಮಂತ್ರಿ ಸ್ಥಾನವನ್ನು ಬಿಡಬೇಕಾಯಿತು.

ಹಲವಾರು ಬೆಳವಣಿಗೆಗಳು ಸಂಭವಿಸಿ ಕೊನೆಗೂ ಈ ವಿಚಾರದಲ್ಲಿ ತನಿಖೆ ಮಾಡಲು ರಾಷ್ಟ್ರೀಯ ರಂಗ ಸರಕಾರ ಡಿ.ಪಿ.ಮದನ್ ಆಯೋಗವನ್ನು(ಏಕ ಸದಸ್ಯ) ರಚಿಸಿತು.

ಆಯೋಗ ರಚಿಸಿದ ಮಾತ್ರಕ್ಕೆ ಸತ್ಯ ಹೊರಬರುವುದಿಲ್ಲವಲ್ಲ. ಆಯೋಗದ ಕಲಾಪಗಳಿಗೆ ಸಮರ್ಪಕ ಸೌಲಭ್ಯಗಳು ಲಭ್ಯವಾಗಬೇಕು. ಹಾಗೇನೂ ಆಗಲೇ ಇಲ್ಲ. ಆಗಲೂ ಈಗಲೂ ಈಗಂತೂ ಚೌತಾಲರಿಗೆ 'ಬೇಕಾದವರ' ಸರಕಾರವೇ ಇರುವುದರಿಂದ ಆಯೋಗ ಚಕ್ರ ಸಾಗುವುದೇ ಕಷ್ಟದ ಕೆಲಸ. ತನಿಖೆಯಲ್ಲಿ ವಿಳಂಬ ಮಾಡುತ್ತಿರುವುದರಿಂದ ಆಪಾದಿತರು ಸಾಕ್ಷ್ಯಗಳ ನಾಶ ಮಾಡಲು ಅವಕಾಶವಾಗಿದೆ ಎಂದು ಹೇಳಿರುವ ನ್ಯಾ.ಡಿ.ಪಿ.ಮದನ್ ಆಯೋಗಕ್ಕೆ ರಾಜನಾಮೆ ನೀಡಿದ್ದಾರೆ. ಅಂದರೆ ಆ ಆಯೋಗ ಅಸ್ತಿತ್ವದಲ್ಲಿ ಇಲ್ಲ ಎಂಬಂತಾಗಿದೆ.

ಚೌತಾಲ ಈಗ ನಿಟ್ಟುಸಿರು ಬಿಟ್ಟಿರಬಹುದು.

ಬಾರ್ಬೋಸಾ ಸಂಪುಟ ರಾಜೀನಾಮೆ

ಸುಮಾರು ಎರಡು ವಾರಗಳಿಂದ ತಾಂಡವವಾಡುತ್ತಿರುವ ಗೋವಾ ರಾಜಕೀಯ ಬಿಕ್ಕಟ್ಟು ಈ ಲೇಖನ ಸಿದ್ಧಪಡಿಸುವವರೆಗೂ ಪರಿಹಾರವಾಗಿರಲಿಲ್ಲ. ಈ ಮಧ್ಯೆ ಮುಖ್ಯಮಂತ್ರಿ ಡಾ.ಲೂಯಿಸ್ ಬಾರ್ಬೋಸಾ ಸಂಪುಟ ರಾಜೀನಾಮೆ ನೀಡಿದೆ. ಮುಂದಿನ ವ್ಯವಸ್ಥೆ ಆಗುವವರೆಗೆ ಮುಖ್ಯಮಂತ್ರಿಯಾಗಿ ಮುಂದುವರಿಯುವಂತೆ ರಾಜ್ಯಪಾಲರು ಸೂಚಿಸಿದ್ದಾರೆ.

ಬಾರ್ಬೋಸಾ ರಾಜೀನಾಮೆ ಕೊಟ್ಟಿರುವುದು ರಾಜ್ಯದಲ್ಲಿ ಕಾಂಗ್ರೆಸ್(ಐ) ಸರಕಾರ ರಚಿಸಲು ಅನುಕೂಲವಾಗಲು.

ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ(ಎಂಜಿಪಿ) ಗೋವಾ ಪೀಪಲ್ಸ್ ಪಾರ್ಟಿಯ ಸರಕಾರಕ್ಕೆ ಬೆಂಬಲ ವಾಪಸ್ ಪಡೆದದ್ದರಿಂದ ಬಿಕ್ಕಟ್ಟು ಉದ್ಭವಿಸಿತ್ತು. ಎಂಟು ತಿಂಗಳ ಪ್ರಗತಿಪರ ಪ್ರಜಾಸತ್ತಾತ್ಮಕ ರಂಗ ಸಮ್ಮಿಶ್ರ ಸರಕಾರದ ಆಯುಷ್ಯ ಕೊನೆಗೊಂಡಿತ್ತು.

ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ವಿಧಾನಸಭೆಯಲ್ಲಿ ಬಹುಮತ ಸಾಬೀತು ಪಡಿಸುವಂತೆ ರಾಜ್ಯಪಾಲರು ಬಾರ್ಬೋಸಾರಿಗೆ ಸೂಚಿಸಿದ್ದರು. ಅದರಂತೆ ಗೋವಾ ಅಸ್ಸೆಂಬ್ಲಿಯ ವಿಶೇಷ ಅಧಿವೇಶನ ಡಿಸೆಂಬರ್ 10 ರಂದು ವ್ಯವಸ್ಥೆಯಾಗಿತ್ತು. ಆದರೆ ಅಧಿವೇಶನ ಶುರುವಾಗಬೇಕಾದ ಸ್ವಲ್ಪ ಹೊತ್ತಿಗೆ ಮುನ್ನ ಮುಖ್ಯಮಂತ್ರಿ ರಾಜೀನಾಮೆ ನೀಡಿದರು. ಅಧಿವೇಶನವನ್ನು ಸ್ಪೀಕರ್ ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದರು.

ಕಾಂಗ್ರೆ ರಂಗ: ಈಗ ಗೋವಾದಲ್ಲಿ ಕಾಂಗ್ರೆಸ್(ಐ), ಜಿಪಿಪಿ ಮತ್ತು ಎಂಜಿಪಿಯ ಕೆಲವರು ಭಿನ್ನಮತೀಯರು ಒಳಗೊಂಡ ಕಾಂಗ್ರೆಸ ಪ್ರಜಾಸತ್ತಾತ್ಮಕ ರಂಗ(ಸಿಡಿಎಫ್) ರಚನೆಯಾಗಿದೆ.

ಗೋವಾ ವಿಧಾನಸಬೆಯಲ್ಲಿ 40 ಸದಸ್ಯರಿದ್ದು ಸಿಡಿಎಫ್ 20 ಸದಸ್ಯರನ್ನು ಹೊಂದಿದೆ. ಎಂಜಿಪಿಗೆ ಕೂಡ 20 ಸದಸ್ಯರ ಬೆಂಬಲವಿದೆ. ಇದರಿಂದಾಗಿ ಎರಡೂ ಕಡೆಯವರು ಸಮಾನ ಬಲ ಹೊಂದಿರುವುದರಿಂದ ಸರಕಾರ ರಚನೆಯನ್ನು ಯಾರು, ಹೇಗೆ ಮಾಡುವರು ಎನ್ನುವುದು ಕುತೂಹಲದ ವಿಚಾರವಾಗಿದೆ.

'ಬ್ರಿಫ್‌ಕೇಸ್'ಗಳ ವಿನಿಮಯ ಧಾರಾಳವಾಗಿ ನಡೆಯಬಹುದೇನೋ?

ಕಾಶ್ಮೀರ ಉಗ್ರಗಾಮಿಗಳ ಪರಾರಿ ಯತ್ನ

ದೇಶದ ಉತ್ತರ ತುದಿ ಜಮ್ಮು ಮತ್ತು ಕಾಶ್ಮೀರದ ಜನ ಜೀವನಕ್ಕೆ ಕೊಳ್ಳಿಯಿಟ್ಟಿರುವ ಮುಸ್ಲಿಂ ಪ್ರತ್ಯೇಕತಾವಾದಿ ಉಗ್ರಗಾಮಿಗಳು ದಕ್ಷಿಣ ತುದಿ ತಮಿಳುನಾಡಿನಲ್ಲಿ ಒಂದು ಸುದ್ದಿ ಮಾಡಿದ್ದಾರೆ. ಅಂದರೆ ಉಗ್ರಗಾಮಿಗಳೇನು ಅಲ್ಲಿಗೆ ಹೋಗಿ ಚಟುವಟಿಕೆ ನಡೆಸಿರುವುದಲ್ಲ. ಇದು ಬಂಧನದಲ್ಲಿರುವ ಉಗ್ರಗಾಮಿಗಳಿಗೆ ಸಂಬಂಧಿಸಿದ ವಿಚಾರ.

ಜಮ್ಮು-ಕಾಶ್ಮೀರದ ಕೆಲವು ಬಂಧಿತ ಉಗ್ರಗಾಮಿಗಳನ್ನು ಕೊಯಮತ್ತೂರಿನ ಸೆಂಟ್ರಲ್ ಜೈಲಿನಲ್ಲಿ ಇಡಲಾಗಿದೆ. ಡಿಸೆಂಬರ್ 11 ರಂದು ಬೆಳಿಗ್ಗೆ ಆಹಾರ ನೀಡಲು ಹೋದ ಜೈಲು ಸಿಬ್ಬಂದಿಗಳ ಮೇಲೆ ಹಲ್ಲೆ ನಡೆಸಿದ ಉಗ್ರಗಾಮಿಗಳು ಪರಾರಿಯಾಲು ಪ್ರಯತ್ನಿಸಿದರು. ತಕ್ಷಣವೇ ಎಚ್ಚರಿಕೆಯ ಗಂಟೆ ಬಾರಿಸಿದಾಗ ಭದ್ರತಾ ಸಿಬ್ಬಂದಿಗಳು ಹೆಚ್ಚು ಸಂಖ್ಯೆಯಲ್ಲಿ ಬಂದು ಈ ಉಗ್ರಗಾಮಿಗಳನ್ನು ಮತ್ತೆ ಅವರವರ ಕೋಣೆಗಳಿಗೆ ಸೇರಿಸುವಲ್ಲಿ ಯಶಸ್ವಿಯಾದರು.

'ಅಲ್ಪ ಸಂಖ್ಯಾತರಲ್ಲಿ ಆತ್ಮ ವಿಶ್ವಾಸ ತುಂಬಿ'

ದೇಶದ ವಿವಿದ ಭಾಗಗಳಲ್ಲಿ ನಡೆದಿರುವ ಕೋಮು ಗಲಭೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸರಕಾರ ವಿಫಲವಾಗಿರುವದನ್ನು ಪ್ರತಿಭಟಿಸಿ ಅನೇಕ ಮುಸ್ಲಿಂ ನಾಯಕರು ಡಿ.11 ರಂದು ಪ್ರಧಾನಿ ಚಂದ್ರಶೇಖರ್‌ರ ಮನೆಯ ಹತ್ತಿರ ಧರಣಿ ಸತ್ಯಾಗ್ರಹ ನಡೆಸಿದರು.

ಅಲ್ಪ ಸಂಖ್ಯಾತ ಸಮುದಾಯದಲ್ಲಿ ಕುಸಿಯುತ್ತಿರುವ ಆತ್ಮ ವಿಶ್ವಾಸವನ್ನು ಮರಳಿ ತುಂಬಲು ಅಗತ್ಯಕ್ರಮ ಕೈಗೊಳ್ಳಬೇಕೆಂದು ಈ ಮುಖಂಡರು ಆಗ್ರಹಿಸಿದ್ದಾರೆ.

ಕೆಲವು ರಾಜಕೀಯ ನಾಯಕರು ಪ್ರಚೋದನಕಾರಿ ಭಾಷಣಗಳನ್ನು ಮಾಡುತ್ತಿದ್ದು ಅಂಥವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ದೆಹಲಿ ಜಮಾ ಮಸೀದಿಯ ಶಾಹಿ ಇಮಾಮ್ ಸೈಯದ್ ಅಬ್ದುಲ್ಲಾ ಬುಖಾರಿ ಮೊದಲಾದವರು ಭಾಗವಹಿಸಿದ್ದರು.

ದೇವಿಲಾಲ್‌ಗೆ ಸವಾಲ್

ಹರ್ಯಾಣ ಮಾತ್ರವಲ್ಲ ದೇಶಕ್ಕೆ 'ದೊಡ್ಡಪ್ಪ'(ತಾವೋ) ಎಂಬ ಸ್ವಯಂ ಘೋಷಿತ ನಾಯಕ ದೇವಿಲಾಲ್‌ರಿಗೆ ಅವರದೇ ರಾಜ್ಯದಲ್ಲಿ ಒಂದು ದೊಡ್ಡ ಸವಾಲ್ ಎಸೆಯಲಾಗಿದೆ. ಅವರ ಸುಪುತ್ರ ಓಂ ಪ್ರಕಾಶ್ ಚೌತಾಲಾರ ವಿರುದ್ಧ ಸದಾ ಸ್ಪರ್ಧೆಗಳಿಯುವ ಆನಂದಸಿಂಗ್ ಡಾಂಗಿ ಈ ಸವಾಲು ಹಾಕಿದ್ದಾರೆ. ರೋಹ್ಟಕ್‌ನಲ್ಲಿ ಡಿಸೆಂಬರ್ 9 ರಂದು ಡಾಂಗಿಯವರ 'ಹರ್ಯಾಣ ಪಂಚಾಯತ್ ಸಂಘರ್ಷ ಸಮಿತಿ' ಬೃಹತ್ ರ್‍ಯಾಲಿ ನಡೆಸಿತು.

ಉಪಪ್ರಧಾನಿ ದೇವಿಲಾಲ್ ಮೇಹಂ ಕ್ಷೇತ್ರ ಪ್ರವೇಶಿಸುವುದನ್ನು ಜನರು ನಿರ್ಬಂಧಿಸುವರು ಎಂದು ಈ ರ್‍ಯಾಲಿಯಲ್ಲಿ ಘೋಷಿಸಲಾಯಿತು.

ಬಿಹಾರ: ದಾಖಲೆ ಗಾತ್ರದ ಸಂಪುಟ

ರಾಷ್ಟ್ರೀಯ ರಂಗ ಸರಕಾರ ನಿರ್ಗಮನದೊಂದಿಗೆ ಜನತಾದಳ ಆಳ್ವಿಕೆಯ ಕೆಲವು ರಾಜ್ಯ ಸರಕಾರಗಳು ಜನತಾದಳ(-ಎಸ್) ಆಗಿ ಪರಿವರ್ತನೆಗೊಂಡವು. ಉತ್ತರಪ್ರದೇಶ, ಗುಜರಾತ್ ಸರಕಾರ. ಬಿಹಾರವನ್ನು ಬುಟ್ಟಿಗೆ ಹಾಕಿಕೊಳ್ಳಲು ಬಹಳ ಪ್ರಯತ್ನ ನಡೆಯಿತು.ಆದರೆ ಯಶಸ್ವಿಯಾಗಲಿಲ್ಲ. ಎಡ ಪಕ್ಷಗಳು, ಜೆಎಂಎಂ ಬೆಂಬಲದೊಂದಿಗೆ ಲಲ್ಲೂ ಪ್ರಸಾದ್ ಯಾದವ್ ಬಲಾಬಲ ಪರೀಕ್ಷೆಯಲ್ಲಿ ಪಾಸಾಗಿದ್ದರು.

ಇದರೊಂದಿಗೆ ಉಳಿದದ್ದಕ್ಕೆ ಪ್ರತಿಫಲವೋ ಎನ್ನುವ ರೀತಿಯಲ್ಲಿ ಜನತಾದಳ ಶಾಸಕರಿಗೆ ಭಾರಿ ಕೊಡುಗೆಯನ್ನೇ ಲಲ್ಲೂ ಪ್ರಸಾದ್ ಕೊಟ್ಟಂತಿದೆ.

ಸದನದಲ್ಲಿ ಜನತಾದಳಕ್ಕೆ ಇರುವ ಸದಸ್ಯರ ಪೈಕಿ ಸರಿಸುಮಾರು [illegible] ಮಂದಿ, (ಅಂದರೆ 72) ಈಗ ಬಿ[illegible] ವರು

ಬಹುಶಃ ಈ ವಿಚಾರದಲ್ಲಿ, [illegible] 'ಆಳುವ ಪಕ್ಷಕ್ಕೂ' ಬಿಹಾರಕ್ಕೂ ಯಾವ[illegible] ವ್ಯತ್ಯಾಸ ಕಾಣಿಸುವುದಿಲ್ಲ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್‌ರವರ ನಿಧನದಿಂದ ದೇಶ ಮಹಿಳಾ ಸಮಾಜ ಹಾಗೂ ಹಕ್ಕುಗಳ ಒಬ್ಬ ಪ್ರತಿಪಾದಕರನ್ನು [illegible] ರಾಷ್ಟ್ರವಾದಿಯನ್ನು ಹಾಗೂ ಒಬ್ಬ ದೇಶಪ್ರೇಮಿಯನ್ನು ಕಳೆಕೊಂಡಿದೆ ಎಂದು ಸಿಪಿಐ(ಎಂ) ತನ್ನ ಶ್ರದ್ಧಾಂಜಲಿ ಅರ್ಪಿಸಿದೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಡಿಸೆಂಬರ್ 1ರಂದು ದೆಹರಾಡೂನ್‌ನಲ್ಲಿ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು. ಅವರು ಕೆಲದಿನಗಳಿಂದ ಅಸ್ವಸ್ಥರಾಗಿದ್ದರು.

ಶ್ರೀಮತಿ ಪಂಡಿತ್ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರನ್ನು ಸಂಘಟಿಸುವುದರಲ್ಲಿ ಸಕ್ರಿಯ ಪಾತ್ರ ವಹಿಸಿದರು. ಹಲವು ಬಾರಿ 1931, 1932, 1941 ಹಾಗೂ 1942 ರಲ್ಲಿ ಜೈಲುವಾಸ ಅನುಭವಿಸಿದರು. 1937 ರಲ್ಲಿ ಸಂಯುಕ್ತ ಪ್ರಾಂತ [illegible] ಚುನಾಯಿತರಾಗಿ ತಾತ್ಕಾಲಿಕ ಸರಕಾರದಲ್ಲಿ ಮಂತ್ರಿಯಾದರು. 1939 ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷೆಯಾದರು. 1944 ರಲ್ಲಿ ಮಹಾತ್ಮಾ ಗಾಂಧಿಯವರ ಕೋರಿಕೆಯಂತೆ ಭಾರತದ ಸ್ವಾತಂತ್ರ್ಯದ ಹೋರಾಟವನ್ನು ಅಮೇರಿಕನ್ ಜನತೆಯೆದುರು [illegible] ಅಮೇರಿಕಕ್ಕೆ ಭೇಟಿಯಿತ್ತರು.

ಸ್ವಾತಂತ್ರ್ಯನಂತರ ಎರಡು ಬಾರಿ ಭಾರತದ ಸಂಸತ್ತಿನ ಸದಸ್ಯೆಯಾಗಿದ್ದರು. ಹಲವಾರು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತವನ್ನು ಮುಖ್ಯವಾಗಿ ಪ್ರತಿನಿಧಿಸಿದ ಇವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆಯಾದರು.

1970ರಲ್ಲಿ ಸಕ್ರಿಯ ರಾಜಕಾರಣದಿಂದ ನಿವೃತ್ತರಾದ ಅವರು 1977 ರಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಲು [illegible] ರಾಜಕೀಯಕ್ಕೆ ಮರಳಿದರು. ಸಿಎಫ್‌ಡಿ ಸ್ಥಾಪನೆಯಲ್ಲಿ ಅವರು ಮಹತ್ವದ ಪಾತ್ರ ವಹಿಸಿದರು.

ಸುದ್ದಿಸಂಗ್ರಹ

ಆಂಧ್ರ: ಒಂದು ಲಕ್ಷ ಜನರ ರ್‍ಯಾಲಿ

ಆಂಧ್ರ ಪ್ರದೇಶ ಕೃಷಿ ಕೂಲಿ[illegible]ರ ಸಂಘಟನೆಯ 18 ನೇ ಸಮ್ಮೇ[illegible] ನವೆಂಬರ್‌ನಲ್ಲಿ 3 ದಿನ ನಡೆಯಿತು. [illegible] ಲೀಯರು ಮತ್ತು ಪೋಲೀಸರ ದಬ್ಬಾಳಿಕೆ[illegible]ದ್ದರೂ ಯಶಸ್ವಿಯಾದ ಸಮ್ಮೇಳನದ ಕೊ[illegible]ಯಲ್ಲಿ ನಡೆದ ರ್‍ಯಾಲಿಯಲ್ಲಿ ಸುಮಾರು ಒಂ[illegible] ಲಕ್ಷ ಜನರು ಪಾಲ್ಗೊಂಡಿದ್ದರು.

4 ಲಕ್ಷ 50 ಸಾವಿರ ಸದಸ್ಯರನ್ನು ಪ್ರ[illegible]ನಿಧಿಸಿ 17 ಜಿಲ್ಲೆಗಳ 458 ಪ್ರತಿನಿಧಿಗ[illegible] ಭಾಗವಹಿಸಿದ್ದ ಸಮ್ಮೇಳನವನ್ನು ರಾ[illegible] ಕಿಸಾನ್ ಸಭಾದ ಪ್ರಧಾನ ಕಾರ್ಯದ[illegible] ಕೊರಟಾಲ ಸತ್ಯನಾರಾಯಣ ಉದ್ಘಾಟಿ[illegible]ದರು. ಅಖಿಲ ಭಾರತ ಕೃಷಿ ಕೂಲಿಗ[illegible]ರರ ಸಂಘದ ಪ್ರಧಾನ ಕಾರ್ಯದರ್ಶಿ ಪಿ. ಕುಂಜಚ್ಚನ್, ಪಶ್ಚಿಮ ಬಂಗಾಳದ ಭೂಸ[illegible] ದಾರಣೆ ಮತ್ತು ಗ್ರಾಮಾಣಾಬಿವೃದ್ಧಿ ಸಚಿ[illegible] ಬಿನಯ್ ಕೃಷ್ಣ ಚೌಧರಿ ಉಪಸ್ಥಿತರಿದ್ದರು.

ಆರ್.ಎಸ್.ಎಸ್.ನ ಹೇಯ ಕೃತ್ಯ

ಕೇರಳದ ಎರ್ನಾಕುಳಂ ಜಿಲ್ಲೆಯ ಉದಯಪ[illegible]ರದಲ್ಲಿ ಆರ್‌ಎಸ್‌ಎಸ್ ಭಯೋತ್ಪಾದ[illegible]ಕರು ನವೆಂಬರ್ 16 ರಂದು ನಾರಾಯಣ[illegible] ಎಂಬ ತಲೆ ಹೊರೆ ಕಾರ್ಮಿಕರ ನಾಯಕ[illegible] ಮನೆ ಮೇಲೆ ಧಾಳಿ ಮಾಡಿ ಅವರ ಹೆಂಡ[illegible]ಯನ್ನು ಕೊಂದು ಮಕ್ಕಳನ್ನು ಗಾಯಗೊಳಿಸಿದರು.

ಸ್ಥಳೀಯ ಸಿಪಿಐ(ಎಂ) ಘಟಕ[illegible] ಕಾರ್ಯದರ್ಶಿಯೂ ಆಗಿರುವ ನಾರಾಯ[illegible]ಣನ್‌ರ ಪ್ರಯತ್ನಗಳಿಂದಾಗಿ ಆರ್‌ಎ[illegible]ಸ್‌ಎಸ್ ನೇತೃತ್ವದಲ್ಲಿದ್ದ ಅನೇಕ ತ[illegible] ಹೊರೆ ಕಾರ್ಮಿಕರು ಕಾರ್ಮಿಕವರ್ಗದ ನೈ[illegible] ಸಂಘಟನೆಯತ್ತ ಬಂದಿದ್ದರು. ಇದಲ್ಲ[illegible] ಆರ್‌ಎಸ್‌ಎಸ್-ವಿಎಚ್‌ಪಿ-ಬಿಜೆಪಿ ಕೂ[illegible] ಕೇರಳದಲ್ಲಿ ತನ್ನ ಆಟ ಸಾಗದಿರುವುದರಿಂ[illegible] ಹತಾಶಗೊಂಡಿದೆ. ಈ ಹಿನ್ನೆಲೆಯಲ್ಲಿ ಅದ[illegible] ನವೆಂಬರ್ 16 ರ ಮಧ್ಯರಾತ್ರಿ ಎರಡ[illegible] ಗಂಟೆ ಹೊತ್ತಿಗೆ ನಾರಾಯಣನ್‌ರ ಮನೆ[illegible] ಬಾಗಿಲು ಒಡೆದು ನುಗ್ಗಿದ ಆರ್‌ಎಸ್‌[illegible]ಸ್‌ನವರು ಬಾಂಬುಗಳನ್ನು ಸ್ಫೋಟಿಸಿ[illegible] ನಾರಾಯಣನ್‌ರ ಪತ್ನಿ ಸರೋಜಿನಿಯವ[illegible] ತಲೆ ಛಿದ್ರವಾಗಿ ಹೋಗಿ ಸ್ಥಳದಲ್ಲೇ ಸತ್ತರ[illegible] ಇಬ್ಬರು ಮಕ್ಕಳು ಹಾಗೂ ನಾರಾಯ[illegible]ಣನ್‌ಗಾಯಗೊಂಡರು. ಒಂದು ಮಗುವಿ[illegible] ಒಂದು ಕಣ್ಣು ಹೋಗಿದೆ.

ಸದ್ದು ಕೇಳಿ ಧಾವಿಸಿ ಬಂದ ನೆರೆ[illegible]ನೆಯ ಒಬ್ಬಳು ಯುವತಿಗೂ ಒಬ್ಬ ಪೋಲಿ[illegible]ಸ್‌ಗೂ ಗಾಯಗಳಾಗಿವೆ. ಈ ಘಟನೆ[illegible] ವಿರುದ್ಧ ನ.17 ರಂದು ಜಿಲ್ಲೆಯಾದ್ಯಂತ ಪ್ರ[illegible]ಭಟನಾ ಕಾರ್ಯಕ್ರಮಗಳು ನಡೆದವು.

ಶಾಲೆಗಳಲ್ಲಿ ವಿಎಚ್‌ಪಿ[illegible] ಬ್ಯಾಡ್ಜ್ ವಿತರಣೆ!

ಮುಂಬಯಿಯ ಪಾರ್ಲೇ ತಿಲ[illegible] ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷ[illegible]ಯೊಬ್ಬರು ವಿಶ್ವ ಹಿಂದೂ ಪರಿಷತ್‌ನ ಸ್ಟಿ[illegible]ರ್‌ಗಳನ್ನು ಮಾರುತ್ತಿದ್ದುದನ್ನು ಪ್ರತಿಭ[illegible] ವಿದ್ಯಾರ್ಥಿಯೊಬ್ಬಳ ತಂದೆ ಚಂದ್ರಶೇಖ[illegible]ರನ್ನು ಆರ್‌ಎಸ್‌ಎಸ್ ಮತ್ತು ವಿಎಚ್[illegible] ಕಾರ್ಯಕರ್ತರು ಥಳಿಸಿದರು. ಮನೆಗ ನು[illegible] ಈ ಕೃತ್ಯ ನಡೆಸಲಾಯಿತು. ಕ್ಷಮಾಪಣಾ ಪ[illegible] ಬರೆದುಕೊಡುವಂತೆ ಚಂದ್ರಶೇಖರ್ ಪ[illegible] ಒತ್ತಾಯಿಸಲಾಯಿತು. ಶಾಲೆಯ ಆ[illegible]ಳಿತ ಮಂಡಳಿ ಸೂಕ್ತ ಕ್ರಮ ಕೈಗೊಳ್ಳುವ[illegible] ಮಹಾರಾಷ್ಟ್ರ ಶಿಕ್ಷಣ ಸಚಿವ ದೇಶ್‌ಮು[illegible] ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.



ಬಾಂಗ್ಲಾ ದೇಶದಲ್ಲಿ ಸರ್ವಾಧಿಕಾರಿ ಜನರಲ್ ಇರ್ಷಾದ್ ರಾಜೀನಾಮೆ ಆ ದೇಶದ ಜನತೆಯ ಪ್ರಜಾಪ್ರಭುತ್ವ ಹೋರಾಟಗಳಿಗೆ ಜಯ. ಜರ್ಮನ್ ಚುನಾವಣೆಗಳಲ್ಲಿ ಅಧ್ಯಕ್ಷ ಕೊಹ್ಲರವರು ಚಾನ್ಸಲರ್ ಆಗಿ ಚುನಾಯಿತರಾಗಿದ್ದಾರೆ. ಮಾತ್ರವಲ್ಲ ಅವರ ನಾಯಕತ್ವದ ಕೂಟ [illegible] ಗಳಿಸಿದೆ. ಪೋಲಿಷ್ ಚುನಾವಣೆಯ ಮೊದಲ ಸುತ್ತಿನ ಎಣಿಕೆಯಲ್ಲಿ ಲೆಕ್ ವಲೇಸಾ ಬಹುಮತಗಳಿಸಿಲ್ಲ. ಆದರೆ ಅತ್ಯಂತ ಹೆಚ್ಚು ಮತ ಗಳಿಸಿದ ಅಭ್ಯರ್ಥಿಯಾಗಿ ಚುನಾಯಿತರಾಗಿದ್ದಾರೆ. ಸೋವಿಯತ್ ಒಕ್ಕೂಟದಲ್ಲಿ ಅಧ್ಯಕ್ಷ ಗೋರ್ಬಚೇವ್ ಈಗ ದೇಶದಲ್ಲಿರುವ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಾಜಕೀಯ ಶಕ್ತಿಯ ಸಂಘಟನೆಯಲ್ಲಿ ಭಾರೀ ಪರಿವರ್ತನೆಗೆ ಸೋವಿಯಟ್ ಪಾರ್ಲಿಮೆಂಟ್ ಅನುಮೋದನೆ ಪಡೆದಿದ್ದಾರೆ. ಇರಾಕ್ ಪ್ರಮುಖ ಮಿಲಿಟರಿ ನೆಲೆಗಳಲ್ಲಿ 'ಮಾನವ ಕವಚ'ಗಳಾಗಿ ಬಂಧಿತರಾಗಿದ್ದ ಪಾಶ್ಚಿಮಾತ್ಯ ನಾಗರೀಕರನ್ನು ಬಿಡುಗಡೆ ಮಾಡಲು ನಿರ್ಧರಿಸಿದೆ. ಅರ್ಜೆಂಟೈನಾದಲ್ಲಿ ಒಂದು ಮಿಲಿಟರಿ ಕ್ಷಿಪ್ರ ಕ್ರಾಂತಿ ಯತ್ನ ವಿಫಲವಾಗಿದೆ. ಪ್ಯಾಲೆಸ್ತೀನರ ಮೇಲೆ ಆಕ್ರಮಿತ ಪ್ರದೇಶಗಳಲ್ಲಿ ಇಸ್ರೇಲ್ ಜಿನೀವಾ ಸಂಧಿಯ ಪ್ರಕಾರ ನಡೆದುಕೊಳ್ಳಬೇಕೆಂದು ಹೇಳಿ, ಅದರ ಮಾನವ ಹಕ್ಕುಗಳ ಉಲ್ಲಂಘನೆಯನ್ನು ವಿಶ್ವಸಂಸ್ಥೆಯ ಸಾರ್ವತ್ರಿಕ ಸಭೆ ಖಂಡಿಸಿದೆ. ಬಲ್ಗೇರಿಯಾದ ಸೋಶಲಿಸ್ಟ್ ಪ್ರಧಾನಿ ರಾಜೀನಾಮೆ ಕೊಟ್ಟಿದ್ದು, ಇನ್ನೂ ಹಂಗಾಮಿ ಸರ್ಕಾರದ ನಾಯಕತ್ವದ ಬಿಕ್ಕಟ್ಟು ಹಾಗೇ ಮುಂದುವರೆದಿದೆ.

ಬಾಂಗ್ಲಾ ದೇಶದಲ್ಲಿ ಮಿಲಿಟರಿ ಆಡಳಿತ ಕೊನೆ

ಬಾಂಗ್ಲಾದೇಶದಲ್ಲಿ ಕಳೆದ 8 ವರ್ಷಗಳಿಂದಲೂ ಹೆಚ್ಚಿಗೆ, ಮಿಲಿಟರಿ ಆಡಳಿತ ನಡೆಸಿಕೊಂಡು ಬಂದಿರುವ ಜನರಲ್ ಇರ್ಷಾದ್ ಆಡಳಿತ ಕೊನೆಗೊಂಡಿದೆ. 1982 ರಲ್ಲಿ ಅಧಿಕಾರಕ್ಕೆ ಬಂದ ಜನರಲ್ ಇರ್ಷಾದ್‌ಪ್ರಜಾಪ್ರಭುತ್ವದ , ಚುನಾವಣೆಯ ಸುಳ್ಳು ಆಶ್ವಾಸನೆಗಳನ್ನು ಕೊಡುತ್ತಲೇ ಬಂದಿದ್ದಾರೆ. ಈ ನಡುವೆ ತಮ್ಮದೇ 'ಜಾತೀಯ ಪಕ್ಷ' ವೊಂದನ್ನು ರಚಿಸಿ 1986ರಲ್ಲಿ ವಿರೋಧ ಪಕ್ಷಗಳೆಲ್ಲಾ ಬಹಿಷ್ಕರಿಸಿದರೂ ಚುನಾವಣೆ ನಡೆಸಿ, ತಮ್ಮ ಸರ್ವಾಧಿಕಾರಕ್ಕೆ 'ಪ್ರಜಾಪ್ರಭುತ್ವದ ಮುಖವಾಡ' ತೊಡಿಸಿದ್ದರು.

ಆದರೆ ಈ ವರ್ಷದ ಸಶಕ್ತ ಪ್ರಬಲ ಚಳುವಳಿಯ ಮುಂದೆ ಅವರ ಈ ಕುತಂತ್ರ ಈ ಬಾರಿ ಫಲಿಸಲ್ಲ. ಅವರು ರಾಜೀನಾಮೆ ನೀಡಬೇಕಾಯಿತು. ಅವರು ವಿಧಿಸಿದ ತುರ್ತು ಪರಿಸ್ಥಿತಿ ಉಲ್ಲಂಘಿಸಿ, ಇರ್ಷಾದ್ ರಾಜೀನಾಮೆ ನೀಡಿದಾಗ ಜನರು ಬೀದಿಗಳಲ್ಲಿ ಕುಣಿದಾಡಿದರು. ಕೊನೆಗಳಿಗೆಯಲ್ಲಿ ಇರ್ಷಾದ್ ಅಧ್ಯಕ್ಷ ಪದವಿ ಉಳಿಸಿಕೊಂಡು ಚುನಾವಣೆ ನಡೆಸುವ ನಾಟಕಕ್ಕೆ ಯಾರೂ ಪ್ರೇಕ್ಷಕರಿಲ್ಲ. ಹಂಗಾಮಿ ಸರಕಾರ ಯಾರು ನಡೆಸುತ್ತಾರೆ ಎಂಬ ಪ್ರಶ್ನೆಗೂ ವಿರೋಧ ಪಕ್ಷಗಳು, ಚಳುವಳಿ ಕೂಡಲೇ ಪರಿಹಾರ ಕಂಡುಹಿಡಿಯಿತು. ಪ್ರಸಕ್ತ ಮುಖ್ಯ ನ್ಯಾಯಾಧೀಶ ಶಹಾಬುದ್ದೀನ್ ಅಹ್ಮದ್ ಅವರನ್ನು ಉಪಾಧ್ಯಕ್ಷ ಮತ್ತು ಆಮೇಲೆ ಹಂಗಾಮಿ ಅಧ್ಯಕ್ಷರಾಗಿ ಅವರು ಅಧಿಕಾರ ವಹಿಸಿಕೊಂಡರು.

ಈ ಸೂಕ್ಷ್ಮ ಸನ್ನಿವೇಶದಲ್ಲಿ ಅವಾಮಿ, ನ್ಯಾಷನಲ್ ಪಾರ್ಟಿಗಳ ನಾಯಕತ್ವದ ವಿರೋಧ ಪಕ್ಷಗಳ ರಂಗಗಳು ಮತ್ತು ಎಡ ಪಕ್ಷಗಳ ರಂಗಗಳು ಹಾಗೂ ಜನತೆ ಅತ್ಯಂತ ಜವಾಬ್ದಾರಿಯುತ, ಜಾಗರೂಕತೆ ವಹಿಸಿತು. ಚಳುವಳಿಯಲ್ಲಿ ಢಾಕಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಶಿಕ್ಷಕರು ಮತ್ತು ಕಾರ್ಮಿಕರು ದೊಡ್ಡ ಪಾತ್ರ ವಹಿಸಿದರು. ಸರಕಾರವನ್ನು ಮಣಿಸಲು ಬಹಿಷ್ಕಾರ, ಸಾರ್ವತ್ರಿಕ ಮುಷ್ಕರದ ಆಯುಧ ಉಪಯೋಗಿಸಲಾಯಿತು. ಜನರ ಜವಾಬ್ದಾರಿ, ಜಾಗರೂಕತೆ ಎಷ್ಟರವರೆಗೆ ಇತ್ತೆಂದರೆ ಜನರಲ್ ಇರ್ಷಾದ್. ದೇಶ ಬಿಟ್ಟು ಓಡಿ ಹೋಗುವ ಸುದ್ದಿ ತಿಳಿದು ಢಾಕಾ ವಿಮಾನ ನಿಲ್ದಾಣಕ್ಕೆ ಭಾರಿಸಂಖ್ಯೆಯಲ್ಲಿ ಲಗ್ಗೆ ಹಾಕಿದ್ದರು. ಜನತೆಯ ಕೋಪ ನೋಡಿ ಸೈನ್ಯ ಸಹ ಇರ್ಷಾದ್ ಜತೆ ಸಹಕರಿಸಲಿಲ್ಲ. ಇರ್ಷಾದ್ ರಾಜೀನಾಮೆ ನಂತರ ಆತನ ಜಾತೀಯ ಪಕ್ಷದ ಬೆಂಬಲಿಗರು ಸರಕಾರಿ ಮತ್ತು ಇತರ ಬಾಲಬಡುಕರು ಜನ-ವಿರೋಧಿಗಳು ಜನತೆಯ ಕೋಪ ಎದುರಿಸಬೇಕಾಯಿತಾದರೂ,ಪರಿಸ್ಥಿತಿ ಕೈಮೀರಿ ಹೋಗಿಲ್ಲ.

ಹೊಸ ಹಂಗಾಮಿ ಅಧ್ಯಕ್ಷ ಪಾರ್ಲಿಮೆಂಟನ್ನು ವಿಸರ್ಜಿಸಿ, 90 ದಿನಗಳೊಳಗೆ ಚುನಾವಣೆ ನಡೆಸುವುದಕ್ಕೆ ಕ್ರಮ ಈಗಾಗಲೇ ಕೈಗೊಂಡಿದ್ದಾರೆ. ಜನರಲ್ ಇರ್ಷಾದ್‌ರನ್ನು ತಮ್ಮ ನಿವಾಸದಲ್ಲಿ ಗೃಹ ಬಂಧನದಲ್ಲಿದ್ದು, ಅವರ ಪ್ರಮುಖ ಮಂತ್ರಿಗಳು, ಅಧಿಕಾರಿಗಳು ಬೆಂಬಲಿಗರು ಭೂಗತರಾಗಿದ್ದಾರೆ. ಜನರಲ್ ಇರ್ಷಾದ್‌ರನ್ನು ವಿಚಾರಣೆಗೊಳಪಡಿಸಬೇಕೆಂದು ಎಲ್ಲಾ ವಿರೋಧ ಪಕ್ಷಗಳು ಒತ್ತಾಯಿಸಿವೆ.

ಇದು ಬಾಂಗ್ಲಾ ದೇಶದ ಜನತೆಯ ವಿಜಯ, ಶೇಕ್ ಮುಜಿಬುರ್ ರೆಹಮಾನ್‌ರ ಕೊಲೆಯಿಂದ ಆರಂಭವಾದ ಅಲ್ಲೋಲಕಲ್ಲೋಲಗಳಿಂದಾಗಿ ತಮ್ಮ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಹೆಣಗುತ್ತಿರುವ ಜನತೆ ಕೊನೆಗೂ ಅದನ್ನು ಸಾಧಿಸುವ ಹತ್ತಿರ ಬಂದಿದ್ದಾರೆ. ಈ ಪರೀಕ್ಷಾಕಾಲದಲ್ಲಿ ಜನತೆ ಸಾಮ್ರಾಜ್ಯಶಾಹಿಯ ಕುತಂತ್ರಗಳು, ಸೈನ್ಯ ಮತ್ತು ಮಾಜಿ ಸರ್ವಾಧಿಕಾರದ ಮಸಲತ್ತುಗಳ ಬಗ್ಗೆ ಜನತೆ ಎಚ್ಚರಿಕೆಯಿಂದ ಇರಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಬಾಂಗ್ಲಾ ದೇಶದ ಜನತೆಯನ್ನು ಅಭಿನಂದಿಸುತ್ತಾ ಹೇಳಿದೆ.

ಸಾಮ್ರಾಜ್ಯಶಾಹಿ ಬಾಲಬಡುಕ ಸರ್ವಾಧಿಕಾರಿ ಆಡಳಿತ ಜನತೆಯ ಕೋಪಕ್ಕೆ ಬಲಿಯಾದ ಸಂದರ್ಭದಲ್ಲಿ ಹಿಂದೆ, ಸರಿಯಾದ ಬದಲಿ ಇಲ್ಲದೆ ಇದ್ದಾಗ ಅಥವಾ ಇತರ ನ್ಯೂನತೆಗಳನ್ನು ಬಳಸಿಕೊಂಡು ಜನತೆಯ ಶತ್ರುಗಳನ್ನು ಪುನಃಅಧಿಕಾರಕ್ಕೆ ತರಲು ಸಾಧ್ಯವಾಗಿದೆ. ಅಥವಾ ಅಂತಹ ಬದಲಿ ಸರಕಾರಗಳನ್ನು ಬಲಹೀನ ಗೊಳಿಸುವಲ್ಲಿ ಸಫಲವಾಗಿದೆ. ಮೊದಲನೆಯದಕ್ಕೆ ಪಾಕಿಸ್ತಾನ ಉದಾಹರಣೆಯಾದರೆ, ಎರಡನೆಯದಕ್ಕೆ ಫಿಲಿಪ್ಪೀನ್ಸ್ ಉದಾಹರಣೆ.

ಸೋವಿಯತ್ ರಾಜಕೀಯ ಸಂಘಟನೆ ಪ್ರಮುಖ ಬದಲಾವಣೆಗಳು

ಆರ್ಥಿಕ, ಸಮಾಜಿಕ ಮತ್ತು ರಾಜಕೀಯ ಸ್ಥಿತಿ ಸ್ಥಿರೀಕರಿಸಲು, ಸಾರ್ವತ್ರಿಕ ವ್ಯವಸ್ಥೆ ಮತ್ತು ಶಿಸ್ತು ದೇಶದ ತುಂಬಾ ಭದ್ರಪಡಿಸಲು, ದಿನೇ ದಿನೇ ಕೆಡುತ್ತಿರುವ ರಾಷ್ಟ್ರೀಯತೆ--ಜನಾಂಗಗಳ ಸಮಸ್ಯೆಯನ್ನು ಎದುರಿಸಲು ಸೋವಿಯತ್ ಅಧ್ಯಕ್ಷ ಗೋರ್ಬಚೇವ್ ರಾಜಕೀಯ ಶಕ್ತಿ ಸಂಘಟನೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಪಾರ್ಲಿಮೆಂಟಿನ ಮುಂದಿಟ್ಟಿದ್ದಾರೆ. ಇದನ್ನು ಭಾರಿ ಬಹುಮತದಿಂದ ಪಾರ್ಲಿಮೆಂಟು ಅಂಗೀಕರಿಸಿತು(366 ರಲ್ಲಿ 316 ಪರ ಮತಗಳು ಬಿದ್ದವು.).

ಇವುಗಳಲ್ಲಿ ಕೆಲವು ಪ್ರಮುಖವಾದವು ಇಂತಿವೆ. ಅಧ್ಯಕ್ಷೀಯ ಮಂಡಳಿಯ ಅಧಿಕಾರಗಳನ್ನು ಒಕ್ಕೂಟ ಮಂಡಳಿಗೆ ಕೊಡಲಾಗುವುದು. ಈಗ ಒಕ್ಕೂಟ ಮಂಡಳಿ ಸಲಹಾ ಮಂಡಳಿಯಾಗಿದ್ದು, ಅಧ್ಯಕ್ಷೀಯ ಮಂಡಳಿ ನಿಜವಾಗಿಯೂ ನಿರ್ಧಾರಕ ಸಂಸ್ಥೆಯಾಗಿದೆ. ಇದರಲ್ಲಿ ಎಲ್ಲಾ ಅಂಗ ಗಣತಂತ್ರಗಳ ಪ್ರತಿನಿಧಿಗಳು, ವಿಶೇಷ ತಜ್ಞರು ಇರುತ್ತಾರೆ.ಇದರಿಂದ ಗಣತಂತ್ರಗಳ ಪ್ರತಿನಿಧಿಗಳು ಸಲಹೆ ನೀಡುವುದು ಮಾತ್ರವಲ್ಲದೆ ದೇಶದ ದೈನಂದಿನ ನಿರ್ಧಾರಗಳಲ್ಲಿ ಪಾಲುಗೊಂಡಂತಾಗುತ್ತದೆ. ಅಧ್ಯಕ್ಷೀಯ ಮಂಡಳಿಯ ಸ್ಥಾನವನ್ನು ಭದ್ರತಾ ಮಂಡಳಿ ತೆಗೆದುಕೊಳ್ಳುತ್ತದೆ.

ಇಡೀ ಕಾರ್ಯಾಂಗ ನೇರವಾಗಿ ಅಧ್ಯಕ್ಷರ ನಿಯಂತ್ರಣಕ್ಕೆ ಬರುತ್ತದೆ. ಪ್ರಧಾನ ಮಂತ್ರಿ ಮತ್ತು ಮಂತ್ರಿ ಮಂಡಲವನ್ನು ಅಧ್ಯಕ್ಷರು ನೇಮಿಸುತ್ತಾರೆ. ಇದನ್ನು ಪಾರ್ಲಿಮೆಂಟು ಅನುಮೋದಿಸಬೇಕು. ಆದರೆ ಮಂತ್ರಿ ಮಂಡಲ ನೇರವಾಗಿ ಪಾರ್ಲಿಮೆಂಟಿಗೆ ಜವಾಬ್ದಾರರಿರುವ ಬದಲು ಅಧ್ಯಕ್ಷರಿಗೆ ಜವಾಬ್ದಾರ ಆಗಿರುತ್ತದೆ. ಒಬ್ಬ ಉಪಾಧ್ಯಕ್ಷರೂ ಇರುತ್ತಾರೆ.

ಎಲ್ಲಾ ಕಾನೂನುಪಾಲಕ ಸಂಘಟನೆಗಳ ಎಲ್ಲಾ ಚಟುವಟಿಕೆಗಳನ್ನು ಸಂಯೋಜಿಸುವ ವಿಶೇಷ ಮಂಡಳಿಯನ್ನು ನಿರ್ಮಿಸಲಾಗುವುದು.

ಈ ಕ್ರಮಗಳಿಗೆ ಗೋರ್ಬಚೇವ್‌ರಿಗೆ ಸಾಮಾನ್ಯವಾಗಿ ಅವರ ವಿರೋಧಿಗಳೂ ಬೆಂಬಲ ನೀಡಿದ್ದಾರೆ. ಈ ಕ್ರಮಗಳಿಂದ ಒಟ್ಟಾರೆ ಪರಿಸ್ಥಿತಿ ದೊಡ್ಡ ಪ್ರಮಾಣದಲ್ಲಿ ಉತ್ತಮವಾಗಬಹುದೆಂದು ಹಲವು ಪಾರ್ಲಿಮೆಂಟು ಸದಸ್ಯರೂ, ಜನತೆ ಬಯಸಿದ್ದಾರೆ.

ಪಶ್ಚಿಮ ಏಶ್ಯಾ ಸಮ್ಮೇಳನ ಸಂಭವ?

ಇರಾಕ್ ಮೇಲೆ ಬಲಪ್ರಯೋಗ ಮಾಡಲು ಅಧಿಕಾರ ನೀಡುವ ನಿರ್ಧಾರ ಭದ್ರತಾ ಸಮಿತಿ ಕೈಗೆತ್ತಿಕೊಳ್ಳುವಾಗ, ಇಸ್ರೇಲ್--ಪ್ಯಾಲೆಸ್ತೀನ್ ಬಗ್ಗೆ ನಿರ್ಣಯವೊಂದನ್ನು ಮುಂದೂಡಲಾಗಿತ್ತು. ಆ ರೀತಿ ನಡೆಯದಂತೆ ಮಾಡಲು ಅಮೇರಿಕಾ ಶತ ಪ್ರಯತ್ನ ನಡೆಸಿತ್ತು. ಆದರೆ ಈ ಸಮಸ್ಯೆ ಭದ್ರತಾ ಸಮಿತಿ ಈಗ ಗಮನಕ್ಕೆ ತೆಗೆದುಕೊಂಡಿದೆ. ಇಸ್ರೇಲ್ ಆಕ್ರಮಿತ ಆರಬ್ ಪ್ರದೇಶಗಳಲ್ಲಿ, ಪ್ಯಾಲೆಸ್ತೀನ್ನರ ಭದ್ರತೆ ನೋಡಿಕೊಳ್ಳಲು ವಿಶ್ವ ಸಂಸ್ಥೆ ಒಬ್ಬ ಪ್ರತಿನಿಧಿ ಕಳಿಸಬೇಕೆಂಬ ನಿರ್ಣಯವನ್ನು ಕ್ಯೂಬಾ-ಯೆಮೆನ್ ಭದ್ರತಾ ಸಮಿತಿಯಲ್ಲಿ ಮಂಡಿಸಿವೆ. ಇನ್ನೂ ಇಸ್ರೇಲಿನ ಕಪಿಮುಷ್ಟಿಯಲ್ಲಿರುವ ಅಮೇರಿಕಾ ಈ ನಿರ್ಣಯದ ವಿರುದ್ಧ ವೀಟೋ ಉಪಯೋಗಿಸುವುದು ಎಂಬ ನಿರೀಕ್ಷೆಯಿಂದಾಗಿ, ಇದರ ಬಗ್ಗೆ ನಿರ್ಣಯ ಮುಂದೆ ಹಾಕಲಾಗಿದೆ, ಆದರೆ ಯಾವುದಾದರೂ ರೂಪದಲ್ಲಿ ಪ್ಯಾಲೆಸ್ತೀನ್ ಸಮಸ್ಯೆ ಬಗ್ಗೆ ವಿಶ್ವ ಸಂಸ್ಥೆ ಗಮನ ಹರಿಯುವಂತೆ ಮಾಡಲು, ಮೂರನೆಯ ಜಗತ್ತಿನ ದೇಶಗಳು ಕಟಿಬದ್ಧವಾಗಿವೆ. ಈಗಿನ ಕೊಲ್ಲಿಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅಮೇರಿಕ ಪ್ಯಾಲೆಸ್ತೀನ್ ಸಮಸ್ಯೆಯನ್ನು ಪೂರ್ತಿ ನಿರ್ಲಕ್ಷಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪ್ಯಾಲೆಸ್ತೀನ್ ಸಮಸ್ಯೆ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನವೊಂದನ್ನು ಸಂಘಟಿಸಬೇಕೆಂದು ನಿರ್ಣಯಕ್ಕೆ ಅಮೇರಿಕ ಸೇರಿದಂತೆ ವ್ಯಾಪಕ ಬೆಂಬಲ ಕಂಡು ಬಂದಿದೆ.

ಈ ನಡುವೆ ಇರಾಕ್-ಅಮೇರಿಕ ನಡುವೆ ನೇರ ಮಾತುಕತೆಯ ಸಾಧ್ಯತೆ ಜಾಸ್ತಿ ಆಗಿದ್ದು, ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್ ಸ್ವಲ್ಪವಾದರೂ ನೀತಿ ಬದಲಾವಣೆ ಮಾಡಲು ಸಿದ್ಧವಾಗಿರುವ ಲಕ್ಷಣಗಳಿವೆ. ಇರಾಕ್ ಏಕಪಕ್ಷೀಯವಾಗಿ 'ಮಾನವ ಕವಚ'ಗಳಾಗಿ ಉಪಯೋಗಿಸಲ್ಪಡುತ್ತಿದ್ದ ಪಾಶ್ಚಿಮಾತ್ಯ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ನಿರ್ಧಾರವನ್ನು ಇರಾಕ್ ಕೈಗೊಂಡಿದೆ.

ಪೂರ್ವ ಯುರೋಪಿನ ಕಮ್ಯುನಿಸ್ಟ್ ಪಕ್ಷಗಳ ಭೇಟಿ

ಪೂರ್ವ ಯುರೋಪಿನ ಕಮ್ಯುನಿಸ್ಟ್ ಪಕ್ಷಗಳ ಸಮ್ಮೇಳನವೊಂದು ನವೆಂಬರ್ 14,15 ರಂದು ಮಾಸ್ಕೋದಲ್ಲಿನೆರವೇರಿತು. ಪೂರ್ವ ಯುರೋಪಿನ ಅಲ್ಲೋಲಕಲ್ಲೋಲದ ರಾಜಕೀಯ ಬೆಳವಣಿಗೆಳ ನಂತರ ಭೇಟಿ ಮಾಡುತ್ತಿರುವುದು ಇದೆ ಮೊದಲು. ಸೋವಿಯತ್ ಪಕ್ಷ ಸೇರಿದಂತೆ ಬಲ್ಗೇರಿಯಾ, ಹಂಗೇರಿ, ಜರ್ಮನ್, ಜೆಕ್ ಪಕ್ಷಗಳು ಭಾಗವಹಿಸಿದ್ದವು.

ಸಮ್ಮೇಳನದಲ್ಲಿ ಕಳೆದ ವರ್ಷದ ವಿದ್ಯಮಾನಗಳ ಸಮೀಕ್ಷೆ ಮಾಡಲಾಯಿತು. ಅಲ್ಲದೆ ಬದಲಾದ ಪರಿಸ್ಥಿತಿಯಲ್ಲಿ ಈ ಎಡ ಶಕ್ತಿಗಳು ಹೇಗೆ ಎದುರಿಸಬಹುದು, ಪರಸ್ಪರ ಸಹಕರಿಸಬಹುದು ಎಂದು ಚರ್ಚಿಸಬಹುದು. ಕಳೆದ ವರ್ಷದ ಘಟನೆಗಳು ಸಮಾಜವಾದಕ್ಕೆ ಕಳಂಕವಲ್ಲ, ಅದರ ಆಚರಣೆಯ ಕೆಲವು ಅಂಶಗಳು ತಂದಿದ್ದುವುದು ಕಳಂಕ ಎಂದು ಅಭಿಪ್ರಾಯ ಪಡಲಾಯಿತು.ಈ ದೇಶಗಳಲ್ಲಿ ಕೆಲವು ಸಕಾರಾತ್ಮಕ ಬೆಳವಣಿಗೆಗಳು ಆಗಿದ್ದರೂ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಲ್ಪಸಂಖ್ಯಾತ ವಿರೋಧ ಪಕ್ಷಗಳನ್ನು ವ್ಯವಸ್ಥಿತವಾಗಿ ಬೆದರಿಸುವ ಬೆಳವಣಿಗೆ ಕಂಡುಬಂದಿದೆ.

ಇಂತಹ ಸನ್ನಿವೇಶದಲ್ಲಿ ಪಕ್ಷದ ರಾಜಕೀಯ ನೆಲೆ ಭದ್ರ ಪಡಿಸುವ ಉದ್ದೇಶದಿಂದ ಎಲ್ಲಾ ರಾಜಕೀಯ ಶಕ್ತಿಗಳೊಂದಿಗೆ ಸಂವಾದ ನಡೆಸಬೇಕು ಎಂದೂ ತೀರ್ಮಾನಿಸಲಾಯಿತು.

ಪುಟ 4 ರಿಂದ

ಪರಂಗಿಪೇಟೆ: ಕೋಮು ಸೌಹಾರ್ದತಾ ಸಭೆಯಲ್ಲಿ ಕೋಮುವಾದೀ ಗೂಂಡಾಗಳ ದಾಂದಲೆ


ಡಿಸೆಂಬರ್ 1 ರಂದು ಬಂಟ್ವಾಳ ತಾಲ್ಲೂಕಿನ ಪರಂಗಿ ಪೇಟೆಯಲ್ಲಿ ಕೋಮು ಸೌಹಾರ್ದತಾ ಸಭೆ ನಡೆಯುತ್ತಿದ್ದಾಗ ಬಿ.ಜೆ.ಪಿ., ವಿಶ್ವ ಹಿಂದೂ ಪರಿಷತ್ ಪರ ಗೂಂಡಾಗಳು ಪೇಟೆಕೆ ಬಳಿ ಬಂದು ಸ್ಟೇಜ್ ಮುರಿಯಲು, ಮೈಕ್ ಕಿತ್ತೆಸೆಯಲು ಪ್ರಯತ್ನಿಸಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಎಸ್.ಆರ್.-[illegible] ವಿರೋಧವಾಗಿ ಕೋಮುವಾದಿ [illegible] ಬಗ್ಗೆ ಬಯಲು ಮಾಡುತ್ತಿದ್ದಂತೆಯೇ ಪ್ರಚೋದಿತರಾದ ಗೂಂಡಾಗಳು ಘೋಷಣೆ ಕೂಗುತ್ತಾ ವೇದಿಕೆಯತ್ತ ನುಗ್ಗಲಾರಂಭಿಸಿದರು. ಮಧ್ಯ ಪ್ರವೇಶಿಸಿದ ಪೋಲೀಸರು [illegible] ಚದುರಿಸಿದರು. ಗೂಂಡಾಗಿರಿಯಿಂದ [illegible] ನಾಗರೀಕರು... ಸಭೆ ನಡೆಯಬೇಕೆಂದು ಪೂರ್ಣ ರಕ್ಷಣೆ ವರ್ತುಲ ರಚಿಸಿ ಸಭೆ ಮತ್ತೆ ಮುಂದುವರಿಯಿತು. ಘಟನೆ ಬಗ್ಗೆ ತಿಳಿದ ಪೊಲೀಸ್ ಇಲಾಖೆಯವರು ಅಪಾರ ಸಂಖ್ಯೆಯಲ್ಲಿ ಮಂಗಳೂರಿನಿಂದ ಪೊಲೀಸರನ್ನು ತರಿಸಿ ಜಮಾಯಿಸಿದರು.

ಸ್ಥಳೀಯ ಡಿ.ವೈ.ಎಫ್.ಐ, ಯುವಜನತಾದಳ, ಡಿ.ಎಸ್.ಎಸ್. ಸಂಘಟನೆಗಳು ಸಂಘಟಿಸಿದ್ದ ಸಭೆಯಲ್ಲಿ ಜನತಾದಳದ ಮುಂದಾಳು ಹಮೀದ್ ಕಂದಕ್, ಜಿಲ್ಲಾ ಪರಿಷತ್ ಸದಸ್ಯ ಜಯರಾಮ್ ನಾಯಕ್, ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಆರ್.ಜಯಕುಮಾರ್ ಹಾಗೂ ಇತರರು ಮಾತನಾಡಿ ಕೋಮು ಸೌಹಾರ್ದತೆಗಾಗಿ ದುಡಿಯಲು ಕರೆ ನೀಡಿದರು.

ಇತ್ತೀಚೆಗೆ ದ.ಕ. ಜಿಲ್ಲೆಯಲ್ಲಿ ಖಾಸಗಿ ಬಸ್ ಮಾಲೀಕರು ಸರ್ವೀಸ್ ಪ್ರಯಾಣ ದರವನ್ನು ಏಕಪಕ್ಷೀಯವಾಗಿ ಏರಿಸಿದಾಗ ಇದರ ವಿರುದ್ಧ ಹೋರಾಟ ರೂಪಿಸಲು ಡಿವೈಎಫ್‌ಐ ಜಿಲ್ಲಾ ಸಮಿತಿ ಕರೆ ನೀಡಿತು. ಏರಿಸಲಾದ ಪ್ರಯಾಣ ದರವನ್ನು ಇಳಿಸದಿದ್ದಲ್ಲಿ ನಿರ್ಣಾಯಕ ಹೋರಾಟ ರೂಪಿಸುವುದಾಗಿ ಮಾಲಿಕರಿಗೆ ಅಂತಿಮ ಎಚ್ಚರಿಕೆ ನೀಡಿ ಬಸ್ ತಡೆ ಕಾರ್ಯಕ್ರಮವನ್ನು ರೂಪಿಸಿತು. ಡಿವೈಎಫ್‌ಐ ನೇತೃತ್ವದಲ್ಲಿ ಗ್ರಾಮಸ್ಥರು ಒಂದಾಗಿ ಪ್ರತಿರೋಧಿಸಿದರು. ಮಧ್ಯ ಪ್ರವೇಶಿಸಿದ ಮಂಡಲ ಪಂಚಾಯತ್ ಹಾಗೂ ಪೋಲೀಸ್ ಇಲಾಖೆಗಳು ಪ್ರಶ್ನೆ ಬಗೆಹರಿಸಲು ಮಾಲಿಕರನ್ನು ಮಾತುಕತೆಗೆ ಕರೆಸುವುದಾಗಿ ಭರವಸೆ ನೀಡಿದ ಕಾರಣ ಬಸ್ ತಡೆ ಕಾರ್ಯಕ್ರಮವನ್ನು ಒಂದು ಗಂಟೆ ಬಳಿಕ ವಾಪಸ್ಸು ತೆಗೆಯಲಾಯಿತು. ಒಂದು ವಾರದ ಬಳಿಕ ನಡೆದ ಮಾತುಕತೆಯಲ್ಲಿ ಡಿವೈಎಫ್‌ಐ ಮುಂದಾಳುಗಳು, ಮಂಡಲ ಪ್ರಮುಖರು, ಪೋಲೀಸ್ ಅಧಿಕಾರಿಗಳು, ಬಸ್ ಮಾಲಿಕರು ಹಾಜರಿದ್ದು ಸರ್ವಸಮ್ಮತ ದರ ಇಳಿಕೆಯ ಒಪ್ಪಂದಕ್ಕೆ ಸಹಿ ಮಾಡಲಾಯಿತು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಆರ್. ಜಯಕುಮಾರ್ ಸೇರಿದಂತೆ [illegible] ದವು ಘಟಕದ ಮುಂದಾಳುಗಳಾದ [illegible] ಆಚಾರ್, ಹಸನಬ್ಬ, ಮೊದಲಾದವರು ಮಾತುಕತೆಯಲ್ಲಿ ಪಾಲ್ಗೊಂಡಿದ್ದರು.

ಬಸ್ರೂರು:

ಇಲ್ಲಿನ ಖಾಸಗಿ ಬಸ್ ಮಾಲಿಕರು ಏಕಪಕ್ಷೀಯವಾಗಿ ಏರಿಸಿದ ಕ್ರಮವನ್ನು ಪ್ರತಿಭಟಿಸಿದ ಡಿವೈಎಫ್‌ಐ ಸಂಘಟನೆಯು ಇತರೇ ಸಂಘಟನೆಗಳೊಂದಿಗೆ ಜಂಟಿ ಹೋರಾಟವನ್ನು ರೂಪಿಸಿ ಮಾಲಿಕರು ಒಪ್ಪಂದಕ್ಕೆ ಬರುವಂತೆ ಮಾಡಿದರು. ಮಾತುಕತೆಯಲ್ಲಿ ಡಿವೈಎಫ್‌ಐ ಕುಂದಾಪುರ ತಾಲೂಕು ಅಧ್ಯಕ್ಷರಾದ ವೆಂಕಟೇಶ್ ಕೋಣಿ ಹಾಗೂ ಇತರರು ಭಾಗವಹಿಸಿದ್ದರು.



ಮಾನವ ಸರಪಳಿ

ದಾಂಡೇಲಿ

ಕೋಮು ಸೌಹಾರ್ದತೆಯನ್ನು ಕಾಪಾಡಲು ಮೈತ್ರಿ ಬಂಧನ ಕಾರ್ಯಕ್ರಮದ ಅಂಗವಾಗಿ ದಾಂಡೇಲಿಯಲ್ಲಿ ಮಾನವ ಸರಪಳಿಯನ್ನು ಕಿತ್ತೂರು ಚೆನ್ನಮ್ಮ ಸರ್ಕಲ್ಲಿನಲ್ಲಿ ರಚಿಸಲಾಯಿತು. ಈ ಕಾರ್ಯಕ್ರಮದಲ್ಲಿ ಗಣ್ಯ ವ್ಯಕ್ತಿಗಳು, ಬುದ್ಧಿಜೀವಿಗಳು, ಕಾಲೇಜಿನ ಅಧ್ಯಾಪಕರು, ಕಾರ್ಮಿಕರು ಹಾಗೂ ರಿಕ್ಷಾ ಚಾಲಕರು ಭಾಗವಹಿಸಿದ್ದರು. ಕೋಮು ಸೌಹಾರ್ದತೆಯ ಕಾರ್ಯಕ್ರಮಕ್ಕೆ ದಾಂಡೇಲಿಯ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಒಕ್ಕೂಟವು ತುಂಬಾ ಉತ್ಸುಕತೆಯಿಂದ ಬೆಂಬಲ ನೀಡಿದ್ದಾರೆ. ನಂತರ ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ.ಬಿ.ಎಸ್.-[illegible] ಹಾಗೂ ಶ್ರೀ ನಜೀರ್ ಅಹ್ಮದ್ [illegible] ಕೋಮು ಸೌಹಾರ್ದತೆಯನ್ನು ರಕ್ಷಿಸುವ ಕುರಿತು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

K R N M/ BGW - 293 MAG (2) PRB DECR 319 - 78/79

ಮಾನವ ಸರಪಳಿ

ಪುಟ 1 ರಿಂದ

ಹಲವು ಕಾರ್ಯಕ್ರಮದಲ್ಲಿ ಭಾಗವಹಿಸಿ ಬಾರಿ ಯಶಸ್ವಿಯಾಗಿ ನಡೆಸಿದ್ದಾರೆ.

ಕೆಜಿಎಫ್‌ನ ಶಾಸಕರಾದ ಶ್ರೀ ಎಂ.ಭಕ್ತವತ್ಸಲಂ, ಮಾಜಿ ಶಾಸಕರಾದ ಶ್ರೀ ಸಿ. ಎಂ.ಆರುಮುಗಂ ಹಾಗೂ ಕೆಜಿಎಫ್‌ನ ಇತರ ಮುಖಂಡರುಗಳು ಸಹಕಾರ ನೀಡಿದರು.

ಹಾಸನ

ಹಾಸನ ನಗರದಲ್ಲಿ ಸಂಜೆ 5.30ಕ್ಕೆ ಮಾನವ ಸರಪಳಿ ಕಾಯಕ್ರಮವನ್ನು ನಡೆಸಲಾಯಿತು. ನಗರದ ಬಸ್ ನಿಲ್ದಾಣದ ರಸ್ತೆಯಲ್ಲಿ ಕೋಮು ಸೌಹಾರ್ದತೆಯ ಘೋಷಣೆಗಳನ್ನು ಕೂಗಿದ ನೂರಾರು ಜನರು ಮಾನವ ಸರಪಳಿಯನ್ನು ನಿರ್ಮಿಸಿದರು.

ಈ ಕಾರ್ಯಕ್ರಮದಲ್ಲಿ ಸಿಪಿಐ, ದಲಿತ ಸಂಘರ್ಷ ಸಮಿತಿ, ಮಾನವ ಹಕ್ಕು ರಕ್ಷಣಾ ಸಮಿತಿ, ಜನತಾದಳ, ಡಿವೈಎಫ್ಐ, ಎಸ್ಎಫ್ಐ, ಸಿಐಟಿಯುನ ಕಾರ್ಯಕರ್ತರು ಭಾಗವಹಿಸಿದ್ದರು. ನೂರಾರು ಮಹಿಳೆಯರು ಭಾಗವಹಿಸಿದ್ದುದು ವಿಶೇಷವಾಗಿತ್ತು.

ಇದೇ ಮೊದಲ ಬಾರಿಗೆ ಹಾಸನ ನಗರದಲ್ಲಿ ಮಾನವ ಸರಪಳಿ ಕಾರ್ಯಕ್ರಮ ನಡೆಸಿದ ಹೆಗ್ಗಳಿಕೆ ಸಿಪಿಐ(ಎಂ)ನದಾಗಿದೆ. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ವಿ.ಸುಕುಮಾರ್ ಮಾತನಾಡಿದರು.

ಮೂಡಿಗೆರೆ

ಮೂಡಿಗೆರೆ ತಾಲೂಕಿನ ಕಳಸದ ಮಹಿಳಾ ಮಂಡಲಿಯ ಸಭಾಂಗಣದಲ್ಲಿ ಕೋಮುಸೌಹಾರ್ದತೆಯ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು. ಶ್ರೀ ಹೆಚ್.ಜ್ವಾಲನಯ್ಯ, ಅಬ್ದುಲ್ ಶುಕೂರ್, ಶ್ರೀ ದಾಮೋದರ ಗೌಡರು ಹಾಗೂ ಕೆ.ಸುಕುಮಾರ್‌ರವರು ಮಾತನಾಡಿ ಕೋಮು ಸಾಮರಸ್ಯವನ್ನು ಕಾಪಾಡಿಕೊಂಡು ಬರಲು ಎಲ್ಲಾ ವಿಭಾಗದ ಜನರಿಗೂ ಕರೆ ಕೊಟ್ಟರು .ಕೊನೆಯಲ್ಲಿ ಅಬ್ದುಲ್ಲಾ ಕರಿಂ ವಂದನಾರ್ಪಣೆ ಮಾಡಿದರು.

ಬಳ್ಳಾರಿ

ಬಳ್ಳಾರಿ ನಗರದಲ್ಲಿ ಬೃಹತ್ ಕೋಮು ಸೌಹಾರ್ದತಾ ಮಾನವ ಸರಪಳಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಜನತಾದಳ, ಸಿಪಿಐ(ಎಂ) ಹಾಗೂ ಸಿಪಿಐ ಪಕ್ಷಗಳು ಹಾಗೂ ನಗರದ ವಿವಿಧ ಕಾರ್ಮಿಕ ಸಂಘಗಳು, ವಿದ್ಯಾರ್ಥಿ ಸಂಘಗಳಿಂದ ಸುಮಾರು 400ಕ್ಕೂ ಹೆಚ್ಚು ಜನರು ಭಾಗವಹಿಸಿ, ರಾಷ್ಟ್ರೀಯ ಸಮಗ್ರತೆ, ಐಕ್ಯತೆಯನ್ನು ಎತ್ತಿ ಹಿಡಿಯುವ, ಕೋಮು ಸೌಹಾರ್ದತೆಯನ್ನು ಕಾಪಾಡುವ ಪ್ರತಿಜ್ಞೆಯನ್ನು ಕೈಗೊಂಡರು. ಅತ್ಯಂತ ಜನಸಂದಣಿಯ ಕಿಕ್ಕಿರಿದ ವಾಹನಗಳಿಂದ ಕೂಡಿದ ರಾಯಲ್ ಸರ್ಕಲ್ ಸುತ್ತಲೂ ಸುತ್ತುವರಿದ ಕಾರ್ಯಕ್ರಮವನ್ನು ನಗರದ ಮೂರು ಸಾವಿರಕ್ಕೂ ಹೆಚ್ಚು ಜನ ಸಾರ್ವಜನಿಕರು ವೀಕ್ಷಿಸಿದರು.

ಸಿಪಿಐ(ಎಂ) ಪಕ್ಷದ ಎಸ್. ಪ್ರಸನ್ನ ಕುಮಾರ್ ಹಾಗೂ ಜನತಾದಳದ ಎಸ್. ತಿಪ್ಪಣ್ಣನವರು, ವಿಧಾನ ಪರಿಷತ್ ಸದಸ್ಯರು ಮಾತನಾಡಿ ಕೋಮು ಸೌಹಾರ್ದತೆಯನ್ನು ಕಾಪಾಡಲು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರಾದ ಶ್ರೀ ಭಾರಿ ಬೆಟ್ಟಪ್ಪ, ಉಪಾಧ್ಯಕ್ಷರಾದ ಶ್ರೀ ನೆಟ್ಟಕಲ್ಲಪ್ಪ, ಶ್ರೀ ವುಂಡೇಕರ ರಮೇಶ, ಕಾಂ.ಯು.ಬಸವರಾಜ್, ಹಾಗೂ ಎಲ್ಐಸಿ ಕಾರ್ಮಿಕರು, ಬ್ಯಾಂಕ್ ನೌಕರರು, ಸಿಐಟಿಯು ಕಾರ್ಮಿಕರು, ಹೆಚ್ಎಂಎಸ್ ಕಾರ್ಮಿಕರು ,ಎಸ್ಎಫ್ಐ, ಡಿವೈಎಫ್ಐ, ಸಮುದಾಯ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕನ್ನಡ ಕ್ರಾಂತಿದಳದ ಸದಸ್ಯರು ಭಾಗವಹಿಸಿ ಪ್ರತಿಜ್ಞೆ ಸ್ವೀಕರಿಸಿದರು.

ಸಂಡೂರು

ಸಂಡೂರು ತಾಲೂಕು ತೋರಣಗಲ್ಲು ಘಟಕದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತೋರಣಗಲ್ಲಿನಲ್ಲಿ ಡಿಸೆಂಬರ್ 7 ರಂದು ಕೋಮು ಸೌಹಾರ್ದತೆಗಾಗಿ ಸುಮಾರು 300 ಜನರ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಸಾಮೂಹಿಕ ಸಂಘಟನೆಗಳು, ಬ್ಯಾಂಕ್ ನೌಕರರು, ಜನತಾದಳದವರು, ಪ್ರಗತಿಪರ ವಿಚಾರವಂತರು ಭಾಗವಹಿಸಿ ಯಶಸ್ವಿಗೊಳಿಸಿದರು. ಕಾರ್ಯಕ್ರಮದ ಮುಕ್ತಾಯದಲ್ಲಿ ಜನರನ್ನುದ್ದೇಶಿಸಿ ಶಾಖೆಯ ಕಾರ್ಯದರ್ಶಿ ಕಾಂ. ಎ.ತಿಮ್ಮಪ್ಪ, ಜನತಾದಳದ ಜಸವರಾಜ, ಡಿವೈಎಫ್ಐನ ಕಾಂ.ಷಣ್ಮುಗಪ್ಪ, ಪ್ರಾಂತ ರೈತ ಸಂಘದ ತಿಪ್ಪೇಸ್ವಾಮಿ, ಬ್ಯಾಂಕ್ ನೌಕರರ ಸಂಘದ ವೇಣುಗೋಪಾಲ ಮಾತನಾಡಿದರು.

ಶಹಾಪುರ ಹಾಗೂ ಸುರಪುರ

ಶಹಾಪುರ ಕೇಂದ್ರದಲ್ಲಿ ಡಿಸೆಂಬರ್ 6 ರಂದು ಕೋಮುಸೌಹಾರ್ದತೆಗಾಗಿ ಎಸ್ಎಫ್ಐ ಮತ್ತು ಡಿವೈಎಫ್ಐ ಮುಖಂಡತ್ವದಲ್ಲಿ ಸುಮಾರು 160 ಜನರು ಮಾನವ ಸರಪಳಿ ನಿರ್ಮಿಸಿ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆ ಕಾಪಾಡುವ ಪ್ರತಿಜ್ಞೆ. ಹಿರಿದ... ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ)ನ ಚನ್ನಪ್ಪ ಆನೆಗುಂದಿ, ಜನತಾದಳದ ಮುಖಂಡರಾದ ಅಯ್ಯಣ್ಣ ಶಿನಗೂ... ಎಸ್ಎಫ್ಐನ ಬೇವಿನ ಕಬ್ಬಿ ಹಾಗೂ ಡಿ... ಎಫ್ಐ ನ ಸೈಯದ್ ಇಬ್ರಾಹಿಂ ಜದೀ... ಮಾತನಾಡಿದರು. ಅದೇ ದಿನ ಸುರಪುರದ... ನಡೆದ ಮಾನವ ಸರಪಳಿ ಕಾರ್ಯಕ್ರಮದ... ಸುಮಾರು 180 ಜನರು ಭಾಗವಹಿಸಿ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು. ಸಭೆಯನ್ನು... ದ್ದೇಶಿಸಿ ಡಿವೈಎಫ್ಐ ನ ಸತ್ಯನಾರಾಯಣ ಹಾಗೂ ಸಿಪಿಐ(ಎಂ)ನ ಚನ್ನಪ್ಪ ಆನೆಗುಂ... ಮಾತನಾಡಿದರು.

ಈ ವಾರ...

*

ನಿಲ್ಲದ ಕೋಮು ಹಿಂಸಾಚಾರದಿಂದಾಗಿ ಹೈದರಾಬಾದ್‌ನ ಹಳೇ ನಗರವನ್ನು ಸೇನೆಯ ವಶಕ್ಕೆ ಒಪ್ಪಿಸಲಾಗಿದೆ. ಇದು ರಾಜ್ಯದ ಕಾನೂನು ಸುವ್ಯವಸ್ಥೆ ಯಂತ್ರ ಹಾಗೂ ಮುಖ್ಯಮಂತ್ರಿ ಡಾ. ಚೆನ್ನಾರೆಡ್ಡಿ ನಾಯಕತ್ವದ ಖಂಡನೆಯಂತೆಯೇ ಸರಿ. ಆಂಧ್ರಪ್ರದೇಶದಲ್ಲಿ ಬೇರು ಬಿಡಲು ಹತಾಶ ಪ್ರಯತ್ನ ನಡೆಸುತ್ತಿರುವ ಬಿಜೆಪಿ, ಎಲ್.ಕೆ. ಅಡ್ವಾನಿಯವರ ರಥಯಾತ್ರೆಗೆ ಸಿಕ್ಕ ಪ್ರತಿಕ್ರಿಯೆಯಿಂದ ಭಾರಿ ಉಬ್ಬಿದಂತಿದೆ. ಆದ್ದರಿಂದ, ಅದು ಕೋಮು ಬಿಗುವನ್ನು ಕಡಿಮೆ ಮಾಡಲು ನೆರವಾಗುವುದೆಂದು ನಿರೀಕ್ಷಿಸಲಾಗದು.

ಹೈದರಾಬಾದ್‌ನ ಪರಿಸ್ಥಿತಿಗೆ ಆಂಧ್ರಪ್ರದೇಶದಲ್ಲಿ ಸ್ವತಃ ಹೇರಲ್ಪಟ್ಟ ನಾಯಕತ್ವ ರಾಹಿತ್ಯತೆ ಕಾರಣವೆನ್ನುವುದಾದರೆ ಆಲಿಘಡ ಮತ್ತು ಉತ್ತರಪ್ರದೇಶದ ಇತರ ಪಟ್ಟಣಗಳಲ್ಲಿ ಭಾರಿ ಹಿಂಸಾಚಾರದ ಅಪಾಯ ಮತ್ತು ಗುಜರಾತ್‌ನ ಅವಿರತ ಹಿಂಸೆ ಇನ್ನೂ ಪ್ರಭಾವ ಬೀರುತ್ತಿರುವ ಅಯೋಧ್ಯೆಯ ಉನ್ಮಾದದ ಪರಿಣಾಮವಾಗಿದೆ.

'ದಿ ಟೈಮ್ಸ್ ಆಫ್ ಇಂಡಿಯಾ, ಡಿ. 11

*

ಹೈದರಾಬಾದ್ ಮತ್ತು ಆಲೀಘಡದಲ್ಲಿ ಮರುಕಳಿಸಿರುವ ಗಲಭೆಗಳು ಪ್ರಜ್ಞಾನಂತರನ್ನೆಲ್ಲಾ ಚಿಂತೆಗೀಡುಮಾಡಬೇಕಾದ ಸುದ್ದಿ. ಬರುಬರುತ್ತಾ ಗುಂಪುಗಳಲ್ಲಿ ಕ್ರೋಧ, ಪ್ರತೀಕಾರ ಮನೋಭಾವ ಬೇರೂರಿ ಸುಪ್ತವಾಗಿದ್ದು ಸ್ಫೋಟಗೊಂಡಿರುವ ನಿದರ್ಶನಗಳಿವು. ರಾಮ ಜನ್ಮ ಭೂಮಿ ಮತ್ತು ಬಾಬರಿ ವಿವಾದ ಅದುಮಿಟ್ಟಿರುವ ಪಾಶವೀ ಶಕ್ತಿಗಳು ಹೊರಬರಲು ನೆರವಾಯಿತಲ್ಲದೆ ಈ ನೆಪದಲ್ಲಿ ವೈಯಕ್ತಿಕ ಸೇಡು ತೀರಿಸಿಕೊಳ್ಳಲು ಆಸ್ಪದವಾಯಿತು. ಧರ್ಮದ ಜತೆಗೆ ರಾಜಕೀಯವನ್ನು ಬೆರೆಸಿ ನಡೆಸುತ್ತಿರುವ ಚದುರಂಗದಾಟದಲ್ಲಿ ಅಖೈರಾಗಿ ಯಾರೇ ಗೆಲ್ಲಲಿ ಇದು ಇದಕ್ಕೆ ಏನೇನೂ ಸಂಬಂಧವಿಲ್ಲದ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿರುವುದು ದುರದೃಷ್ಟಕರ.

'ಪ್ರಜಾವಾಣಿ' ಡಿ.10

*

ದೇಶದ ಕೋಮು ಪರಿಸ್ಥಿತಿ ವೇಗವಾಗಿ ಹದಗೆಡುತ್ತಿದೆ. ಕೋಮುವಾಗಿ ಬಿಗುವು ಕಡಿಮೆಯಿರುವ ಕಡೆ ಕೂಡ ಮತ್ತು ಕಳೆದ ಕೆಲ ವರ್ಷಗಳಿಂದ ಗಲಭೆಗಳಿಲ್ಲದಿದ್ದ ಪ್ರದೇಶಗಳಲ್ಲಿ ಈಗ ಆರಂಭವಾಗಿದೆ. ಹೈದರಾಬಾದ್ ಅದಕ್ಕೊಂದು ಉದಾಹರಣೆ. ತೆಲುಗುದೇಶಂ ಪಕ್ಷದ ಗಲಭೆ ತಡೆಯುವ ಬದ್ಧತೆಯಿಂದಾಗಿ 1984 ರಿಂದ ಅಲ್ಲಿ ಕೋಮು ಗಲಭೆಗಳಿರಲಿಲ್ಲ. ಆದರೆ, ಅದು ಅಧಿಕಾರ ಚ್ಯುತವಾದ ಕೆಲವೇ ತಿಂಗಳಗಳಲ್ಲಿ ಕೋಮು ಭಾವನೆಗಳು ಮತ್ತೆ ತೀವ್ರಗೊಂಡಿವೆ.

'ದಿ ಇಕನಾಮಿಕ್ ಟೈಮ್ಸ್' ಡಿ.11

*

ಬೋಫೋರ್ಸ್ ಪ್ರಕರಣ ಪಡೆದುಕೊಳ್ಳುತ್ತಿರುವ ತಿರುವುಗಳನ್ನು ನೋಡಿದರೆ ಈ ಹಗರಣ ತನಿಖೆಯನ್ನು ಈಗಿನ ಸರಕಾರ ಮುಚ್ಚಿಹಾಕುವುದೇನೋ ಎಂದು ಜನರು ನಂಬುವಂತಾಗಿದೆ. ಕಾನೂನು ಜಾರಿ ಅಧಿಕಾರಿಗಳ ಹೇಳಿಕೆಗಳು ಮಾತ್ರವಲ್ಲ, ಈ ವಿಷಯವನ್ನು ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ನಿಭಾಯಿಸಬಲ್ಲ ಎಂದು ಪ್ರಧಾನಿ ಚಂದ್ರಶೇಖರ್ ಹೇಳಿರುವುದರಿಂದ ಇಂಥ ಭಯ ಇನ್ನಷ್ಟು ಹೆಚ್ಚಾಗಿದೆ.

......ಈ ಹಗರಣವನ್ನು ಮುಚ್ಚಿ ಹಾಕಲು ಕಾಂಗ್ರೆಸ್(ಐ) ಸರಕಾರ ಪ್ರಯತ್ನಿಸಿತ್ತು ಹಾಗೂ ಆ ಮೂಲಕ ನ್ಯಾಯಾಂಗಕ್ಕೆ ಅಡ್ಡಿ ತಂದಿತ್ತು.ಎನ್ನುವುದಕ್ಕೆ ಈಗ ಸಾಕಷ್ಟು ಪುರಾವೆ ಇದೆ. ಇದನ್ನು ಅಂದಿನ ಸರಕಾರದ ಕಟ್ಟಾ ಬೆಂಬಲಿಗರು ತಳ್ಳಿ ಹಾಕಲಾರರು.

'ಇಕನಾಮಿಕ್ ಟೈಮ್ಸ್' ಡಿ.10

*

ಮಂದಿರ ಮಸೀದೆ ವಿವಾದ ಪರಿಹಾರದತ್ತ ಸಾಗುತ್ತಿದೆ ಎಂಬ ನಿರೀಕ್ಷೆ ನುಚ್ಚುನೂರಾಗಿದೆ- ಅಹಮದಾಬಾದ್, ಹೈದರಾಬಾದ್ ಅಲೀಘಡ್ ಘಟನೆಗಳಿಂದ.... ....ಅಯೋಧ್ಯೆಯ ಪೂಜಾ ಸ್ಥಳವನ್ನು ಕೆಡಿಸುವ ಪ್ರಯತ್ನ(ಈ ಪ್ರಯತ್ನವನ್ನು ವಿಫಲಗೊಳಿಸಿ ಒಂದು ದೊಡ್ಡ ಪ್ರಳಯವನ್ನು ತಪ್ಪಿಸಲಾಗಿದೆ) ದೇಶದಲ್ಲಿ ನಡೆಯುತ್ತಿರುವ ಉದ್ರೇಕಕಾರಿ ಅಪಪ್ರಚಾರದಿಂದ ಎಂತಹ ಹುಚ್ಚು ಕೃತ್ಯಗಳಿಗೆ ಪ್ರೋತ್ಸಾಹ ದೊರೆಯುತ್ತಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಉದ್ರೇಕಕಾರಿ ಭಾಷಣಗಳು, ಆಡಿಯೋ, ವಿಡಿಯೋ ಕ್ಯಾಸೆಟ್‌ಗಳು ಅಲ್ಪಸಂಖ್ಯಾತ ಗುಂಪುಗಳ ತತ್ತರಕ್ಕೆ ಇಂಬುಕೊಟ್ಟಿದೆ. ಒಂದಲ್ಲಹಲವಾರು ಹಿಂದೂ ಏತರ ಗುಂಪುಗಳನ್ನು ಕಿಚ್ಚು ಹಾಗೂ ವಿಷಯುಕ್ತ ಭಾಷೆಗಳಲ್ಲಿ ದೂಷಿಸಲಾಗಿದೆ ಇವುಗಳಲ್ಲಿ. ಇದು ಕಾನೂನಿನ ವ್ಯಾಪ್ತಿಗೆ ಬರುವ ಸಂಗತಿ.

--ಇಂಡಿಯನ್ ಎಕ್ಸ್‌ಪ್ರೆಸ್, ಡಿ.12

ಹಿರಿಯರಿಗಾಗಿ ಕಿರಿಯರ ಕಥೆಗಳು--1
ನರಿಯೂ, ಕೊಕ್ಕರೆಯೂ

‘ಹಿರಿಯರಿಗಾಗಿ ಕಿರಿಯರ ಕಥೆಗಳು’ ಇನ್ನು ಮುಂದೆ ಕಾಣಿಸಿಕೊಳ್ಳಲಿರುವ ಹೊಸ ಅಂಕಣ. ಹಿರಿಯರು ಕಿರಿಯರಿಗೆ ದಿನಕ್ಕೊಂದು ಕಥೆ ಹೇಳಬಹುದು. ಆಗ ಅವರು ನಿದ್ದೆ ಮಾಡುತ್ತಾರೆ. ಆದರೆ ಈ ಹಿರಿಯರಿಗಾಗಿ ಕಿರಿಯರ ಕಥೆಗಳು ನಿದ್ದೆ ಮಾಡುತ್ತಿರುವವರನ್ನು ಎಚ್ಚರ ಮಾಡಲು ಹೇಳುವ ಕಥೆಗಳು. ಹಿರಿಯರಿಗೆ ಕಿರಿಯರ ಕಥೆಗಳು ಹೇಳಲೇಬೇಕಾಗಿ ಬಂದ ಸಂದರ್ಭದಲ್ಲೆಲ್ಲಾ ಕಥೆಗಳನ್ನು ‘ಐಕ್ಯರಂಗ’ದಲ್ಲಿ ಹೇಳಲಾಗುತ್ತದೆ. ಈ ಬಾರಿಯ ಕಥೆಯನ್ನು ಗಮನಿಸಿ. ಹಾಗೆ ನಿಮಗೆ ಹೊಳೆದ ಕಥೆಗಳನ್ನು ಬರೆದು ಕಳುಹಿಸಿ...



ಕಥೆ ಕದ್ದವರು: ಮೋನಿ

ಚಿತ್ರ ಕೃಪೆ: ಮೋನಪ್ಪ,ಉದಯವಾಣಿ.

ಕಾಡು. ಆ ಕಾಡಲ್ಲಿ ಒಂದು ಕೊಳ. ಆ ಕೊಳದಲ್ಲಿ ‘ಚಂದ್ರಿ’ ಅಂತ ಒಂದು ಕೊಕ್ಕರೆ ವಾಸವಾಗಿತ್ತು. ನೀರಲ್ಲಿ ನಿಂತುಕೊಂಡು ‘ಅದು ಸಿಗ್ಲಿ ಅದು ಸಿಗ್ಲಿ’ ಅಂತ ದಿನಾ ಧ್ಯಾನ ಮಾಡ್ತಿತ್ತು. ಇದನ್ನು ಅದೇ ಕಾಡಿನಲ್ಲಿದ್ದ ಒಂದು ನರಿ ‘ರಾಜ’ ನೋಡ್ತಾ ಇತ್ತು. ಆದ್ರೆ ಚಂದ್ರಿ ಕೊಕ್ಕರೆಗೂ ರಾಜನರಿಗೂ ಒಂದಕ್ಕೊಂದು ಎಣ್ಣೆ ಸೀಗೆಕಾಯಿ. ಚಂದ್ರಿ ಯಾವಾಗ್ಲೂ ‘ಗುಳುಗುಳು ಬುಳುಬುಳು ’ ಅಂತಾ ಬೈಯೋದು. ಈ ಮಧ್ಯೆ ಒಂದು ಬಕ ಇತ್ತು. ದೇವಿ ಅಂತಾ ಅದ್ರೆಸ್ರು. ಚಂದ್ರಿಗೆ ಪಾಯ್ಸ ಕಂಡ್ರೆ ತುಂಬಾ ಇಷ್ಟ ಅಂತ ಗೊತ್ತಿತ್ತು. ರಾಜ ಹತ್ರ ಓಡೋಗಿ “ ರಾಜ ರಾಜ ನೀನು ರಾಜ ಆಗ್ಬೇಡ. ಚಂದ್ರಿಗೆ ನೀನು ಹಿಂದೆ ಕುಡ್ಸಿದ್ದೆಲ್ಲಾ ಅಥವಾ ಪಾಯ್ಸ ಕೊಟ್ಬುಡು. ನಿನ್ನ ಜೊತೆ ಚೆನ್ನಾಗಿರುತ್ತೆ ನೀ ಹೇಳಿದ್ದೆಲ್ಲಾ ಮಾಡುತ್ತೆ” ಅಂತು.

ರಾಜ ನರಿಗೆ ಯೋಚನೆ ಆಯ್ತು. ಏನು ಮಾಡೋದು ಅಂತ. ಸುಮಾರು ದಿನ ಯೋಚಿಸಿ ನೋಡ್ತು. “ನಾನು ಪಾಯ್ಸ ಚಂದ್ರಿಗೆ ಕೊಟ್ಟರೆ ತಿರುಗಾ ಅದು ನನಗೆ ಸಿಗುತ್ತಾ? ಎಲ್ಲಾ ಅದೇ ಕುಡ್ದು ಬಿಟ್ರೆ” ಅಂತಾ ಯೋಚನೆ ಮಾಡ್ತು. ತಕ್ಷಣ ಅದಕ್ಕೆ ಒಂದು ಉಪಾಯ ಹೊಳೀತು ದೇವಿಗೆ ಹೇಳ್ತು “ ಸರಿ ಕರ್ಕೊಂಡು ಬಾ ಪಾಯ್ಸ ಕೊಡ್ತೀನಿ” ಅಂತ.

ಚಂದ್ರಿ ಕೊಕ್ಕರೆಗೆ ಭಾರಿ ಸಂತೋಷ ಆಗೋಯ್ತು. “ ಪಾಯ್ಸ ಸಿಕ್ತು, ಪಾಯ್ಸ ಸಿಕ್ತು” ಅಂತ ಖುಷಿಯಾಗಿ ಕುಣಿದಾಡ್ತು. ರಾಜ ಹೇಳಿದ್ದಕ್ಕೆಲ್ಲಾ ತಲೆ ಹಾಕ್ತು. ಕೊಳದಿಂದ ಈಚೆ ಬಂದು ಕುಣಿಕೊಂಡು ಕುಣಿಕೊಂಡು ರಾಜ ಹತ್ರ ಬಂತು.

ಪಾಯ್ಸದ ವಾಸ್ನೆ ಗಮಗಮ ಅಂತಾ ಬರ್ತಾ ಇದೆ. ರಾಜ ನರಿ ಒಳಗೋಗಿದ್ದೇ ಪಾಯ್ಸ ತಂತು. ಚಂದ್ರಿ ಕೊಕ್ಕರೆ ಕೊಕ್ಕು ಹಾಕಲಿಕ್ಕೆ ನೋಡುತ್ತೆ. ರಾಜ ನರಿ ಪಾಯ್ಸ ತಟ್ಟೇಲಿ ತಂದು ಬಿಟ್ಟಿದೆ. ಮುಂಚಿನ... ಕುಡಿ ಕುಡಿ ಅನ್ನುತ್ತೆ. ಆದರೆ ಕೈಗೆ ಬಂದದ್ದು ಬಾಯಿಗೆ ಬರಲ್ಲ. ನಾನು ಕುಡಿಯೋದು ಹೂಜೀಲಿ. ಅದರಲ್ಲೇ ಪಾಯ್ಸ ಕೊಡು ಅಂದ್ರೆ ಕೊಡ್ತಾ ಇಲ್ಲ. ತಟ್ಟೇಲಿ ಕುಡಿಯೋಕಾಗಲ್ಲ ಅಂದ್ರೂ.ಬಿಡ್ತಾ ಇಲ್ಲ. ಚಂದ್ರಿ ತಟ್ಟೆ ನೋಡುತ್ತಾ. ಬಾಯಲ್ಲಿ ನೀರು ಸುರಿಸುತ್ತೇ. ಮುಂದೆ..

(ನೀತಿ: ದುಷ್ಟರ ಸಹವಾಸದಿಂದ ದೂರ ಇರಿ. ತಪ್ಪಿ ಹಾಯುತ್ತ ದುರುಳಾಗದಿರಿ...)

Printed and published by P.Ramachandra Rao on behalf of communist Party of India (Marxist), Karnatak a State Committee, 95A, 2nd Cross, Muneshwara Block, Palace Guttahalli, Bangalore - 560003 Phone : 366489. Editor : P. RAMACHANDRA RAO